ವಾರ್ಷಿಕ ಮಹಿಳಾ ವಿಶೇಷ ಸಂಚಿಕೆ

ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮಾರ್ಚ್, ೨೦೨೧ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೧೦ ಸಂಚಿಕೆ: ೨

ಚಂದಾ ರೂ. ೧೫೦/- (೨೦೨೧ರ ಜನವರಿಯಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ. ೨೫೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೯೫೩೧೨ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ದೇಶದ ರಾಜಕೀಯ ಪರಿಸರದಲ್ಲಿ ಇತ್ತೀಚಿಗೆ ಸುತ್ತಲೂ ಕವಿದಿದ್ದ ಕತ್ತಲಲ್ಲಿ ಎರಡು ಬೆಳಕಿನ ಕಿರಣಗಳು ಮೂಡಿವೆ. ಮೊದಲು, ಗಂಭೀರ ಅನಾರೋಗ್ಯದಿಂದ ಬಳಲುತ್ತಿದ್ದ ಮತ್ತು ಸಮಾಜದ ಹಲವು ಗಣ್ಯರನ್ನೊಳಗೊಂಡ ತಮ್ಮ ಹಲವು ಸಹ ಆರೋಪಿಗಳೊಂದಿಗೆ ಸರ್ಕಾರದಿಂದ ಒಂದು ಸಣ್ಣ ಆರೋಪ ಪಟ್ಟಿ ಸಲ್ಲಿಕೆಯೂ ಇಲ್ಲದೆ ಎರಡೂವರೆ ವರ್ಷಗಳಿಂದ ಸೆರೆಯಲ್ಲಿರುವ ಎಂಬತ್ತು ವರ್ಷಗಳಿಗೂ ಹೆಚ್ಚಿನ ವಯಸ್ಸಿನ ತೆಲುಗು ಕವಿ ವರವರರಾವ್ ಅವರಿಗೆ ತಿಂಗಳುಗಟ್ಟಲೆ ಕಾಲ ಪ್ರಭುತ್ವ ಒಡ್ಡಿದ್ದ ತಕರಾರುಗಳ ನಂತರ ಅಂತೂ ಬಾಂಬೆ ಉಚ್ಚ ನ್ಯಾಯಾಲಯ ವೈದ್ಯಕೀಯ ಕಾರಣಗಳ ಮೇಲೆ ಆರು ತಿಂಗಳ ಕಾಲ ಜಾಮೀನು ನೀಡಿರುವ ಸುದ್ದಿ ಬಂದು ನಾಗರಿಕ ಹಕ್ಕುಗಳ ವಿಷಯದಲ್ಲಿ ಒಂಚೂರಾದರೂ ಭರವಸೆಯ ಬೆಳಕು ಮೂಡಿಸಿದ್ದರೆ, ನಂತರ ಹೊರಬಿದ್ದ ದಿಶಾ ರವಿ ಪ್ರಕರಣದಲ್ಲಿ ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಧರ್ಮೇಂದ್ರ ರಾನಾ ಅವರು 'ಆರೋಪಿ'ಗೆ ಜಾಮೀನು ನೀಡಿ ಇತ್ತ ತೀರ್ಪಿನ ಪಠ್ಯ ಸದ್ಯದ ಪರಿಸ್ಥಿತಿಯಲ್ಲಿ ರೋಮಾಂಚನವನ್ನೇ ಉಂಟು ಮಾಡಿದೆ ಎಂದು ಹೇಳಬೇಕು.

ಈ ಎರಡೂ ಪ್ರಕರಣಗಳು ಇನ್ನೂ ಆರಂಭಿಕ ಹಂತದಲ್ಲಿದ್ದು, ಅಂತಿಮ ಇತ್ಯರ್ಥಕ್ಕೆ ಮುನ್ನ ಇನ್ನೂ ಸಾಕಷ್ಟು ತನಿಖಾ ಪ್ರಕ್ರಿಯೆ ನಡೆಯಬೇಕಾಗಿದೆಯಾದರೂ, ಈ ತೀರ್ಪುಗಳು ಪ್ರಭುತ್ವವು ರಾಷ್ಟ್ರದಲ್ಲಿ ಈಗ ಸೃಷ್ಟಿಸಿರುವ ಉಸಿರು ಕಟ್ಟಿಸುವ ವಾತಾವರಣ ಒಂದಿಷ್ಟು ನಿರಾಳವಾಗಿದೆ ಎನ್ನಬಹುದು. ಪ್ರಭುತ್ವ ಎಸಗುವ ಅನ್ಯಾಯಗಳ ವಿರುದ್ಧ ಧ್ವನಿ ಎತ್ತ ಬಯಸುವವರು ಈಗ ಒಂದಿಷ್ಟು ಹೆಚ್ಚಿನ ಅಭಯದೊಂದಿಗೆ ತಮ್ಮ ಹೋರಾಟಗಳನ್ನು ಮುಂದುವರೆಸಬಹುದು. ಪ್ರಜಾಪ್ರಭುತ್ವ ಜೀವಂತವಾಗಿರುವ ಲಕ್ಷಣವಿದು.

ಈ ಎರಡೂ ಪ್ರಕರಣಗಳು ದೇಶದ್ರೋಹದ ಕಾನೂನು ಬಳಸಿ ಹೂಡಲಾಗಿರುವ ಪ್ರಕರಣಗಳು. ಮೊದಲಿಗೇ ಹೇಳಬೇಕಾದ ಸಂಗತಿ ಎಂದರೆ, ಬ್ರಿಟಿಷ್ ಪ್ರಭುತ್ವ ತನ್ನ ವಿರುದ್ಧ ಭಾರತೀಯರು ನಡೆಸಿದ್ದ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ರೂಪಿಸಿದ್ದ ಈ ಕಾನೂನನ್ನು ಸ್ವಾತಂತ್ರ್ಯೋತ್ತರ ಭಾರತದ ಪ್ರಭುತ್ವವೂ ಯಥಾವತ್ತಾಗಿ ಮುಂದುವರೆಸಿಕೊಂಡು ಬಂದಿದೆ ಎಂದರೆ ಸ್ವತಂತ್ರ ಭಾರತ ಕಟ್ಟಿಕೊಂಡ ಪ್ರಭುತ್ವದ ಕಲ್ಪನೆಯಲ್ಲೇ ಏನೋ ಜನವಿರೋಧಿಯಾದದ್ದು, ತನ್ನ ರಚನೆಗೆ ಕಾರಣವಾದ ಪ್ರಜಾಶಕ್ತಿಯ ಬಗ್ಗೆಯೇ ಸಂಶಯ ತಾಳುವ ದೌರ್ಬಲ್ಯ ಇರುವುದು ಗೊತ್ತಾಗುತ್ತದೆ. ಅದೇನೇ ಇರಲಿ, ಈ ಕಾನೂನನ್ನು ಈವರೆಗಿನ ಆಡಳಿತಗಾರರು ದೇಶದ ಭದ್ರತೆಗೆ ತೀವ್ರ ಗಂಭೀರ ಅಪಾಯ ಎದುರಾದ ಸಂದರ್ಭಗಳಲ್ಲಿ ಮಾತ್ರ ಬಳಸುತ್ತಿದ್ದರಾದರೆ, ದೇಶಭಕ್ತಿಯ ಹೊಸ ಉಬ್ಬರವೇರಿ ಅಧಿಕಾರಕ್ಕೆ ಬಂದ ಮೋದಿಯವರ ನೇತೃತ್ವದ ಸರ್ಕಾರ, ವಿಶೇಷವಾಗಿ ಅದರ ಎರಡನೇ ಅವಧಿಯಲ್ಲಿ ಯಾವುದೇ ಕಾರಣಕ್ಕಾದರೂ ತನ್ನ ವಿರುದ್ಧ ದನಿ ಎತ್ತಿದವರ ಮೇಲೆಲ್ಲ ಇದನ್ನು ಬೆದರಿಕೆಯ ಅಸ್ತ್ರವಾಗಿ ಬಳಸುತ್ತಾ ಬಂದು ಈವರೆಗೆ ಸಾವಿರಾರು ದೇಶದ್ರೋಹದ ಪ್ರಕರಣಗಳು ದಾಖಲಾಗಿವೆ. ಈಗ ದೇಶಭಕ್ತಿ ಎಂಬುದು ಪ್ರಭುತ್ವಭಕ್ತಿಯಾಗಿ ಮಾರ್ಪಾಡಾಗಿ ಪ್ರಜಾಪ್ರಭುತ್ವ ಎಂಬುದೇ ನಾವೇ ಕೊರಳಿಗೆ ಕಟ್ಟಿಕೊಂಡ ಉರುಳಾಗಿದೆಯೇನೋ ಎಂದು ಪರಿತಪಿಸುವಂತಾಗಿದೆ. ಇಂಥಹ ಸಂದರ್ಭಗಳಲ್ಲಿ ಪ್ರಜೆಗಳ ನೆರವಿಗೆ ಬರಲು ನಮ್ಮ ಸಂವಿಧಾನ ರೂಪಿಸಿರುವ ಹಲವು ಸಂಸ್ಥೆಗಳು, ಮುಖ್ಯವಾಗಿ ನ್ಯಾಯಾಂಗ ಪ್ರಭುತ್ವದ ಒಂದು ಅಂಗದಂತೆ ತೋರತೊಡಗಿರುವ(ಅಥವಾ ಅದನ್ನು ಹಾಗೆ ಪಳಗಿಸಲಾಗಿರುವ) 'ಹರ ಕೊಲ್ಲಲ್ ಪರ ಕಾಯ್ವನೆ?' ಎಂಬ ಈ ನಿರ್ಣಾಯಕ ಸಂದರ್ಭದಲ್ಲಿ ಈ ಎರಡೂ ತೀರ್ಪುಗಳು ಸದ್ಯದ ಪ್ರಭುತ್ವ ಚಾಲ್ತಿಗೆ ತಂದಿರುವ ದೇಶಭಕ್ತಿ ಮತ್ತು ದೇಶದ್ರೋಹದ ಕಲ್ಪನೆಗಳನ್ನು ತೀವ್ರ ಪರಿಶೀಲನೆಗೆ ಒಳಪಡಿಸಲು ಒತ್ತಾಯಿಸುವಂತೆ ಮಾಡಿವೆ.

ವರವರ ರಾವ್ ಪ್ರಕರಣದ ಕೆಲ ಆರೋಪಿಗಳ ಕಂಪ್ಯೂಟರ್‌ಗಳಿಗೆ ಸರ್ಕಾರದ ಕಡೆಯಿಂದಲೇ ಸಂಶಯಾಸ್ಪದ ಮಾಹಿತಿಯನ್ನು ಕಳ್ಳ ಮಾರ್ಗದ ಮೂಲಕ ರವಾನಿಸಿ ಮೊಕದ್ದಮೆಯನ್ನು ಸೃಷ್ಟಿಸಲಾಗಿದೆ ಎಂಬ ಸುದ್ದಿ ಪ್ರಚಲಿತದಲ್ಲಿಯಾದರೂ, ಆ ಪ್ರಕರಣ ಜಟಿಲವಾಗಿದ್ದು ಅದರ ಚರ್ಚೆ ಇಲ್ಲಿ ಬೇಡ. ಆದರೆ ದಿಶಾ ರವಿ ಪ್ರಕರಣದ ಜಾಮೀನು ತೀರ್ಪು ಹೇಗೆ ಪ್ರಭುತ್ವ ತನ್ನ ಅಧೀನದ ಪೋಲಿಸ್ ವ್ಯವಸ್ಥೆಯ ಮೂಲಕ ಭಿನ್ನಮತವನ್ನು ಸೆದೆಬಡಿಯುವ ವ್ಯೂಹವನ್ನು ರಚಿಸಬಹುದು ಎಂಬುದನ್ನು ಬಹು ಸರಳವಾಗಿ ವಿವರಿಸುವಂತಿದೆ. ತೀರ್ಪು ದಿಶಾ ಅವರು ರೈತ ಚಳುವಳಿಗೆ ಡಿಜಿಟಲ್ ವೇದಿಕೆಯ ಮೂಲಕ ಜಾಗತಿಕ ಬೆಂಬಲ ಸಂಘಟಿಸಲು ರೂಪಿಸಿದ ಟೂಲ್‌ಕಿಟ್ ಎಂಬ ಮಾರ್ಗದರ್ಶಿ ಕೋಶವನ್ನೇ ನೆಪವಾಗಿಟ್ಟುಕೊಂಡು ದೇಶದ್ರೋಹದ ಗಂಭೀರ ಆರೋಪದ ಮೇಲೆ ಅವರನ್ನು ಬೆಂಗಳೂರಿನಿಂದ ಬಂಧಿಸಿಕೊಂಡು ಹೋಗಿ ದೆಹಲಿಯ ಸೆರೆಮನೆಗೆ ದೂಡುವ ಮೂಲಕ ಸರ್ಕಾರಕ್ಕೆ ದೊಡ್ಡ ತಲೆನೋವಾಗಿರುವ ರೈತ ಚಳುವಳಿಯ ವಿಶ್ವಾಸಾರ್ಹತೆಯನ್ನು ಭಂಗಗೊಳಿಸಲು ಪ್ರಭುತ್ವ ಪೋಲೀಸರ ಮೂಲಕ ಮಾಡಿರಬಹುದಾದ ಪಿತೂರಿ ಎಂದು ಸಂಶಯಿಸಲು ಪೂರಕವಾದ ಹಲವು ಸಂಗತಿಗಳನ್ನು ಹೇಳುತ್ತದೆ. ಏಕೆಂದರೆ, ಪೋಲೀಸರು ಮಂಡಿಸಿರುವ ದೇಶದ್ರೋಹದ ಆಪಾದನೆಗೆ ಅವರು ನೀಡಿರುವ ಪುರಾವೆಗಳು ಹುರುಳಿಲ್ಲದವು ಎನ್ನುತಾ ಈ ತೀರ್ಪು ಆ ಹುಡುಗಿಯ ಬಂಧನ ಪ್ರಜೆಯ ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಅದಕ್ಕೆ ಬೆಂಬಲ ಸಂಘಟಿಸುವ ಸ್ವಾತಂತ್ರ್ಯದ ಉಲ್ಲಂಘನೆಯಾಗಿದೆ ಎಂದು ಘೋಷಿಸುವ ಮೂಲಕ ಪ್ರಜಾಪ್ರಭುತ್ವದ ಅರ್ಥವನ್ನು ಈ ಸರ್ಕಾರಕ್ಕೆ ವಿಷದಪಡಿಸಿದೆ.

ಸದ್ಯದ ಪ್ರಭುತ್ವ ಜನವರಿ ೨೬ರಂದು ಕೆಂಪುಕೋಟೆಯಲ್ಲಿ ನಡೆದ ದುರ್ಘಟನೆಗೆ ಕಾರಣವಾದವರನ್ನು, ಗೊತ್ತಿದ್ದೂ ದೆಹಲಿ ಪ್ರವೇಶಿಸಲು ಬಿಟ್ಟು ನಂತರ ಅದರ ಹೊಣೆಯನ್ನು ರೈತ ಚಳುವಳಿಯ ನಾಯಕರ ಮೇಲೆ ಹೊರಿಸಿ ನಡೆಸಿರುವ ರಾಜಕಾರಣದ ಉದ್ದೇಶವಾದರೂ ಏನು? ಕೃಷಿ ಕಾಯಿದೆಗಳನ್ನು ರೈತರು ಸಾವು ಬದುಕಿನ ಪಣವೊಡ್ಡಿ ನಡೆಸಿರುವ ಪ್ರತಿಭಟನೆಯ ನಡುವೆಯೂ ಹಠಕ್ಕೆ ಬಿದ್ದಂತೆ ಅವುಗಳ ಪರವಾಗಿ ಸರ್ಕಾರ ನಿಂತಿರುವುದರ ಮರ್ಮವಾದರೂ ಏನು? ಇದರ ಮರ್ಮ ೨೦೨೧-೨೨ರ ಮುಂಗಡ ಪತ್ರದ ಮೇಲಿನ ಚರ್ಚೆಯಲ್ಲಿ ಪ್ರಧಾನಿ ಮೋದಿಯವರು ಮುಕ್ತಕಂಠದೊಂದಿಗೆ ಜಪಿಸಿದ ಖಾಸಗೀಕರಣದ ಮಂತ್ರದಲ್ಲಿದೆ. ಇದಕ್ಕೆ ಕುಮ್ಮಕ್ಕು ಎಲ್ಲಿಂದ ಎಂಬುದು ಮತ್ತು ಸರ್ಕಾರ ಯಾವ ಶಕ್ತಿಗಳ ಕೈವಶವಾಗುತ್ತಿದೆ ಎಂಬುದನ್ನು ಹೊಸಕೃಷಿ ಕಾಯಿದೆಗಳ ಸ್ವರೂಪವೇ ಸ್ಪಷ್ಟಪಡಿಸುತ್ತಿವೆ. ದೇಶ ಕೋವಿಡ್ ದಾಳಿಯಿಂದ ತತ್ತರಿಸಿ ಸರ್ಕಾರ ಮತ್ತು ಜನ ಆರ್ಥಿಕವಾಗಿ ಕಂಗಾಲಾಗಿದ್ದ ಕಳೆದ ಒಂದು ವರ್ಷದಲ್ಲಿ ಈ ಶಕ್ತಿಗಳು ತಮ್ಮ ಸಂಪತ್ತನ್ನು ಶೇ.೩೫ರಷ್ಟು ಹೆಚ್ಚಿಸಿಕೊಂಡವು ಎಂಬ ವರದಿ ಈ ಖಾಸಗೀಕರಣದ ರಾಜಕಾರಣದ ಬಗ್ಗೆ ಎಲ್ಲವನ್ನೂ ಹೇಳುತ್ತದೆ.

ಮಾರ್ಚ್ ೨೩ ಸಮಾಜವಾದಿ ನಾಯಕ ರಾಮಮನೋಹರ ಲೋಹಿಯಾ ಅವರ ಜನ್ಮದಿನ. ಇದರ ನೆಪದಲ್ಲಾದರೂ ನಾವು ಅವರ ಒಂದು ಮಾತನ್ನು ನೆನಪಿಸಿಕೊಳ್ಳಬೇಕಿದೆ. ಅದೆಂದರೆ ಅದಕ್ಷ ಮತ್ತು ಭ್ರಷ್ಟ ಸಾರ್ವಜನಿಕ ರಂಗಕ್ಕೆ ಉತ್ತರ ಖಾಸಗೀಕರಣವಲ್ಲ. ಏಕೆಂದರೆ ಖಾಸಗಿ ಬಂಡವಾಳವೆನ್ನುವುದು ತನ್ನ ಮೂಲ ಗುಣದಿಂದಲೇ, ಅದರ ಮೊದಲ ಕಾಳಜಿ ಗರಿಷ್ಟ ಲಾಭಕೋರತನ; ನಂತರವಷ್ಟೇ ಸಾರ್ವಜನಿಕ ಸೇವೆ. ಅದು ಬೆಳೆಯುವುದು ಜನರಿಗೆ ಸುಖ-ಸೌಲಭ್ಯಗಳ ಮುಕ್ತ ವಾತಾವರಣದ ಆಸೆ ಹುಟ್ಟಿಸುವ ಮೂಲಕ. ಆದರೆ ಮುಕ್ತ ಮಾರುಕಟ್ಟೆಯ ಜಾಗತೀಕರಣ ಹುಟ್ಟು ಹಾಕಿದ ಇಂತಹ ಮಿತಿಯಿಲ್ಲದ ಆಸೆ ದಾಹವಾಗಿ ವ್ಯಕ್ತಿ, ಕುಟುಂಬ ಸಮಾಜ ಮತ್ತು ಜೀವಪರಿಸರಗಳಿಗೆ ಏನು ಮಾಡಿದೆ ಎಂಬುದರ ಬಗ್ಗೆ ಒಮ್ಮೆ ನಾವು ಆಳವಾಗಿ ಯೋಚಿಸಬೇಕಿದೆ. ಆದುದರಿಂದ ರೈತ ಚಳುವಳಿಯೇ ನೆಪವಾಗಿ (ಅದು ಈಗ ಇರುವ ಸ್ವರೂಪದಲ್ಲಿ ಯಶಸ್ವಿಯಾಗುತ್ತದೋ ಇಲ್ಲವೋ ಬೇರೆ ವಿಷಯ) ದೇಶದ ಸಾರ್ವಜನಿಕ ರಂಗವನ್ನು ಸಂಪತ್ತಿನ ಉತ್ಪಾದನೆಯೂ ಸೇರಿದಂತೆ ತನ್ನ ಸಮಗ್ರ ವಿಕೇಂದ್ರೀಕರಣ ತಂತ್ರದ ಮೂಲಕ ಪುನಾರಚಿಸಿ ಅದರ ದಕ್ಷ ನಿರ್ವಹಣೆಗೆ ಅನುವು ಮಾಡಿಕೊಡುವ ಹೊಸ ಸಮಾಜವಾದದ ಬಗ್ಗೆ ಯೋಚಿಸಬೇಕಿದೆ. ಕಾಂಗ್ರೆಸ್‌ನ ಹರಕಲು ಸಮಾಜವಾದಕ್ಕೆ ಪ್ರತಿಯಾಗಿ ಲೋಹಿಯಾ ಮಂಡಿಸಿದ್ದ ' ಆಂತರಿಕ ಪ್ರಶಾಂತಿ ಮತ್ತು ಬಾಹ್ಯ ಬಂಧುತ್ವವನ್ನು ಸೃಷ್ಟಿಸುವ ಮಿತಿಗಳುಳ್ಳ ಸುಖದ ಬದುಕಿನ ಆದರ್ಶವುಳ್ಳ ಸಮಾಜವಾದದ ಕೆಲವಾದರೂ ಸೂತ್ರಗಳು ನಮಗೆ ಇಲ್ಲಿ ನೆರವಾಗಬಹುದು.

ಸಂಪಾದಕ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಹತ್ತನೇ ವರ್ಷದ ಮೊದಲ ಸಂಚಿಕೆ ವೈವಿಧ್ಯಮಯವಾಗಿದೆ. ದಿನೇಶ್ ಅಮೀನ್‌ಮಟ್ಟುರವರ ಮಾಧ್ಯಮಗಳ ಉದ್ಯಮೀಕರಣ , ಪ್ರೊಫೆಸರ್ ಡಿ ಎಸ್ ಪೂರ್ಣಾನಂದರ ಸಾಮಾಜಿಕ ಮಾಧ್ಯಮಗಳೋ ಸಾಮಾಜಿಕ ಕೇಡುಗಳೋ , ಆಕಾರ್ ಪಟೇಲರ ನೋಟದ ರಾಷ್ಟ್ರ ರಾಜಕಾರಣ,ವಿಜಯ್ ತ್ರಿವೇದಿಯವರ ಬದಲಾಗುತ್ತಿರುವ ಆರೆಸ್ಸೆಸ್‌ನ ಹೊಸ ಅಧ್ಯಯನ, ವೆಂಡಿ ಓರೆಂಟ್‌ರವರ ಸಾಂಕ್ರಾಮಿಕ ರೋಗ ಪ್ರಸಾರದ ಭೀಕರತೆ, ಮಹಾಂತೇಶ್ ಓಶಿಮಠರ 'ತೊರೆಯೊಂದರ ಆತ್ಮ ನಿವೇದನ' ಜೊತೆಗೆ ಮಾಮೂಲಿ ಅಂಕಣಗಳು ಎಲ್ಲವೂ ಒಂದಕ್ಕಿಂತ ಒಂದು ವಿದ್ವತ್‌ಪೂರ್ಣವಾಗಿವೆ. ಈ ಸಂಚಿಕೆಯ ಓದಿನ ಹಿನ್ನೆಲೆಯಲ್ಲಿ ನಮ್ಮ ದೇಶದ ಸ್ಥಿತಿ ನೋಡಿ ದಿಗಿಲಾಗುತ್ತಿದೆ. ಆರೆಸ್ಸೆಸ್ ಅಜೆಂಡಾವೊಂದನ್ನೇ ಇಟ್ಟುಕೊಂಡು ಆಡಳಿತ ನಡೆಸುತ್ತಿರುವ ಒಕ್ಕೂಟ ಸರ್ಕಾರದ ಮುಂದಿನ ನಡೆಗಳ ಬಗ್ಗೆ ನಡುಕ ಹುಟ್ಟುತ್ತಿದೆ. ಇದೆಲ್ಲವನ್ನೂ ನೋಡಿಯೂ ಒಗ್ಗೂಡದಿರುವ ವಿಪಕ್ಷಗಳ ಹೊಣೆಗೇಡಿತನ ಕಂಡು ಸಿಟ್ಟು ಬರುತ್ತಿದೆ. ಇವೆಲ್ಲವುಗಳ ಬಗ್ಗೆ ನೀವು ನೀಡುತ್ತಿರುವ ಒಳ ನೋಟದ ಅರಿವು ಅಧಿಕಾರಸ್ಥರಿಗೆ ಬರುವುದೆಂತು?

–ಎನ್.ಆರ್. ವಿಶುಕುಮಾರ್, ಬೆಂಗಳೂರು

ಫೆಬ್ರುವರಿ ಸಂಚಿಕೆಯ ಸಂಪಾದಕೀಯದಲ್ಲಿ ನೀವು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇವತ್ತು ಎಲ್ಲರನ್ನೂ ಕಾಡುತ್ತಿವೆ. ಬಸವಣ್ಣನ ಅನುಯಾಯಿಗಳೆಂದು ಹೇಳಿಕೊಳ್ಳುತ್ತಾ ಇವತ್ತು ಒಂದೊಂದು ಒಳಪಂಗಡದ ಮುಖಂಡತ್ವನ್ನು ವಹಿಸಿಕೊಂಡು ರಾಜಕಾರಣದ ಮುನ್ನೆಲೆಗೆ ಬರಲು ಹವಣಿಸುತ್ತಿದ್ದಾರೆ. ನಮ್ಮ ಹೆಗಲ ಮೇಲೆ ಬಾರುಕೋಲು ಭಕ್ತರ ಕೈಗೆ ಕುಡುಗೋಲು ಬರುತ್ತವೆ ಎಂಬ ಮಾತು ಕೇಳಿದರೆ ಹೆದರಿಕೆಯಾಗುತ್ತಿದೆ. ಇವರು ಎತ್ತ ಸಾಗುತ್ತಿದ್ದಾರೆ?

–ರಾಜ ಸಿರಿಗೆರೆ, ಸಿರಿಗೆರೆ

ಸರಕಾರಿ ಇಲಾಖೆಗಳು ಒಂದೊಂದಾಗಿ ಖಾಸಗಿಯವರ ಪಾಲಾಗುತ್ತಿರುವ ಸಂದರ್ಭದಲ್ಲಿ, ಪ್ರಭಾವಿ ಜಾತಿಗಳ ಮಠಾಧೀಶರು ಮೀಸಲಾತಿಗಾಗಿ ಬೀದಿಗಿಳಿದಿರುವದು ಸಂವಿಧಾನದ ಮೂಲ ಆಶಯವನ್ನೇ ಅಣಕಿಸುವಂತಿದೆ. ಇನ್ನೊಂದೆಡೆ ಗ್ರಾಮ ಪಂಚಾಯ್ತಿ ಚುನಾವಣೆಯ ಸಂದರ್ಭದಲ್ಲಿ ದುಡ್ಡಿಗೆ ಹರಾಜಾದ ರೀತಿ ಪ್ರಜಾಪ್ರಭುತ್ವ ವ್ಯವಸ್ಥೆಯು ಗೆದ್ದಲು ಹಿಡಿದಿರುವುದರ ದ್ಯೋತಕವಾಗಿದೆ. ಇವೆರಡೂ ಅನಿಷ್ಟಗಳ ಕುರಿತು ಸಂಪಾದಕೀಯ ಸಮಯೋಚಿತ.

ಕಾಡಿನ ನಡುವೆ ಹರಿವ ತೊರೆಯೊಂದು ಮನುಷ್ಯನ ಅಭಿವೃದ್ಧಿಯ ಲಾಲಸೆಗೆ ಸಿಲುಕಿ ಅವನತಿಯ ಅಂಚಿಗೆ ತಲುಪಿರುವ ದುರಂತ ಕಥನ ಹೇಳುವ ಮಹಾಂತೇಶ ಓಷಿಮಠ ಅವರ ಕಥಾ–ಪ್ರಬಂಧ "ತೊರೆಯೊಂದರ ಆತ್ಮ ನಿವೇದನೆ" ನಿಜಕ್ಕೂ ಒಂದು ಅನನ್ಯ ರಚನೆ. ಕಾಲಾಂತರದಲ್ಲಿ ಘಟಿಸುವ ಮಹತ್ವದ ಬೆಳವಣಿಗೆಗಳ ಮೂಲಕ ತೊರೆ ತನ್ನ ಇಂದಿನ ದುರ್ಗತಿಗೆ ಕಾರಣಗಳನ್ನು ದಾಖಲಿಸುತ್ತಾ ಸಾಗುತ್ತದೆ. ಪ್ರಕೃತಿಯನ್ನು ಅದರ ಪಾಡಿಗೆ ಬಿಟ್ಟುಬಿಡುವುದೇ ನಿಜವಾದ ಪರಿಸರ ಸಂರಕ್ಷಣೆ ಎಂಬುದನ್ನು ನಾವೆಲ್ಲರೂ ಮನಗಾಣಬೇಕಿದೆ.

–ಸೋಮು, ಹುಬ್ಬಳ್ಳಿ

ಈ ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟಿಸಿರುವ , ನೀವು ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗಕ್ಕೆ ಬರೆದಿರುವ ಪತ್ರ ಅತ್ಯಂತ ಸಮಯೋಚಿತ ಸಲಹೆಗಳಿಂದ ಕೂಡಿದೆ. ಮೀಸಲಾತಿ ಪದ್ಧತಿಯ ಸ್ಥಿತಿಗತಿಗಳನ್ನು ಎಲ್ಲ ಮಗ್ಗಲುಗಳಿಂದ ಪುನರ್ವಿಮರ್ಶೆಗೊಳಪಡಿಸುವ ಅಗತ್ಯ ಮತ್ತು ಧೈರ್ಯ ಇಂದು ಬಹಳ ಜರೂರಾಗಿದೆ. ಪತ್ರದ ಕಡೆಯಲ್ಲಿ ನೀವು ಕೇಳಿದ ಪ್ರಶ್ನೆಗೆ ಮೀಸಲಾತಿಯ ನಡೆ ಅಂಬೇಡ್ಕರ್ ಆಶಯದಂತೆ " ಜಾತಿ ವಿನಾಶ" ದತ್ತ ಇಲ್ಲ , ಬದಲಿಗೆ ಅದರ ವಿರುದ್ಧ ದಿಕ್ಕಿನಲ್ಲಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ .

–ಎಚ್. ಆರ್. ಬಸವರಾಜು, ಬೆಂಗಳೂರು

ಪತ್ರಿಕೆಯ ಸಮಾಜವಾದದ ವಿಶಿಷ್ಟತೆ ಎಂದರೆ ಅದು ಧರ್ಮವನ್ನೂ ಒಳಗೊಂಡಿರುವುದು. ಈ ದೃಷ್ಟಿಯಿಂದ ಫೆಬ್ರುವರಿ ಸಂಚಿಕೆಯಲ್ಲಿನ ರಾಮಕೃಷ್ಣ ಪರಮಹಂಸರನ್ನು ಕುರಿತ ಲಕ್ಷ್ಮೀಶ ತೋಳ್ಪಾಡಿಯವರ ಲೇಖನ ತನ್ನ ವಿಶೇಷ ಒಳನೋಟಗಳಿಂದ ಗಮನ ಸೆಳೆಯುತ್ತದೆ. ಇದು ಇದೇ ಸಂಚಿಕೆಯಲ್ಲಿನ ಹಿಂದೂ ರಾಷ್ಟ್ರ ರಾಜಕಾರಣ ಕುರಿತ ಆಕಾರ್ ಪಟೇಲ್‌ರ ಪುಸ್ತಕದ ಬಗೆಗಿನ ಬಿ.ಎಸ್. ದಿವಾಕರರ ಲೇಖನ ಮತ್ತು ಆರೆಸ್ಸೆಸ್ ಕುರಿತಂತೆ ವಿಜಯ್ ತ್ರಿವೇದಿಯವರೊಡನೆಯ ಮಾತುಕತೆ ಒಂದು ಹಿನ್ನೆಲೆ ಒದಗಿಸುವಂತಿದೆ.

–ಡಾ. ಎಂ.ಆರ್ ಮಹಾಬಲೇಶ್ವರ, ಮಂಗಳೂರು

ನಿಮ್ಮ ಸಂಪಾದಕೀಯ ಮತ್ತು ಇತರ ಲೇಖನಗಳನ್ನು ಓದಿ ಓದುಗರು ಬೆಳೆಸಿಕೊಂಡಿರುವ ವೈಚಾರಿಕತೆ, ರಾಜಕೀಯ ಪ್ರಜ್ಞೆ, ವಿಷಯ ವಿಶ್ಲೇಷಣಾ ಸಾಮರ್ಥ್ಯಗಳನ್ನು ಬೆಳೆಸಿಕೊಂಡಿರುವುದನ್ನು ಅಳೆಯಲು ಯಾವ ಮಾಪಕಗಳೂ ಇಲ್ಲ. ಆದರೆ ಅದು ಮಾಡುವ ಪ್ರಭಾವವನ್ನು ಮಾಡಿಯೇ ಮಾಡುತ್ತದೆ. ಅದು ಗೊತ್ತಾಗುವುದು ನಿಧಾನಕ್ಕಷ್ಟೆ.

–ರೂಪ ಹಾಸನ, ಹಾಸನ

ಫೆಬ್ರುವರಿ ಸಂಚಿಕೆಯಲ್ಲಿನ ನಿಮ್ಮ ಬಿಡಿ ಟಿಪ್ಪಣಿಗಳಲ್ಲಿ ಬರೆದಿರುವಂತೆ ನಿರ್ದೇಶಕ ಟಿ ಎಸ್ ನಾಗಾಭರಣ ಈಗ ಕನ್ನಡ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಲ್ಲ. ಅವರೀಗ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು. ೨೦೧೩ರಲ್ಲಿ ಅವರು ಕನ್ನಡ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಹಳೆಯ ಚಿತ್ರಗಳನ್ನು ಸಂರಕ್ಷಿಸಲು ಚಲನಚಿತ್ರ ಭಂಡಾರ ಸ್ಥಾಪನೆಗೆಂದು ಬಿಡಿಎಯಿಂದ ಒಂದು ಕೋಟಿ ರೂಪಾಯಿಗಳ ಅನುದಾನ ಮುಂಜೂರು ಮಾಡಿಸಿಕೊಂಡರು. ಆದರೆ ಅದು ಸ್ಥಾಪನೆ ಆಗಲಿಲ್ಲ. ಅವರ ನಂತರ ತಾರಾ ಅನುರಾಧಾ, ರಾಜೇಂದ್ರ ಸಿಂಗ್ ಬಾಬು, ನಾಗತಿಹಳ್ಳಿ ಚಂದ್ರಶೇಖರ ಅಧ್ಯಕ್ಷರಾದರು. ಈ ಭಂಡಾರ ಸ್ಥಾಪಿಸಲು ಈ ಯಾರೊಬ್ಬರೂ, ಹಣ ಇದ್ದರೂ ಪ್ರಯತ್ನಿಸಲಿಲ್ಲ. ಎಲ್ಲರೂ ಅಕಾಡೆಮಿಯನ್ನು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧೀನ ಸಂಸ್ಥೆಯಂತೆ ನಿರ್ವಹಿಸಿಕೊಂಡು ಬಂದಿದ್ದಾರೆ.

ಇನ್ನು ರಾಜ್ ಕುಮಾರ್ ಸಿಗರೇಟು ಸೇದುವ ದೃಶ್ಯವಿರುವ ಕೊನೆಯ ಚಿತ್ರ 'ಕರುಣೆಯೇ ಕುಟುಂಬದ ಕಣ್ಣು (೧೯೬೨) ಅಲ್ಲ. ಅದು, 'ವಾತ್ಸಲ್ಯ'(೧೯೬೫) ನೀವು ಅಭಿಪ್ರಾಯಪಟ್ಟಂತೆ. ಕನ್ನಡಿಗರಿಗೆ ಹಳೆಯ ಚಿತ್ರಗಳ ವ್ಯ ತಿಳಿಯದು. ಸಬ್ಸಿಡಿ , ಪ್ರಶಸ್ತಿ, ಇವೆಲ್ಲ ನಿಲ್ಲಿಸಿ ಅಳಿದುಳಿದ ಹಳೆಯ ಚಿತ್ರಗಳನ್ನು ರಕ್ಷಿಸುವ ಕೆಲಸಕ್ಕೆ ಸರ್ಕಾರವೆ ಮುಂದಾಗಬೇಕು.

–ಡಾ.ಕೆ. ಪುಟ್ಟಸ್ವಾಮಿ, ಬೆಂಗಳೂರು

ಶಿವಮೊಗ್ಗದಲ್ಲಿ 'ಗಾಂಧಿ ಸ್ಮರಣೆ'



ಜನವರಿ ೩೦ ಮಹಾತ್ಮ ಗಾಂಧಿ ಹಂತಕನೊಬ್ಬನ ಗುಡಿಗೆ ಬಲಿಯಾದ ದಿನ.. ಆ ದಿನವನ್ನು ದೇಶಕ್ಕಾಗಿ ಪ್ರಾಣ ತೆತ್ತವರೆಲ್ಲರಿಗೆ ಶ್ರದ್ಧಾಂಜಲಿ ಸಲ್ಲಿಸುವ ಹುತಾತ್ಮರ ದಿನವನ್ನಾಗಿ ಆಚರಿಸಲಾಗುತ್ತದೆ. ದೇಶದ ಪ್ರಜಾಪ್ರಭುತ್ವ ಸಂಕಟದಲ್ಲಿರುವಂತೆ ತೋರುವ ಈ ದಿನಗಳಲ್ಲಿ ಈ ಹುತಾತ್ಮರನ್ನು, ಅವರ ಬಲಿದಾನಗಳನ್ನು ರಾಷ್ಟ್ರಪಿತ ಗಾಂಧಿಯವರು ತಮ್ಮ ಸತ್ಯಾಗ್ರಹಗಳ ಮೂಲಕ ಕಟ್ಟಿಕೊಟ್ಟ ಮೌಲ್ಯ ಪರಂಪರೆಯನ್ನು ನೆನೆಯುವುದರ ಮೂಲಕ ನಮ್ಮ ಪ್ರೇರಣಾ ಶಕ್ತಿಗಳನ್ನಾಗಿ ಮಾರ್ಪಡಿಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಕಳೆದ ಜನವರಿ ೩೦ರಂದು ಶಿವಮೊಗ್ಗದ ಪತ್ರಿಕಾ ಭವನದಲ್ಲಿ 'ಗಾಂಧಿ ಸ್ಮರಣೆ' ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಶ್ರೀವಿದ್ಯಾ ಮತ್ತು ತಂಡದವರಿಂದ, ಗಾಂಧೀಜಿಯವರಿಗೆ ಪ್ರಿಯವಾದ ಗುಜರಾತಿ ಕವಿ ನರಸಿಂಹ ಮೆಹ್ತಾ ಅವರ 'ವೈಷ್ಣವ ಜನತೊ' ಮತ್ತು ಜಯಂತ ಕಾಯ್ಕಿಣಿಯವರ ಅದರ ಕನ್ನಡ ರೂಪಾಂತರ 'ಎಲ್ಲರ ನೋವನು ಬಲ್ಲವನಾದರೆ' ಮತ್ತು ಮೀರಾ ಭಜನೆಗಳೊಂದಿಗೆ ಆರಂಭವಾಯಿತು..ಇದರ ಮಧ್ಯೆ ಗಾಂಧೀಜಿ ಹತ್ಯೆಯಾದ ಸಮಯ ಸಂಜೆ ೫.೧೫ಕ್ಕೆ ಸಭೆ ಎದ್ದು ನಿಂತು ಎರಡು ನಿಮಿಷಗಳ ಮೌನವನ್ನಾಚರಿಸಿ ಹುತಾತ್ಮರಿಗೆ ಗೌರವ ಸಲ್ಲಿಸಿತು

ನಂತರ ಎಂ.ರಾಜು, ರೇಖಾಂಬ ಟಿ.ಎಲ್. ಮತ್ತು ಕೊಟ್ರಪ್ಪ ಹಿರೇ ಮಾಗಡಿಯವರು ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಕೃತಿಯಿಂದ ಆಯ್ದ ಭಾಗಗಳ ವಾಚನ ಮಾಡಿದರು. ನಂತರ ಸತ್ಯನಾರಾಯಣರಾವ್ ಅಣತಿ ಮತ್ತು ಸವಿತಾ ನಾಗಭೂಷಣ ಅವರು ಗಾಂಧೀಜಿ ಕುರಿತ ಕೆಎಸ್‌ನ ಮತ್ತು ಸಿದ್ದಲಿಂಗಯ್ಯನವರು ಗಾಂಧಿ ಕುರಿತು ಬರೆದಿರುವ ಪದ್ಯದ ವಾಚನ ಮಾಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಚಿಂತಕ ರಾಜೇಂದ್ರ ಚೆನ್ನಿಯವರು ಇಂದಿನ ಸಂದರ್ಭದಲ್ಲಿ ನಮಗೆ ಗಾಂಧಿ ವಿಚಾರಗಳು ಎಷ್ಟು ಅನಿವಾರ್ಯವಾಗಿವೆ ಎಂದು ಸಂಕ್ಷಿಪ್ತವಾಗಿ ಮಾತನಾಡಿದರು. ಮಹಿತಾ ಮತ್ತು ಸಂಹಿತಾ ಹಾಡಿದ 'ರಘುಪತಿ ರಾಘವ ರಾಜಾರಾಂ; ಗೀತೆಯೊಂದಿಗೆ ಕಾರ್ಯಕ್ರಮ ಮುಗಿಯಿತು.

(ವರದಿ: **ಮಂಜುಳಾ ಎಂ. ರಾಜು**)

ಪ್ರಚಲಿತ-೧

ನವ ಉದಾರವಾದಿ ಆರ್ಥಿಕ ನೀತಿ ಜಾಗತಿಕ ಅಸಮಾನತೆಯನ್ನು ಹೆಚ್ಚುಸುತ್ತಿದೆ: ಆಕ್ಸ್‌ಫಾಮ್ ವರದಿ

ಸಂಗ್ರಹ ಲೇಖನ: **ಎಂ ರಾಜು**



ಕೋವಿಡ್-೧೯ ಎಂಬ ಪಿಡುಗು ಇಡೀ ಪ್ರಪಂಚವನ್ನೇ ಕಾಡಿದ ನೆನಪು ಮಸುಕಾಗುವ ಮೊದಲೇ ಬಡತನ ನಿರ್ಮೂಲನೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿರುವ ಆಕ್ಸ್‌ಫಾಮ್ ಎಂಬ ಜಾಗತಿಕ ಸಂಘಟನೆ ತಯಾರಿಸಿರುವ 'ಅಸಮಾನತೆಯ ವೈರಸ್' ಎಂಬ ವರದಿ ಬಿಡುಗಡೆಯಾಗಿದೆ. ೭೯ ದೇಶಗಳ ೨೯೫ ಅರ್ಥಶಾಸ್ತ್ರಜ್ಞರು ಕಲೆತು ತಯಾರಿಸಿರುವ ಈ ವರದಿಯು ಜಾಣ ಒಂದು ವ್ಯವಸ್ಥಿತ ಆರ್ಥಿಕತೆಂಯಲ್ಲಿನ ಒಂದು ಜಾಣ ಹಸ್ತಕ್ಷೇಪವು ಒಂದು ಜಾಗತಿಕ ಸಂಕಷ್ಟವನ್ನೂ ಹೇಗೆ ಶ್ರೀಮಂತರಿಗೆ ಅನುಕೂಲವಾಗುವಂತೆ ಪರಿವರ್ತಿಸಬಲ್ಲದು ಎಂದುದನ್ನು ಸ್ಪಷ್ಟಪಡಿಸುತ್ತದೆ. ಈ ವರದಿಯ ಪ್ರಕಾರ ಪ್ರಪಂಚದ ಅತಿ ಶ್ರೀಮಂತರಾದ ೧% ಜನ ಪ್ರಪಂಚದ ೬.೯ ಬಿಲಿಯನ್ ಜನ ಹೊಂದಿರುವ ಸಂಪತ್ತಿನ ಎರಡರಷ್ಟನ್ನು ಹೊಂದಿದ್ದಾರೆ. ಇದು ಜುಗುಪ್ಸೆ ಹುಟ್ಟಿಸಬೇಕಾದ ಸಂಗತಿ. ಎಲ್ಲ ವಿದ್ಯಮಾನಗಳ ಹಾಗೆ ಕೋವಿಡ್-೧೯ ಎಂಬ ಪಿಡುಗು ಕೂಡ ಬಡವರನ್ನು ಮತ್ತಷ್ಟು ಬಡತನಕ್ಕೆ ತಳ್ಳಿ ಶ್ರೀಮಂತರ ಸಂಪತ್ತನ್ನು ಅಗಾಧವಾಗಿ ಹೆಚ್ಚಿಸಿದೆ. ಈವರೆಗೆ ಜಾಗತಿಕವಾಗಿ ಎರಡು ಮಿಲಿಯನ್ ಜನರು ವೈರಸ್‌ನಿಂದ ಪ್ರಾಣ ಕಳೆದುಕೊಂಡರೆ ಬಡತನಕ್ಕೆ ತಳ್ಳಲ್ಪಟ್ಟವರ ಸಂಖ್ಯೆ ನೂರಾರು ಮಿಲಿಯನ್. ಕರೋನಾ ಪಿಡುಗನ್ನು ಅಧಿಕೃತವಾಗಿ ಘೋಷಿಸಿದ ದಿನದಿಂದ ಈ ಆರ್ಥಿಕ ವರ್ಷವು ಕೊನೆಗೊಂಡ ದಿನದವರೆಗೆ ಅಮೆಜಾನ್ ಮತ್ತು ಟೆಸ್ಲಾ ಎಂಬ ಎರಡು ಕಂಪನಿಗಳು ಗಳಿಸಿರುವ ಲಾಭ ೫೪೦ ಬಿಲಿಯನ್ ಡಾಲರ್‌ಗಳು ಎನ್ನಲಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಮಾಹಿತಿಯ ಪ್ರಕಾರ ಜಗತ್ತಿನ ಎಲ್ಲ ೭೦೦ ಕೋಟಿ ಜನರಿಗೂ ಉಚಿತವಾಗಿ ಕರೋನಾ ಲಸಿಕೆ ನೀಡಿ ಬಡವರನ್ನು ಒಂದು ವರ್ಷ ಪೋಷಿಸಲು ಈ ಹಣ ಸಾಕು. ಪಕ್ಷಪಾತಿಯಾದ ಆರ್ಥಿಕತೆಯು ಸಂಪತ್ತನ್ನು ಗಣ್ಯ ಶ್ರೀಮಂತರಿಗೆ ಹರಿಸಿದ್ದರಿಂದ ಅವರು ಸಾಂಕ್ರಾಮಿಕವನ್ನು ನಿರಾಯಾಸವಾಗಿ ದಾಟಿ ಬಂದರೆ ಅಂಗಡಿಗಳಲ್ಲಿ ಕೆಲಸ ಮಾಡುವವರು, ಆರೋಗ್ಯ ಕಾರ್ಯಕರ್ತರು, ಸಣ್ಣವ್ಯಾಪಾರಿಗಳು ಮುಂತಾದ ಸಾಂಕ್ರಾಮಿಕದಿಂದ ಹೆಚ್ಚು ಬಾಧಿತರಾಗಿರುವವರ ಆರ್ಥಿಕ ಸ್ಥಿತಿ ಚಿಂತಾಜನಕವಾಗಿದೆ.

ಭಾರತದ ೧೦೦ ಜನ ಅತಿ ಶ್ರೀಮಂತರು ಕರೋನಾ ಪಿಡುಗಿನ ಕಾಲದಲ್ಲಿ ಗಳಿಸಿರುವ ಸಂಪತ್ತು ಸುಮಾರು ರೂ. ೧೩ ಲಕ್ಷ ಕೋಟಿ. ಇದು ಬಾರತದ ಅತ್ಯಂತ ಬಡತನದಲ್ಲಿರುವ ೧೩. ಕೋಟಿ ಜನರಿಗೆ ತಲಾ ರೂ. ೧ ಲಕ್ಷದಂತೆ ಹಂಚಲು ಸಾಕು. ಭಾರತದ ೧೧ ಜನ ಶತಕೋಟ್ಯಾಧೀಶರುಗಳು ಕರೋನಾ ಕಾಲದಲ್ಲಿ ಗಳಿಸಿರುವ ಹಣದಲ್ಲಿ ನಮ್ಮ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ೧೦ ವರ್ಷ ಕಾಲ ನಿರ್ವಹಿಸಬಹುದು ಎಂಬುದು ಭಾರತ ಕೂಡ ಅಸಮಾನತೆಯ ಅನಿಷ್ಟದ ಪಾಲುದಾರ, ಭಾರತದ ಆರ್ಥಿಕ ನೀತಿಗಳು ಕಾರ್ಪೊರೇಟ್ ಶ್ರೀಮಂತರ ಪರ ಎಂಬುದನ್ನು ಸಾಬೀತುಪಡಿಸುತ್ತವೆ. ಕೃಷಿ, ವಿಮಾನಯಾನ, ಪ್ರಾಕೃತಿಕ ಸಂಪತ್ತಿನ ಬಳಕೆ, ದೂರಸಂಪರ್ಕ ಕ್ಷೇತ್ರಗಳನ್ನು ಖಾಸಗೀ ಒಡೆಯರ ತೆಕ್ಕೆಗೆ ದೂಡಲಾಗುತ್ತಿದೆ. ಭಾರತದಲ್ಲಿ ಕರೋನಾ ಪಿಡುಗಿನಿಂದ ಕೆಲಸ ಕಳೆದುಕೊಂಡ ೧೨೨ ಮಿಲಿಯನ್ ಜನರ ಪೈಕಿ ೭೦% ಜನ ಅಸಂಘಟಿತ ವಲಯದಲ್ಲಿರುವ ಅತಿ ಬಡವರು, ಅತಿ ದುರ್ಬಲರು. ಕರೋನಾ ಕಾಲದಲ್ಲಿ ಅತ್ಯಂತ ಸಂಕಷ್ಟಕ್ಕೆ ಒಳಗಾದವರು ಇವರು. ಇದು ದೋಷಪೂರಿತ ಅರ್ಥ ವ್ಯವಸ್ಥೆಯ ಫಲ, ಇದರ ಮೂಲವಿರುವುದು ನವ ಉದಾರವಾದಿ ಆರ್ಥಿಕತೆಯಲ್ಲಿ. ಕಳೆದ ದಶಕದಲ್ಲಿ ನಮ್ಮ ಭೂ ಹಿಡುವಳಿದಾರರ ಸಂಖ್ಯೆಯಲ್ಲಿ ಆಗಿರುವ ಬದಲಾವಣೆಯು ನಮ್ಮ ಅರ್ಥ ನೀತಿಯು ಭಾರತದ ಬಹುಸಂಖ್ಯಾತ ಕೃಷಿಕರ ವಿರೋಧಿಯೂ ಹೌದು ಎಂಬ ವಾದಕ್ಕೆ ಪುಷ್ಟಿ ನೀಡುತ್ತದೆ. ೨೦೦೧ರ ಗಣತಿಯ ಪ್ರಕಾರ ಭೂ ಹಿಡುವಳಿದಾರರ ಸಂಖ್ಯೆ ೧೪೪.೩ ಮಿಲಿಯನ್ ಇದ್ದದ್ದು ೨೦೧೧ ರ ಹೊತ್ತಿಗೆ ೧೦೬.೭ ಮಿಲಿಯನ್‌ಗೆ ಇಳಿದಿರುವುದು ಅಂದರೆ ೩೫% ಕಡಿಮೆಯಾಗಿರುವುದನ್ನು ಸೂಚಿಸುತ್ತದೆ. ಕರೋನಾ ಪಿಡುಗಿನ ಅಸಮಾನ ಪರಿಣಾಮವನ್ನು ನಾವು ಆರೋಗ್ಯ, ಶಿಕ್ಷಣ, ಸಾಮಾಜಿಕ ಸೌಲಭ್ಯಗಳ ಲಭ್ಯತೆ, ಸಾಮಾಜಿಕ ಜೀವನ ಇತ್ಯಾದಿಗಳಲ್ಲೂ ಕಾಣಬಹುದಾಗಿದೆ. ಸಾರ್ವಜನಿಕ ಆರೋಗ್ಯಕ್ಕಾಗಿ ಅತಿ ಕಡಿಮೆ ಖರ್ಚು ಮಾಡುವ ದೇಶಗಳ ಪಟ್ಟಿಯಲ್ಲಿ ಭಾರತ ನಾಲ್ಕನೆ ಸ್ಥಾನದಲ್ಲಿದೆ. ತಮ್ಮ ಆರೋಗ್ಯಸೇವೆಯ ೭೦% ನಷ್ಟು ಖರ್ಚನ್ನು ಜನರೇ ಭರಿಸುತ್ತಿದ್ದಾರೆ. ಇಷ್ಟಾದರೂ ಬರೀ ಅರ್ಧದಷ್ಟು ಜನಕ್ಕೆ ಮಾತ್ರವೇ ಆರೋಗ್ಯ ಸೇವೆ ಲಭ್ಯವಿದೆ. ೨೦೨೦ ರ ಮೇ ತಿಂಗಳಿನಲ್ಲಿ, ಇತ್ತೀಚೆಗೂ ಕೂಡ ಭಾರತದ ೬೦% ನಷ್ಟು ದಲಿತರು ಯಾವುದೇ ರೀತಿಯ ಆರೋಗ್ಯ ವಿಮೆಯನ್ನು ಹೊಂದಿರಲಿಲ್ಲ ಎಂಬುದು ಕೇವಲ ಆರ್ಥಿಕ ತಾರತಮ್ಯವಷ್ಟೇ ಅಲ್ಲದೆ ಸಾಮಾಜಿಕ ತಾರತಮ್ಯವು ಭಾರತವನ್ನು ಇನ್ನೂ ಭಾಧಿಸುತ್ತಿರುವುದರ ಸೂಚನೆ. ನಮಗೆ ನಿಜವಾದ ಬದಲಾವಣೆ ಎಲ್ಲಿಂದ ಬರಬೇಕೆಂಬುದನ್ನು ಅಸಮಾನತೆಯ ಬಿಕ್ಕಟ್ಟಿನ ಪರಿಸ್ಥಿತಿ ತೋರಬಲ್ಲದೇ ಹೊರತು ಸದ್ಯದ ಸ್ಥಿತಿಯಿಂದ ಲಾಭ ಪಡೆಯುವ ಬರೀ ೧% ನಷ್ಟು ಬಿಲಿಯನೇರ್‌ಗಳಿರುವ ಸ್ಥಳವಲ್ಲ ಎನ್ನುತ್ತಾರೆ 'ಅಸಮಾನತೆಯ ವಿರುದ್ಧ ಹೋರಾಟ' ಸಂಘಟನೆಯ ಜೆನ್ನಿ ರಿಕ್ಸ್. ಜಗತ್ತಿನ ವಿವಿಧ ಭಾಗಗಳಿಂದ ಬಂದ ಯುವಜನತೆ ಜನತಾ ವಸೂಲಾತಿ ಎಂಬ ಯೋಜನೆಗಾಗಿ ಕೆಲಸ ಮಾಡುತ್ತಿದೆ. ಈ ಯೋಜನೆ ಸಾಂಕ್ರಾಮಿಕ ಕಾಲದ ವೇಗವಾಗಿ ಹೆಚ್ಚುತ್ತಿರುವ ಅಸಮಾನತೆಯ ವಿರುದ್ಧ ಹೋರಾಡುವುದಕ್ಕಾಗಿ ಮತ್ತು ವಿಪರೀತ ಅಸಮಾನತೆಯಿಂದಾಗಿ ದೇಶಗಳಲ್ಲಿನ ಜನರು ಕೇಳುತ್ತಿರುವ ವ್ಯವಸ್ಥಿತ ಬದಲಾವಣೆಗಳನ್ನು ಸಾಧಿಸುವುದಕ್ಕಾಗಿ ರೂಪುಗೊಂಡದ್ದು. 'ಅಸಮಾನತೆಯ ವಿರುದ್ಧ ಹೋರಾಟ' ಆಂದೋಲನವು ಸುಮಾರು ೩೦ ದೇಶಗಳಲ್ಲಿ ನ್ಯಾಯಯುತವಾದ, ಹೆಚ್ಚು ಸಮಾನವಾದ ಪ್ರತಿಕ್ರಿಯೆಗಾಗಿ ಹುಟ್ಟಿಕೊಂಡಿದ್ದು, ವ್ಯಾಪಕವಾಗಿರುವ ಅನ್ಯಾಯದ ಮೂಲವನ್ನು ತಲುಪುವ ಆರ್ಥಿಕ ಕಾರ್ಯಕ್ರಮಕ್ಕಾಗಿ ಈ ಕೆಳಗಿನ ಗುರಿಯನ್ನು ಹೊಂದಿದೆ.

೧. ವ್ಯಕ್ತಿಯೊಬ್ಬ ಯಾವ ಪಾಸ್‌ಪೋರ್ಟ್ ಹೊಂದಿದ್ದಾನೆ ಎಂಬ ಪರಿಗಣನೆ ಇಲ್ಲದೆ ಪ್ರತಿಯೊಬ್ಬರಿಗೂ ಜನತಾ ವ್ಯಾಕ್ಸಿನ್ ದೊರಕಿಸುವುದು.

ಸರ್ಕಾರಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಆರ್ಥಿಕತೆಗಳ ಮೇಲೆ ಹೇರುತ್ತಿರುವ ಉಳಿತಾಯ ಕ್ರಮಗಳನ್ನು ಕೊನೆಗೊಳಿಸುವುದು.

೨. ಆರೊಗ್ಯ, ನೀರು, ಮತ್ತು ಶಿಕ್ಷಣ ಒಳಗೊಂಡಂತೆ ಸಾರ್ವತ್ರಿಕ ಸಾರ್ವಜನಿಕ ಸೇವೆ ದೊರಕಿಸುವುದು.

೩. ಸಾರ್ವತ್ರಿಕ ಮೂಲ ಆದಾಯ ಮತ್ತು ಜಾಗತಿಕ ಸಾಮಾಜಿಕ ರಕ್ಷಣಾ ವ್ಯವಸ್ಥೆ.

೪. ಅಗತ್ಯವಿರುವ ದೇಶಗಳಿಗೆ ಭರಿಸಲಾಗದ ಹೊರಗಿನ ಸಾಲಗಳ ರದ್ದು.

೫. ಸಂಕಷ್ಟಕ್ಕೆ ತೆರಬೇಕಾದ ಬೆಲೆಯಲ್ಲಿ ತಮ್ಮ ಪಾಲನ್ನು ನೀಡುವ ರೀತಿಯಲ್ಲಿ ಅತಿ ಶ್ರೀಮಂತರ ಸಂಪತ್ತಿನ ಮೇಲೆ ತೆರಿಗೆ.

ಆರ್ಥಿಕತೆಗಳು ನಡೆಯುವುದಕ್ಕೆ ಅನುವಾಗುವಂತೆ ಮಹಿಳೆಯರು ಮಾಡುವ ವೇತನ ಸಹಿತ, ವೇತನ ರಹಿತ ಕೆಲಸಗಳ ಗುರುತಿಸುವಿಕೆ, ಮರುಹಂಚಿಕೆ, ಮತ್ತು ಪುರಸ್ಕಾರ. ಸಾಮಾಜಿಕ ಮತ್ತು ಪಾರಿಸರಿಕ ನ್ಯಾಯವು ನಮ್ಮ ಸಮಾಜದ ನೆಲೆಗಟ್ಟಾಗಬೇಕು ಎಂಬುದನ್ನು ಈ ಸಾಂಕ್ರಾಮಿಕ ಪಿಡುಗು ನಮಗೆ ತೋರಿಸಿಕೊಟ್ಟಿದೆ ಎನ್ನುವ ಆಕ್ಸ್‌ಫಾಮ್ ಪ್ರಕಾರ : ನಿಜ ಆರ್ಥಿಕತೆಯಲ್ಲಿ ಆರ್ಥಿಕ ಹಿಂಜರಿಕೆ ಮುಂದುವರಿದಿದ್ದಾಗ್ಯೂ ಷೇರು ಮಾರುಕಟ್ಟೆಯಲ್ಲಿನ ಸುಧಾರಣೆಯಿಂದಾಗಿ ಬಿಲಿಯನೇರ್‌ಗಳ ಸಂಪತ್ತು ಡಿಸೆಂಬರ್ ೨೦೨೦ ರಲ್ಲಿ ೧೧.೯೫ ಟ್ರಿಲಿಯನ್ ಡಾಲರ್‌ಗಳಾಗಿದ್ದು ಇದು ಈ ೨೦ ರಾಷ್ಟ್ರಗಳು ಕೋವಿಡ್ – ೧೯ ರಿಂದ ಚೇತರಿಸಿಕೊಳ್ಳಲು ಮಾಡಿದ ಖರ್ಚಿಗೆ ಸಮ. ಒಂದು ಸಂಕಷ್ಟ ಕಾಲದಲ್ಲಿ ಕೆಲವೇ ಮಂದಿ ಇಷ್ಟೊಂದು ಸಂಪತ್ತನ್ನು ಗಳಿಸಲು ಅವಕಾಶ ನೀಡುವುದು ಅನೈತಿಕತೆ. ಜಗತ್ತಿನಾದ್ಯಂತ ದೇಶಗಳು ಬಡತನವನ್ನು ನಿರ್ಮೂಲನೆ ಮಾಡಿ ಭೂಗೋಳವನ್ನು ಉಳಿಸುವುದಕ್ಕೆ ಈ ಅವಕಾಶವನ್ನು ಬಳಸಿಕೊಳ್ಳಬೇಕು ಬಿಲಿಯನೇರ್‌ಗಳು ಭಗ್ನಗೊಂಡ ಆರ್ಥಿಕತೆಯ ಲಕ್ಷಣ. ಅದು ಕೊನೆಯಾಗಬೇಕು ಎಂದು ಆಕ್ಸ್‌ಫಾಮ್‌ನ ನಿರ್ದೇಶಕಿ ಬುಚೆರ್ ಹೇಳುತ್ತಾರೆ.



(ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ತಂತ್ರಜ್ಞರಾಗಿದ್ದ ಲೇಖಕರು ಸಾಹಿತ್ಯದ ವಿದ್ಯಾರ್ಥಿಯೂ ಆಗಿದ್ದು ನಮ್ಮ ಪತ್ರಿಕೆಯ ಮುಖ್ಯ ಅನುವಾದಕರೂ ಆಗಿದ್ದಾರೆ)

ಪ್ರಚಲಿತ-೨

೨೦೨೦ ರಲ್ಲಿ ಜಾಗತಿಕ ಹವಾಮಾನ ಬದಲಾವಣೆಯ ೧೨ ಪ್ರಮುಖ ಪರಿಣಾಮಗಳು

ಪರಿಸರ ಸಂರಕ್ಷಣೆಯ ಪ್ರಶ್ನೆ ನಮ್ಮ ಆವಾಸ ಸ್ಥಾನವಾದ ಈ ಭೂಗ್ರಹದ ಅಳಿವು ಉಳಿವಿನ ಪ್ರಶ್ನೆಯಾಗಿ ಬಹಳ ಕಾಲವೇ ಆಗಿದ್ದರೂ, ಈ ಪರಿಸರ ಸಂರಕ್ಷಣೆಯ ಮೂಲ ಆಧಾರವಾದ ಹವಾಮಾನ ವೈಪರೀತ್ಯ ನಿಯಂತ್ರಣಕ್ಕಾಗಿ ಜಿಶ್ವ ಪ್ರಯತ್ನವೇ ನಡೆದು ಒಂದು ಜಾಗತಿಕ ಒಪ್ಪಂದವೇ ರೂಪುಗೊಂಡಿದ್ದರೂ, ಅದೆಲ್ಲ ಕಾಗದದ ಮೇಲಿನ ವ್ಯವಹಾರ ಮಾತ್ರವಾಗಿದೆ ೧೦೧೩ರಲ್ಲಿ ಹಿಮಾಮಲಯದ ಶೃಖನಿಯಲ್ಲಿ ಸಂಭವಿಸಿದ ಮಹಾದುರಂತದ ನಂತರದಲ್ಲೂ, ಹಲವು ಅಭಿವೃದ್ಧಿ ಚಿಂತಕರ ಎಚ್ಚರಿಕೆಗಳ ನಡುವೆಯೂ ಉತ್ತರಾಖಂಡದ ಚಮೋಲಿ ಎಂಬ ಅತಿಸೂಕ್ಷ್ಮ ಪರಸರ ವಲಯದಲ್ಲಿ ಜಲವಿದ್ಯುತ್ ಯೋಜನೆಗಳನ್ನು ಮುಂದುವರೆಸಿರುವ ನಮ್ಮ ಸರ್ಕಾರದ 'ಅಭಿವೃದ್ಧಿ' ಎಂಬ ವ್ಯಸನಕ್ಕೆ ಮೊನ್ನೆ ಹೃಷಿಗಗಾ ಜಲವಿದ್ಯುತ್ ಯೋಜನಾ ನಿವೇಶನವನ್ನೇ ಮುಳುಗಿಸಿ ಕನಿಷ್ಟ ಮುವ್ವ,-ನಲವತ್ತು ಜನರ ದಾರಣ ಶಾವಿಕೆ ಕಾರವಾದ ನೀರ್ಗಲ್ಲು ಸ್ಫೋಟದ ದುರಂತ ನಮ್ಮ ಅಭಿವೃದ್ಧಿ ಪಥವನ್ನು ಬದಲಿಸಲು ಕೊನೆಯ ಎಚ್ಚರಿಕೆಯ ಗಂಟೆಯಾಗಬೇಕು.



ವಿಶ್ವ ಹವಾಮಾನ ಸಂಸ್ಥೆಯು, ೧೯೯೩ರಿಂದ ಪ್ರತಿವರ್ಷ ಹಿಂದಿನ ವರ್ಷದ ಜಾಗತಿಕ ಹವಾಮಾನ ಪರಿಸ್ಥಿತಿಯ ಬಗ್ಗೆ ಪ್ರತಿ ವರ್ಷ ವಾರ್ಷಿಜ ವರದಿಯನ್ನು ಬಿಡುಗಡೆ ಮಾಡುತ್ತಿದೆ. ಚರ್ಚೆ ಮತ್ತು ಪರಿಶೀಲನೆಗಾಗಿ 'ಸ್ಟೇಟ್ ಆಫ್ ದಿ ಗ್ಲೋಬಲ್ ಕ್ಲೈಮೇಟ್, ೨೦೨೦' ರ ವರದಿಯ ಕರಡು ಈಗ ಬಿಡುಗಡೆಯಾಗಿದೆ. ಅದು, ೨೦೨೦ ರಲ್ಲಿಯೂ ಹವಾಮಾನ ಬದಲಾವಣೆಯ ನಾಗಾಲೋಟವು ಮುಂದುವರೆದಿದ್ದು, ದಾಖಲೆಯ ಮೂರು ಅತಿಹೆಚ್ಚು ಉಷ್ಣತೆಯ ವರ್ಷಗಳಲ್ಲಿ ಇದೂ ಒಂದು ಎಂದು ಹೇಳುತ್ತಿದೆ. ೨೦೧೧-೨೦೨೦ರ ದಶಕವು, ದಾಖಲೆಯ ಅತಿಉಷ್ಣತೆಯ ದಶಕವಾಗಿದ್ದು, ಅದರಲ್ಲಿನ ಆರು ಅತಿಉಷ್ಣತೆಯ ವರ್ಷಗಳು ೨೦೧೫ ರಿಂದೀಚೆಗೇ ಇವೆ.

ಸಮುದ್ರದ ಉಷ್ಣತೆಯು ದಾಖಲೆಯ ಮಟ್ಟದಲ್ಲಿದೆ ಮತ್ತು ಜಾಗತಿಕ ಒಟ್ಟು ಸಮುದ್ರದ ಶೇ. ೮೦ಕ್ಕಿಂತ ಹೆಚ್ಚಿನ ಭಾಗದಲ್ಲಿ, ೨೦೨೦ನೇ ವರ್ಷದಲ್ಲೇ ಬೇರೆ ಬೇರೆ ಸಮಯಗಳಲ್ಲಿ ಸಾಗರ ಉಷ್ಣಅಲೆ(marine heatwave)ಯು ಎದ್ದಿದೆ. ಇಂಗಾಲದ ಡೈಆಕ್ಸೈಡ್(CO_2) ಹೀರಿಕೊಳ್ಳುವಿಕೆಯಿಂದಾಗಿ ಈಗಾಗಲೇ ಹೆಚ್ಚು ಆಮ್ಲೀಯವಾದ(acidic) ನೀರಿನಿಂದ ಬಳಲುತ್ತಿರುವ ಸಮುದ್ರ ಪರಿಸರ ವ್ಯವಸ್ಥೆಗಳ ಮೇಲೆ ಈ ಉಷ್ಣ ಅಲೆಗಳು ವ್ಯಾಪಕವಾದ ಪರಿಣಾಮವನ್ನು ಬೀರಿವೆ.

ಹತ್ತಾರು ಅಂತಾರಾಷ್ಟ್ರೀಯ ಸಂಸ್ಥೆಗಳು ಮತ್ತು ತಜ್ಞರ ಕೊಡುಗೆಗಳನ್ನು ಆಧರಿಸಿದ ಈ ವರದಿಯು, ಅತಿ ಉಷ್ಣತೆ, ಕಾಡ್ಗಿಚ್ಚು ಮತ್ತು ಪ್ರವಾಹಗಳೂ ಸೇರಿದಂತೆ ದಾಖಲೆ-ಮುರಿಯುವ ಅಟ್ಲಾಂಟಿಕ್ ಚಂಡಮಾರುತದಂತಹ ಗಾಢ-ಪರಿಣಾಮದ ವಿದ್ಯಮಾನಗಳು ಲಕ್ಷಾಂತರ ಜನರ ಜೀವನದ ಮೇಲೆ ಹೇಗೆ ಪರಿಣಾಮ ಬೀರಿವೆ ಮತ್ತು ಮಾನವಕುಲದ ಆರೋಗ್ಯ, ಸುರಕ್ಷತೆ ಮತ್ತು ಆರ್ಥಿಕ ಸ್ಥಿರತೆಗೆ ಕೋವಿಡ್-೧೯ ಸಾಂಕ್ರಾಮಿಕವು ಒಡ್ಡಿರುವ ಬೆದರಿಕೆಯನ್ನು ಹೇಗೆ ಇಮ್ಮಡಿಗೊಳಿಸಿವೆ ಎಂಬುದನ್ನು ತೋರಿಸುತ್ತದೆ. ೨೦೨೦ರ ಅಂತಿಮ ವರದಿಯನ್ನು ಮಾರ್ಚ್ ೨೦೨೧ ರಲ್ಲಿ ಪ್ರಕಟಿಸಲಾಗುವುದು.ವರದಿಯ ಈ ಕರಡುಹನ್ನೆರಡು ಪ್ರಮುಖ ಸಂದೇಶಗಳೊಂದಿಗೆ ಪ್ರಾರಂಭವಾಗುತ್ತದೆ.

ಹಸಿರುಮನೆ ಅನಿಲಗಳು: ಪ್ರಮುಖ ಹಸಿರುಮನೆ ಅನಿಲಗಳಾದ (ಕಾರ್ಬನ್ ಡೈ ಆಕ್ಸೈಡ್, ಮೀಥೇನ್ ಮತ್ತು ನೈಟ್ರಸ್ ಆಕ್ಸೈಡ್)ಗಳ ಸಾಂದ್ರತೆಗಳ ಹೆಚ್ಚಳವು ೨೦೧೯ ಮತ್ತು ೨೦೨೦ರಲ್ಲಿ ಮುಂದುವರಿದಿದೆ.

ಜಾಗತಿಕ ಬಿಸಿಯೇರಿಕೆ: 'ಲಾ ನಿನಾ'(ತಾಪಮಾನದ ವ್ಯತ್ಯಾಸದಿಂದುಂಟಾಗುವ ಸಮುದ್ರ ವಾತಾವರಣದ ಒಂದು ವಿದ್ಯಮಾನ) ಉಂಟುಮಾಡಿರುವ ಪರಿಸ್ಥಿತಿಗಳ ಹೊರತಾಗಿಯೂ, ೨೦೨೦ರ ವರ್ಷದ ಜಾಗತಿಕ ಸರಾಸರಿ ತಾಪಮಾನವು, ಮೂರು ಅತಿಉಷ್ಣತೆಯ ವರ್ಷಗಳ ದಾಖಲೆಗಳಲ್ಲೊಂದಾಗಿದೆ. ೨೦೨೦ ಸೇರಿದಂತೆ ಕಳೆದ ಆರು ವರ್ಷಗಳು ದಾಖಲೆಯ ಆರು ಅತಿಉಷ್ಣತೆಯ ವರ್ಷಗಳಾಗಿರುವ ಸಾಧ್ಯತೆ ಇದೆ.

ಏರುತ್ತಿರುವ ಸಮುದ್ರಮಟ್ಟಗಳು: ಆಲ್ಟಿಮೀಟರ್ ಇದುವರೆಗೂ ದಾಖಲಿಸಿದ ಸೂಚ್ಯಂಕಗಳಲ್ಲಿ ಸಮುದ್ರ ಮಟ್ಟ ಹೆಚ್ಚುತ್ತಲೇ ಬಂದಿದೆ. ಆದರೆ ಇತ್ತೀಚೆಗೆ ಗ್ರೀನ್ ಲ್ಯಾಂಡ್ ಮತ್ತು ಅಂಟಾರ್ಕ್ಟಿಕಾದಲ್ಲಿ ಹಿಮದ ಹಾಳೆಗಳ ಕರಗುವಿಕೆಯಿಂದಾಗಿ ಸಮುದ್ರ ಮಟ್ಟವು ಹೆಚ್ಚಿನ ಪ್ರಮಾಣದಲ್ಲಿ ಏರಿದೆ. ೨೦೨೦ರಲ್ಲಿ ಜಾಗತಿಕ ಸರಾಸರಿ ಸಮುದ್ರ ಮಟ್ಟವು ೨೦೧೯ರಲ್ಲಿ ಇದ್ದಂತೆಯೇ ಇತ್ತು ಮತ್ತು ಇವು ಅದರ ದೀರ್ಘಕಾಲೀನ ಪ್ರವೃತ್ತಿಗೆ ಅನುಗುಣವಾಗಿವೆ. ೨೦೨೦ ರ ಉತ್ತರಾರ್ಧದಲ್ಲಿ ಜಾಗತಿಕ ಸಮುದ್ರ ಮಟ್ಟದಲ್ಲಿ ಆದ ಒಂದು ಸಣ್ಣ ಕುಸಿತವು, ಹಿಂದಿನ ಲಾ ನಿನಾ ಘಟನೆಗಳಿಗೆ ಸಂಬಂಧಿಸಿದ ತಾತ್ಕಾಲಿಕ ಕುಸಿತದಂತೆಯೇ, ಇನ್ನೂ ರೂಪುಗೊಳ್ಳುತ್ತಿರುವ ಲಾ ನಿನಾ ಪರಿಸ್ಥಿತಿಗಳಿಗೆ ಸಂಬಂಧಿಸಿರುವ ಸಾಧ್ಯತೆಯಿದೆ.

ಸಾಗರ ಉಷ್ಣ ಅಲೆಗಳು): ಸಾಗರ ಪ್ರದೇಶದ ಶೇ. ೮೦ಕ್ಕಿಂತಲೂ ಹೆಚ್ಚಿನ ಭಾಗದಲ್ಲಿ, ೨೦೨೦ರಲ್ಲಿ, ಇವತ್ತಿನ ತನಕ, ಕನಿಷ್ಠ ಒಂದು ಸಾಗರ ಉಷ್ಣ ಅಲೆಯಾದರೂ ಎದ್ದಿದೆ. 'ಮಧ್ಯಮ'(೨೮%) ಎಂದು ವಗೀಕರಿಸಲಾದ ಅಲೆಗಳಿಗಿಂತ 'ಬಲವಾದ'(೪೫%) ಎಂದು ವರ್ಗೀಕರಿಸಲಾದ ಅಲೆಗಳಿಗೆ ಸಮುದ್ರದ ಹೆಚ್ಚಿನ ಭಾಗವು ಸಾಕ್ಷಿಯಾಗಿದೆ.

ಸಾಗರ ತಾಪನ: ದಾಖಲೆಯ ಅತಿ ಹೆಚ್ಚು ಸಾಗರ ಉಷ್ಣಾಂಶ 2019ರಲ್ಲಿ ಕಂಡುಬಂದಿದೆ ಮತ್ತು ಕಳೆದ ಒಂದು ದಶಕದಲ್ಲಿ ತಾಪಮಾನ ಏರಿಕೆಯ ಪ್ರಮಾಣವು ದೀರ್ಘಕಾಲೀನ ಸರಾಸರಿಗಿಂತ ಹೆಚ್ಚಾಗಿದೆ. ಇದು ಹಸಿರುಮನೆ ಅನಿಲಗಳಿಂದ ಉಂಟಾಗುವ ಪ್ರಸರಣ ಅಸಮತೋಲನದಿಂದ ಶಾಖವನ್ನು ನಿರಂತರವಾಗಿ ಹೀರಿಕೊಳ್ಳುವುದನ್ನು ಸೂಚಿಸುತ್ತದೆ.

ಧೃವ ಸಮುದ್ರ ಹಿಮಗಡ್ಡೆ: ಧೃವ ಪ್ರದೇಶಗಳಲ್ಲಿ, ವಾರ್ಷಿಕ ಕನಿಷ್ಠ ಸಮುದ್ರ-ಹಿಮಗಡ್ಡೆಯ ವಿಸ್ತಾರವು, ದಾಖಲೆಯ ಎರಡನೇ ಅತಿ ಕಡಿಮೆ ಮಟ್ಟವಾಗಿದೆ ಮತ್ತು ಜುಲೈ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ, ಸಮುದ್ರ-ಹಿಮಗಡ್ಡೆಯ ವಿಸ್ತಾರದ ದಾಖಲೆಯ ಕಡಿಮೆ ಮಟ್ಟವನ್ನು ಗಮನಿಸಲಾಗಿದೆ. ಅಂಟಾರ್ಕ್ಟಿಕ್ ಸಮುದ್ರ-ಹಿಮಗಡ್ಡೆಯ ವಿಸ್ತಾರವು ದೀರ್ಘಕಾಲೀನ ಸರಾಸರಿಗೆ ಹತ್ತಿರದಲ್ಲಿದೆ.

ಗ್ರೀನ್‌ಲ್ಯಾಂಡ್ ಹಿಮಗಡ್ಡೆ: ಗ್ರೀನ್‌ಲ್ಯಾಂಡ್‌ನ ಹಿಮದ ಹಾಳೆ ತನ್ನ ಸಾಂದ್ತತೆಯನ್ನು ಕಳೆದುಕೊಳ್ಳುತ್ತಲೇ ಇದೆ. ಮೇಲ್ಮೈ ಸಾಂದ್ರತೆ ದೀರ್ಘಕಾಲೀನ ಸರಾಸರಿಗೆ ಹತ್ತಿರದಲ್ಲಿದ್ದರೂ, ಹಿಮಗಡ್ಡೆಯ ಒಡೆಯುವಿಕೆಯ ಕಾರಣದಿಂದಾದ ಹಿಮ ನಷ್ಟವು(ಅಂದರೆ ಹಿಮ ನೀರಾಗುವಿಕೆ) ಕಳೆದ ೪೦ ವರ್ಷಗಳ ದಾಖಲೆಯ ತುತ್ತತುದಿಯಲ್ಲಿತ್ತು. ಒಟ್ಟಾರೆಯಾಗಿ, ಸೆಪ್ಟೆಂಬರ್ ೨೦೧೯ ಮತ್ತು ಆಗಸ್ಟ್ ೨೦೨೦ರ ನಡುವೆ ಸುಮಾರು ೧೫೨ ಜಿಟಿ(ಗಿಗಾಟನ್)ನಷ್ಟು ಹಿಮದ ಹಾಳೆಯ ಹಿಮವು ನಷ್ಟವಾಗಿದೆ.

ಮಳೆ ಮತ್ತು ಪ್ರವಾಹ: ೨೦೨೦ರಲ್ಲಿ ಆಫ್ರಿಕಾ ಮತ್ತು ಏಷ್ಯಾದ ಹೆಚ್ಚಿನ ಭಾಗಗಳಲ್ಲಿ ಭಾರಿ ಮಳೆ ಮತ್ತು ವ್ಯಾಪಕ ಪ್ರವಾಹ ಸಂಭವಿಸಿದೆ. ಭಾರೀ ಮಳೆ ಮತ್ತು ಪ್ರವಾಹಗಳು, ವರ್ಷದ ವಿವಿಧ ಸಮಯಗಳಲ್ಲಿ, ಸಹೇಲ್, ಈಶಾನ್ಯ ಆಫ್ರಿಕಾದ ದೇಶಗಳು, ಭಾರತ ಉಪಖಂಡ ಮತ್ತು ನೆರೆಯ ಪ್ರದೇಶಗಳು, ಚೀನಾ, ಕೊರಿಯಾ, ಜಪಾನ್ ಮತ್ತು ಆಗ್ನೇಯ ಏಷ್ಯಾದ ಕೆಲವು ಭಾಗಗಳ ಮೇಲೆ ಬಹುವಾಗಿ ಪರಿಣಾಮ ಬೀರಿವೆ.

ಅಟ್ಲಾಂಟಿಕ್ ಚಂಡಮಾರುತಗಳು: ಉತ್ತರ ಅಟ್ಲಾಂಟಿಕ್ ಚಂಡಮಾರುತ ಋತುಗಾಲವು, ವಿವಿಧ ಹೆಸರುಗಳಿಂದ ಗುರುತಿಸಲಾದ ೩೦ ಬಿರುಗಾಳಿಗಳೊಂದಿಗೆ (ನವೆಂಬರ್ ೧೭ರವರೆಗೆ) ಅತಿಹೆಚ್ಚಿನ ಸಂಖ್ಯೆಯ ಹೆಸರಿಸಿರುವ ಬಿರುಗಾಳಿಗಳನ್ನು ದಾಖಲಿಸಿದ್ದು ಅವು ಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ದಾಖಲೆಯ ಸಂಖ್ಯೆಯ ಭೂಕುಸಿತವನ್ನು ಉಂಟುಮಾಡಿವೆ. ಋತುಗಾಲದ ಕೊನೆಯ (ಇಲ್ಲಿಯವರೆಗೆ) ಚಂಡಮಾರುತವಾದ 'ಲೋಟಾ' ಅತ್ಯಂತ ತೀವ್ರವಾದ ಚಂಡಮಾರುತವಾಗಿದ್ದು ಅದು %ನೇ ಉನ್ನತ ಶ್ರೇಣಿ ತಲುಪಿತ್ತು.

ಇತರ ಪ್ರದೇಶಗಳ ಬಿರುಗಾಳಿಗಳು: ಇವುಗಳ ಕ್ರಿಯಾಶೀಲತೆ ಮಟ್ಟ ದೀರ್ಘಕಾಶಲಿನ ಸರಾಸರಿಗೆಗೆ ಹತ್ತಿರ ಅಥವಾ ಅದಕ್ಕಿಂತ ಸ್ವಲ್ಪ ಕಡಿಮೆ ಇದ್ದರೂ, ಅವುಗಳ ಪರೀಣಾಮ ತೀವ್ರತರವಾಗಯೇ ಇತ್ತೆಂದು ಹೇಳಬಹುದು.

ತೀವ್ರ ಬರ: ೨೦೨೦ರಲ್ಲಿ ದಕ್ಷಿಣ ಅಮೆರಿಕಾದ ಒಳನಾಡಿನ ಅನೇಕ ಭಾಗಗಳಲ್ಲಿ, ಅಂದರೆ. ಉತ್ತರ ಅರ್ಜೆಂಟೀನಾ, ಪೆರುಗ್ವೆ ಮತ್ತು ಬ್ರೆಜಿಲ್‌ನ ಪಶ್ಚಿಮ ಗಡಿ ಪ್ರದೇಶಗಳಲ್ಲಿ ತೀವ್ರ ಬರ ಉಂಟಾಗಿ ಜನ ಅತೀವ ಸಂಕಷ್ಟಗಳಿಗೆ ಈಡಾದರು. ಬ್ರೆಜಿಲ್‌ನಲ್ಲಿ ಆದ ಕೃಷಿ ನಷ್ಟ ೩ ಬಿಲಿಯನ್ ಅಮೆರಿಕನ್ ಡಾಲರ್‌ನ ಹತ್ತಿರದಲ್ಲಿದೆ ಎಂದು ಅಂದಾಜು ಮಾಡಲಾಗಿದೆ.

ಹವಾಮಾನ-ಪ್ರೇರಿತ ವಲಸೆ: ಹವಾಮಾನ ವೈಪರೀತ್ಯ'ವಿದ್ಯಮಾನಗಳು ಗಮನಾರ್ಹ ಸಂಖ್ಯೆಯ ಜನರ ವಲಸೆಗೆ ಕಾರಣವಾಗಿದ್ದು, ಪೆಸಿಫಿಕ್ ಮತ್ತು ಮಧ್ಯ ಅಮೆರಿಕದ ಪ್ರದೇಶಗಳೂ ಕೂಡ ಈಗ ವಲಸೆಗಳಿಗೆ ಸಾಕ್ಷಿಯಾಗಿದ್ದು, ಇದರಿಂದ ಕಷ್ಟಗಳಿಗೆ ಸಿಲುಕಿರುವವರು ಬಡಬಗ್ಗರೇ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

(ಕೃಪೆ: 'ಕ್ಲೈಮೇಟ್ ಅಂಡ್ ಕ್ಯಾಪಿಟಲಿಸಂ' ಪರಿಸರ ಸಮಾಜವಾದಿ ನಿಯತಕಾಲಿಕ, ಡಿಸೆಂಬರ್ ೧೫, ೨೦೨೦ ಕನ್ನಡಕ್ಕೆ: ಟಿ.ಎಲ್. ರೇಖಾಂಬ)

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ: ಮಹಿಳಾ ವಿಶೇಷ ಪುಟಗಳು

ಮತ್ತೆ ಮಾರ್ಚ್ ೮, ಅಂತಾರಾಷ್ಟ್ರೀಯ ಮಹಿಳಾದಿನ ಮತ್ತು ಸಪ್ತಾಹ ಬಂದಿದೆ. ವಿಶ್ವಸಂಸ್ಥೆಯ ನಿರ್ಣಯದಂತೆ ೧೯೭೫ರಿಂದ ಮಾರ್ಚ್ ೮ರ ದಿನವನ್ನು ಅಂತಾರಾಷ್ಟ್ರೀಯ ಮಹಿಳಾ ದಿನವನ್ನಾಗಿ ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಪ್ರತಿ ವರ್ಷ ಒಂದು ವಸ್ತುವನ್ನು ಆಯ್ದುಕೊಂಡು ಮಹಿಳೆಯರ ವಿರುದ್ಧ ನಡೆಸಲಾಗುತ್ತಿರುವ' ತಾರತಮ್ಯ, ದೌರ್ಜನ್ಯ ಮತ್ತು ಶೋಷಣೆಗಳ ಬಗ್ಗೆ ಎಚ್ಚರ ಮೂಡಿಸಿ ಅವನ್ನು ನಿವಾರಣೆ ಮಾಡಿ ಒಂದು ಲಿಂಗ ಸಮಾನತೆಯ; ಆ ಮೂಲಕ ಒಂದು ಸರ್ವಸಮಾನತೆಯ ಜಗತ್ತನ್ನು ನಿರ್ಮಾಣ ಮಾಡುವ ಉದ್ದೇಶ ಹೊಂದಲಾಗಿದೆ. ಇದರ ಭಾಗವಾಗಿ ಈ ವರ್ಷದ ದಿನಾಚರಣೆಗಾಗಿ ಆರಿಸಿರುವ ವಸ್ತು: 'ಸವಾಲನ್ನು ಆಯ್ಕೆ ಮಾಡಿ'. ಸವಾಲು ಹಾಕುವ ಮೂಲಕವೇ ಸಬಲೀಕರಣ ಮತ್ತು ಸಮಾನತೆಯ ಹಕ್ಕುಗಳು ಸ್ಪಷ್ಟವಾಗಿ ಗೋಚರವಾಗುವುದು ಎಂಬುದು ಈ ವಸ್ತುವಿನ ಸಂದೇಶ,

ಈ ಹಿನ್ನೆಲೆಯಲ್ಲಿ ಕಳೆದ ಹಲವು ವರ್ಷಗಳಿಂದ, ನಮ್ಮ ಪತ್ರಿಕೆಯು ತನ್ನ ಪ್ರತಿ ಸಂಚಿಕೆಯಲ್ಲೂ ಮಹಿಳಾ ಅಭಿವ್ಯಕ್ತಿಗೆ ಯುಕ್ತ ಅವಕಾಶವನ್ನು ತೆರೆದಿಡುತ್ತಾ ಬಂದಿರುವುದರ ಜೊತೆಗೇ, ಮಾರ್ಚ್ ಸಂಚಿಕೆಯನ್ನು ಮಹಿಳಾ ವಿಶೇಷ ಸಂಚಿಕೆಯನ್ನಾಗಿ ಹೊರತರುತ್ತಿದ್ದು, ಆಯಾ ವರ್ಷದ ವಸ್ತುವಿನ ಸುತ್ತಲೇ ಒಂದು ಚರ್ಚೆ./ಮಾತುಕತೆಯನ್ನು ಆಯೋಜಿಸುತ್ತಾ ಬಂದಿದೆ. ಇದರ ಅಂಗವಾಗಿ ಈ ವರ್ಷವೂ ನಮ್ಮ ಸಮಾಜದ ಕೆಲ ಚಿಂತನಶೀಲ ಮಹಿಳೆಯರನ್ನು ಪತ್ರಿಕೆ ಮೂರು ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆದಿದೆ. ನಾವು ಕೇಳಿದ ಪ್ರಶ್ನೆಗಳು ಹೀಗಿವೆ–

೧. ದೈಹಿಕ ವ್ಯತ್ಯಾಸಗಳ ಹೊರತಾಗಿ ನಿಮ್ಮ ಪ್ರಕಾರ ಹೆಣ್ಣು ಮತ್ತು ಗಂಡುಗಳ ನಡುವೆ ಇರುವ ವ್ಯತ್ಯಾಸಗಳು ಯಾವುವು? ಇವು ಗಂಡು ಮತ್ತು ಹೆಣ್ಣು ಮಾಡಬಹುದಾದ/ನಿರ್ವಹಿಸಬಹುದಾದ ವೃತ್ತಿ/ಜವಾಬ್ದಾರುಗಳ ನಡುವೆ ಗೆರೆಯೊಂದನ್ನು ಎಳೆಯುವುದಿಲ್ಲವೆ?

೨. ಹೆಣ್ಣು ಗಂಡಿನೊಡನೆ ಸಮಾನವಾಗಿ ಹೊರಗೆ ದುಡಿಯಲು ಹೊರಟಿರುವ ಆಧುನಿಕ ಕಾಲದಲ್ಲಿ ಅವಳ ಜೀವಕೇಂದ್ರವೆನಿಸಿದ ತಾಯ್ತನದ ಹಲವು ಆಯಮಗಳು ಮಸುಕಾಗಿ ಕುಟುಂಬದ ಪರಿಕಲ್ಪನೆಯ ಅಡಿಪಾಯವೇ ಆಘಾತಕ್ಕೊಳಗಾಗಿದೆ ಎನಿಸುವುದಿಲ್ಲವೆ?

೩. ಮಹಿಳಾ (ಹಕ್ಕುಗಳ) ಚಳುವಳಿ ಹೆಣ್ಣಿನ ಅನನ್ಯ ಶಕ್ತಿ–ಸಾಮರ್ಥ್ಯಗಳಿಗೆ ದೊರೆಯದ ನ್ಯಾಯಕ್ಕಿಂತ ಹೆಚ್ಚಾಗಿ ಗಂಡಸಿನೊಡನೆಯ ಸಮಾನತೆಯ ಸ್ಪರ್ಧೆಯೆಡೆಗೇ ಹೆಚ್ಚು ಒಲವು ತೋರುತ್ತಿದೆ ಎನ್ನಿಸುವುದಿಲ್ಲವೆ?

ಒಂದನ್ನು ಪಡೆಯಲು ಇನ್ನೊಂದನ್ನು ತುಸು ತ್ಯಾಗ ಮಾಡಬೇಕು.



೧. ಗೈಹಿಕವಾಗಿ ಹೆಣ್ಣು ಗಂಡುಗಳ ನಡುವೆ ವ್ಯತ್ಯಾಸ ಇರುವುದರಿಂದಲೇ ಪರಸ್ಪರ ಆಕರ್ಷಣೆ ಹಾಗೂ ಜೀವಸಂತಾನದ ಉದಯವಾಗುತ್ತದೆ. ಹೆಣ್ಣಿಗೆ ಮಾನಸಿಕ ಸ್ಥೈರ್ಯ ಜಾಸ್ತಿ. ಆಕೆ ಮಮತೆ ಮತ್ತು ಅಸ್ಮಿತೆಗಳ ತವರು. ಗಂಡು ಪೌರುಷಕ್ಕೆ ದಾಸ. ಆತ ಅಹಮ್ಮಿನ ಪ್ರತೀಕ. ಆದರೂ ಇಬ್ಬರೂ ನಿರ್ವಹಿಸುವ ಕೆಲಸಗಳು ಸವಾಲಿನವೇ. ಹಿಂದೆ ಹೆಣ್ಣು ಅಂತರಂಗದ, ಮಮತೆಯ ಅಧಿದೇವತೆ ಮತ್ತು ಗಂಡು ಬಹಿರಂಗದ ವೀರಪುರುಷ ಎನ್ನುವ ಅಂತರ ಢಾಳಾಗಿ ಇತ್ತು. ಇಂದು ಹೆಣ್ಣಿನಲ್ಲಿ ಗಂಡು, ಗಂಡಿನಲ್ಲಿ ಹೆಣ್ಣಿನ ಭಾವ ಬೆಳೆದು ಬೇರೂರುತ್ತಿದೆ. ಹೆಣ್ಣು ಮಾಡುವ ಕೆಲಸ ಗಂಡೂ ಮಾಡಬಲ್ಲ, ಗಂಡಿನ ಕೆಲಸ ಹೆಣ್ಣು ನಿರ್ವಹಿಸಬಹುದು ಎನ್ನುವ ಹಂತ ಮುಟ್ಟುತ್ತಿದ್ದೇವೆ. ಅವರಿಬ್ಬರ ನಡುವಿನ ವ್ಯತ್ಯಾಸದ ಗೆರೆ ಮಸಕಾಗಿದೆ ಎನಿಸಿದೆ.

೨: ಇಂದು ಹೆಣ್ಣು ವಿದ್ಯಾಭ್ಯಾಸದಲ್ಲಿ ಗಂಡಿಗೆ ಸರಿಸಮನಾಗಿ ನಿಂತಿದ್ದಾಳೆ. ಶಿಕ್ಷಣ ಪಡೆದ ಹೆಣ್ಣು ಗಂಡಿನ ಸಮಾನವಾಗಿ ದುಡಿಯ ಹೊರಟಿದ್ದಾಳೆ. ಜೀವಕೇಂದ್ರವೆನಿಸುವ ತಾಯ್ತನಕ್ಕೆ ಸ್ವಲ್ಪ ಧಕ್ಕೆಯುಂಟಾಗಿದೆ. ತಾಯಿಯ ಪ್ರೀತಿ ಕೊಡುವ ಸಂಬಂಧಿಕರೋ ಅಜ್ಜಿಯೋ ಇದ್ದಾಗ ಮಗುವಿನ ರಕ್ಷಣೆ ಆಗುತ್ತದೆ. ಆದರೆ ತಾಯ್ತನದ ಸಂದರ್ಭದಲ್ಲಿ ಹಿಂದಿ ಗಾದೆ ನೆನಪಿಗೆ ಬರುತ್ತದೆ, 'ಕುಚ್ ಪಾನೇಕೆ ಲಿಯೇ ಕುಚ್ ಕೋನಾಹೈ', ಅಂದರೆ, ಒಂದನ್ನು ಪಡೆಯಲು ಇನ್ನೊ ಂದನ್ನು ತುಸು ತ್ಯಾಗ ಮಾಡಬೇಕು. ಇಲ್ಲಿ ತ್ಯಾಗ ಬೇಕಿಲ್ಲ. ಅದರ ಬದಲು ಅನ್ಯೋನ್ಯ ಹೊಂದಾಣಿಕೆ ಬೇಕಾಗಿದೆ.


೩: ಮಹಿಳಾ ಹೋರಾಟಗಳು, ಚಳವಳಿಗಳು ಮೊದಮೊದಲು ಹೆಚ್ಚಾಗಿ ಗಂಡಿನ ವಿರೋಧವಾಗಿಯೇ ಇದ್ದವು. ಈಗೀಗ ಆ ಭಾವನೆ ಕಡಿಮೆಯಾಗಿ ಸಾರ್ವಜನಿಕ ಸ್ವರೂಪದ ಹೋರಾಟದ ಕಡೆ ಹೊರಳಿದೆ. ಇಂದು ಪರಿವರ್ತನೆಯ ಹೊಸ ಗಾಳಿ ಬೀಸಿದೆ.

–ಕಮಲಾ ಹಂಪನಾ, ನಿವೃತ್ತ ಅಧ್ಯಾಪಕಿ,ಹಿರಿಯ ಲೇಖಕಿ, ಬೆಂಗಳೂರು

ನಮ್ಮ ಹೋರಾಟಗಳಿಂದ ಒಬ್ಬ ಗಂಡಸನ್ನಾದರೂ ಬದಲಿಸಿದ್ದೇವೆಯೆ?

೧. ದೈಹಿಕ ವ್ಯತ್ಯಾಸಗಳ ಹೊರತಾಗಿ, ಗಂಡಿಗೆ ಪ್ರಕೃತಿದತ್ತವಾ' ನಡುವೆ ಗೆರೆ ಎಳೆಯುವುದು ಕಷ್ಟ. ಯುದ್ಧಭೂಮಿಯನ್ನು ಬಿಟ್ಟರೆ (ಈಗ ಹೆಣ್ಣು ಅಲ್ಲಿಗೂ ಕಾಲಿಡುತ್ತಿದ್ದಾಳೆ) ಎಲ್ಲ ರಂಗಗಳಲ್ಲಿ ಸರಿಸಮನಾಗಿ ಹೆಣ್ಣು ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾಳೆ. ಮುಟ್ಟು, ಗರ್ಭಧಾರಣೆ, ಹೆರಿಗೆ, ತಾಯ್ತನ ಇವುಗಳನ್ನು ಪರಿಗಣಿಸಿದರೆ ಹೆಣ್ಣಿನ ಜವಾಬ್ದಾರಿಯೇ ಹೆಚ್ಚು.

೨. ಸಮಾನವಾಗಿ ಹೊರಗೆ ದುಡಿಯಲು ಹೊರಟಿರುವ ಈ ಕಾಲದಲ್ಲಿ ಆರ್ಥಿಕ ಸಮಾನತೆ, ಭದ್ರತೆ ದೊರಕಿರುವುದಾದರೂ ತಾಯ್ತನದ ಆಯಾಮಗಳು ಮಸುಕಾಗಿ, ಕುಟುಂಬದ ಪರಿಕಲ್ಪನೆ ಕುಸಿಯುತ್ತಿರುವುದು ನಿಜ. ಕೆಲವರು ಆರ್ಥಿಕ ಸ್ವಾತಂತ್ರ, ನಗರ ಜೀವನ ಇವುಗಳನ್ನು ಇಷ್ಟಪಟ್ಟು ಮಕ್ಕಳು ಬೇಡ ಇದೊಂದು ಭಾರ ಎಂದು ತೀರ್ಮಾನಿಸುವವರೂ ಇದ್ದಾರೆ. ಇಂತಹ ಅಭಿಪ್ರಾಯ ಉಳ್ಳವರ ಸಂಖ್ಯೆ ಹೆಚ್ಚಾಗುತ್ತಿದೆ. ಇದು ಖಂಡಿತ ಆಘಾತಕಾರಿ ಮತ್ತು ಜೀವ ವಿರೋಧಿ ನಿಲುವು ಎನಿಸುತ್ತದೆ.



೩. ಖಂಡಿತ ಹೌದು. ನಮ್ಮಲ್ಲಿ ನಡೆದಿರುವ, ನಡೆಯುತ್ತಿರುವ ಮಹಿಳಾ ಹೋರಾಟಗಳು ದಿಕ್ಕನ್ನು ಬದಲಿಸಬೇಕಾಗಿದೆ. ಇಷ್ಟು ದಿನ ನಮ್ಮ ಹೋರಾಟಗಳಿಂದ ಒಬ್ಬ ಗಂಡಸನ್ನಾದರೂ ಬದಲಿಸಿದ್ದೇವೆಯೆ? ಈತನ ಪತ್ನಿ ಪೀಡಕತನ, ಅತ್ಯಾಚಾರ ಗುಣ ಇವುಗಳನ್ನು ಸ್ವಲ್ಪವಾದರೂ ಬದಲಾಯಿಸಿದೆಯಾ? ಸರ್ಕಾರಿ, ಖಾಸಗಿ ಕ್ಷೇತ್ರಗಳಲ್ಲಿ ದೊಡ್ಡ ಹುದ್ದೆಗಳನ್ನು ಪಡೆದು ವಿಜೃಂಭಿಸಿದರೆ ಸಾಲದು. ನಿಜವಾಗಿಯೂ ಗಂಡಸಿನ ಪ್ರವೃತ್ತಿಯನ್ನು ಬದಲಿಸುವುದು ಸ್ತ್ರೀ ಹೋರಾಟಗಳ ಗುರಿಯಾಗಬೇಕು.

–ಪದ್ಮಾ ಶ್ರೀರಾಮ, ಹಿರಿಯ ಸಮಾಜವಾದಿ ಚಿಂತಕಿ, ಲೇಖಕಿ ಮೈಸೂರು

ಪಿತೃ ಪ್ರಧಾನ ಮೌಲ್ಯಗಳ ವಿರುದ್ಧ' ಎಂದರೆ ಗಂಡಸಿನ ವಿರುದ್ಧವಲ್ಲ



. ೧.ಹುಟ್ಟಿನದ್ದಲ್ಲ, ಸಾಮಾಜಿಕ ರಚನೆಯದು. ಜವಾಬ್ದಾರಿಗಳು ಹಂಚಿಕೆಯಾಗಿವೆ. ಆದರೆ ಗೆರೆಗಳನ್ನು ದಾಟಿ ಸಮರ್ಥವಾಗಿ ನಿರ್ವಹಿಸಿದ ಉದಾಹರಣೆಗಳು ಎಲ್ಲ ಕಾಲದಲ್ಲೂ ಇದ್ದವು. ಈಗ ಎಚ್ಚರದಿಂದ ಗೆರೆ ದಾಟಿ ಸಮನಾಗಿ ನಿಂತು ಸವಾಲನ್ನೆದುರಿಸುತ್ತಿದ್ದೇವೆ.

೨. 'ಕುಟುಂಬ' ಅವಳ ಜವಾಬ್ದಾರಿ ಮಾತ್ರ ಅಲ್ಲ, ಅವನದೂ ಕೂಡ. ಈ ಅರಿವು 'ಅವನಿಗೆ' ಬರುವವರೆಗೆ ಅವಳು ಕುಟುಂಬದ ಅಡಿಪಾಯವನ್ನು ಅಲುಗಾಡಿಸುತ್ತಲೆ ಇರುತ್ತಾಳೆ. ಹೇಗೆ ಅವಳು ಹೊರಗೂ ದುಡಿದು ಆರ್ಥಿಕ ನೆರವಿಗೆ ಸಾಥ್ ಕೊಟ್ಟಳೋ ಹಾಗೆ ಅವನು 'ತಾಯ್ತನ'ದ ಜವಾಬ್ದಾರಿಗಳನ್ನೂ ಹಂಚಿಕೊಂಡಾಗಲೆ ಅದು 'ಕುಟುಂಬ' ಆಗುತ್ತದೆ.

ಒಂದು 'ಸ್ಟ್ರಕ್ಚರಲ್ ವಯೊಲೆನ್ಸ್' ತನ್ನಷ್ಟಕ್ಕೆ ಕೆಲಸ ಮಾಡುತ್ತಿದೆಯಷ್ಟೇ. 'ಅನನ್ಯ' ಎಂದರೆ ಅವಳಲ್ಲಿ ಬಯಸುವ ಸಹನೆಯೇ ಆದರೆ ಒಟ್ಟಿಗೆ ಕರೆದೊಯ್ಯುವ, ಪೋಷಿಸುವ ಗುಣ ಇಬ್ಬರದ್ದೂ, ಇಡೀ ಸಮಾಜದ್ದೂ ಆಗಬೇಕಲ್ಲವೆ?

'೩. ಪಿತೃ ಪ್ರಧಾನ ಮೌಲ್ಯಗಳ ವಿರುದ್ಧ' ಎಂದರೆ ಗಂಡಸಿನ ವಿರುದ್ಧವಲ್ಲ, ಅದು ವ್ಯವಸ್ಥೆ, ಸರ್ಕಾರ, ಅಧಿಕಾರ, ಸಮಾಜ ಇಲ್ಲಿರುವ ಅಸಮಾನತೆ, ಹತ್ತಿಕ್ಕುವ ಪ್ರವೃತ್ತಿಯನ್ನು ವಿರೋಧಿಸದೆ ಒಪ್ಪಿಕೊಳ್ಳುವ ಎಲ್ಲರನ್ನೂ ಕುರಿತದ್ದಾಗಿದೆ. ಅಲ್ಲಿ ಗಂಡೂ ಇದ್ದಾನೆ, ಹೆಣ್ಣೂ ಇದ್ದಾಳೆ. ಜೊತೆಗೆ ಲಿಂಗತ್ವ ಅಸಮಾನತೆಯ ಜನರನ್ನೂ ಒಳಗೊಳ್ಳಬೇಕಿದೆ.

ಜಾತಿ, ವರ್ಗ, ಲೈಂಗಿಕ ಸಂಘರ್ಷ, ವ್ಯಾಪಾರೀಕರಣ ಅಸಮಾನತೆಗಳು 'ಕುಟುಂಬ'ದೊಂದಿಗೂ ತಳುಕು ಹಾಕಿಕೊಂಡಿವೆ. ಇದೆಲ್ಲದರ ವಿರುದ್ಧ ಸಮಾನತೆಯ ಆಶಯ, ದೃಷ್ಟಿಕೋನ, ಮಾನವೀಯ ನೆಲೆ ಮಹಿಳಾ ಚಳವಳಿಯ ಆದ್ಯತೆಗಳು. ಅದು ದಲಿತ, ರೈತ, ಕಾರ್ಮಿಕ ಮೊದಲಾದ ಎಲ್ಲ ಚಳವಳಿಯನ್ನೂ ಒಳಗೊಂಡಿದೆ.

–ವಿಜಯಾ, ಹಿರಿಯ ಮಹಿಳಾ ಹೋರಾಟಗಾರ್ತಿ, ಲೇಖಕಿ, ಬೆಂಗಳೂರು

ಹೆಣ್ಣು ಸತ್ವವು ಗಂಡು ಸತ್ವಕ್ಕಿಂತ ಯಾವತ್ತಿಗೂ ಘನವಾದದ್ದು.



೧.ಸ್ವಭಾವದಲ್ಲಿಯೇ ವ್ಯತ್ಯಾಸವಿದೆ. ಹೆಣ್ಣಿನಲ್ಲಿ ಸ್ವಭಾವತಃ ಇರುವ ಮೃದುತನ, ಕರುಣಾರ್ದ್ರತೆ, ಅನುನಯತೆ ಮುಂತಾದವು ಗಂಡಲ್ಲಿ ಕಂಡಾಗ ಆತನದು 'ಹೆಂಗರುಳು' ಎಂಬ ಮಾತಿನಲ್ಲಿಯೇ ಅದು ಅಡಗಿದೆ. ಹೆಂಗರುಳು ಎನ್ನುವುದು ಹೆಣ್ಣಿನ ಸಹಜಗುಣದ ನಾಮಧೇಯ. ಅಂಥ ಗುಣಗಳಿಲ್ಲದ ಹೆಣ್ಣುಗಳು ಇಲ್ಲವೆಂದಲ್ಲ. ಅಪವಾದಗಳೂ ಇರಬಹುದು. ನನಗೆ ಕಾಣುವಂತೆ, ಗಂಡು ಮತ್ತು ಹೆಣ್ಣುಗಳ ನಡುವಿನ ಮುಖ್ಯ ವ್ಯತಾಸ ಇದು. ಗೆರೆಯ ಪ್ರಶ್ನೆ ಏಳುವುದು ಅವರ ವೃತ್ತಿ ಮತ್ತು ಜವಾಬ್ದಾರಿಗಳ ಸ್ವರೂಪ ಎಂತಹದು ಎಂಬುದರ ಮೇಲೆ.

೨: ಮಗು ಮಲಗಿದ ಜೋಲಿಯನ್ನು ಮರದ ಕೊಂಬೆಗೆ ಕಟ್ಟಿ ದೂರದಗದ್ದೆಯಲ್ಲಿ ನೆಟ್ಟಿ ನೆಡುವ ಕಟ್ಟಡ ಕಟ್ಟುವ ಇಟ್ಟಿಗೆ ಸಿಮೆಂಟು ಹೊಯಿಗೆ ಗಾರೆ ಹೊರುವ ಮಹಿಳೆಯರನ್ನು ನೆನೆಸಿಕೊಳ್ಳಿ. ಅವರು ತಮ್ಮ ಮಗುವಿನ ಜವಾಬ್ದಾರಿಯಿಂದ ತಾಯ್ತನದ ಆಯಾಮಗಳಿಂದ ಕುಟುಂಬದಿಂದ ಹೊರಗಿರುವರೆ? ವಿದ್ಯಾವಂತ ಮಹಿಳೆಯರ ಕಾರ್ಯ ಮಾದರಿಗಳು ಬೇರೆ ಇರಬಹದು. ಆದರೆ ಅವರು ಎಲ್ಲೇ ಇದ್ದರೂ ಮಕ್ಕಳ ಹಾಗೂ ಕುಟುಂಬದ ಚಿಂತೆ ಹಿನ್ನೆಲೆಯಲ್ಲಿ ಶ್ರುತಿಯಂತೆ ಮೀಟುತ್ತಲೇ ಇರುತ್ತದೆ. ಈ ಚಿಂತೆ ನಿಭಾಯಿಸಲು ಅವಳು ಈಗ ತಂದೆಯಲ್ಲಿ ತಾಯಿಯ ಗುಣವನ್ನು ಬಿತ್ತುವಲ್ಲಿ ನಿಧಾನ ಜಯಿಸುತಿದ್ದಾಳೆ. ಮಗುವಿನ ಕಾಳಜಿಯಲ್ಲಿ ಆತನನ್ನೂ ಒಳಗೊಳಿಸಿಕೊಳ್ಳುವ ಬಗೆಯನ್ನು ಕಂಡುಕೊಳ್ಳುತಿದ್ದಾಳೆ.

೩ :ಅವಳ ಚಳವಳಿ ಮತ್ತು ಅವಳ ಶಕ್ತಿ ಸಾಮರ್ಥ್ಯಗಳ ವಿಚಾರ ಬೇರೆಬೇರೆಯೇ. ಆಕೆಯ ಆಂತರಿಕ ಶಕ್ತಿ ಮತ್ತು ಸಾಮರ್ಥ್ಯದೆದುರು ಸ್ಪರ್ಧಿಸಿದರೆ ಗಂಡಿಗೆ ಸೋಲು ಕಟ್ಟಿಟ್ಟದ್ದು. ಹೆಣ್ಣು ಸತ್ವವು ಗಂಡು ಸತ್ವಕ್ಕಿಂತ ನಿಸ್ಸಂಶಯವಾಗಿ ಯಾವತ್ತಿಗೂ ಘನವಾದದ್ದು. ಇಲ್ಲಿ ಚಳವಳಿ ಇರುವದೇ ಅವಳು 'ಹೆಣ್ಣು' ಎಂಬ ಕಾರಣಕ್ಕಾಗಿ 'ಅಡ್ಡಪಂಕ್ತಿ' ಹಾಕುವ ವಿರುದ್ಧ. 'ಹೆಣ್ಣು ಇರಬೇಕಾದ್ದೇ ಹಾಗೆ' ಎಂಬ ನಿಂತ ನೀರಂತಹ ಸ್ಥಗಿತ ಕಲ್ಪನೆಯ ವಿರುದ್ಧ.

–ವೈದೇಹಿ, ಹಿರಿಯ ಲೇಖಕಿ, ಗೃಹಿಣಿ, ಮಣಿಪಾಲ

ತಾಯ್ತನ ಹೆಣ್ಣಿಗಿರುವ ಅನನ್ಯ ಶಕ್ತಿ ಎಂದು ವೈಭವೀಕರಿಸುವುದೇ ತಪ್ಪು.



೧. ದೈಹಿಕ ವ್ಯತ್ಯಾಸಗಳ ಹೊರತಾಗಿ ಗಂಡು ಮತ್ತು ಹೆಣ್ಣಿನ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಉಳಿದೆಲ್ಲಾ ವ್ಯತ್ಯಾಸಗಳೂ ಮನೆಯವರಿಂದ, ಸಮಾಜದಿಂದ ಹೇರಲ್ಪಟ್ಟ ವ್ಯತ್ಯಾಸಗಳಾಗಿವೆ. ವ್ಯತ್ಯಾಸಗಳೇ ಇಲ್ಲವಾದ್ದರಿಂದ ಖಂಡಿತವಾಗಿ ಅವರು ಮಾಡಬಹುದಾದ, ನಿರ್ವಹಿಸಬಹುದಾದ ವೃತ್ತಿ ಮತ್ತು ಜವಾಬ್ದಾರಿಗಳ ನಡುವೆ ಯಾವುದೇ ಗೆರೆಯನ್ನೂ ಎಳೆಯಲಿಕ್ಕೆ ಸಾಧ್ಯವಿಲ್ಲ. ಎಳೆಯಕೂಡದು.

೨. ಅವಳ ಜೀವಕೇಂದ್ರವೆನಿಸಿದ ತಾಯ್ತನ ಮುಸುಕಾಗಿ ಕುಟುಂಬದ ಅಡಿಪಾಯವೇ ಅಘಾತಕ್ಕೊಳಗಾಗಿದೆ ಎಂಬ ಕಲ್ಪನೆ ಆಧಾರವಿಲ್ಲದ್ದು. ಅಂಥ ಅನಾಹುತವೇನೂ ಆಗಿಲ್ಲ. ಹೌದು, ಹೆಣ್ಣು ಬಸಿರಾಗುತ್ತಾಳೆ, ಮಗುವನ್ನು ಹಡೆಯುತ್ತಾಳೆ, ಮಗುವಿಗೆ ಅತ್ಯಗತ್ಯವಾದ ತಾಯಹಾಲನ್ನು ಉಣಿಸುತ್ತಾಳೆ. ಈ ಮೂರು ಕಾರ್ಯಗಳ ಹೊರತಾಗಿ ಉಳಿದೆಲ್ಲವನ್ನೂ– ಮಗುವಿಗೆ ಲಾಲಿ ಹಾಡುವುದು, ಬಟ್ಟೆ ಬದಲಿಸುವುದು, ಸ್ನಾನಕ್ಕೆ ಹಾಕುವುದು, ಮಮತೆ ತೋರುವುದು, ಮೊದಲ ಅಕ್ಷರ ಕಲಿಸುವುದು ಇವೆಲ್ಲವನ್ನೂ ತಾಯಿಯಷ್ಟೇ ಸಮರ್ಥವಾಗಿ ತಂದೆಯೂ ಮಾಡಬಹುದು, ಮಾಡುತ್ತಿರುವವರು ನಮ್ಮ ಮಧ್ಯೆ ಇದ್ದಾರೆ.

ಗಂಡಿನ ಕ್ಷೇತ್ರವೆಲ್ಲದರಲ್ಲೂ ಹೆಣ್ಣು ಸಮಾನವಾಗಿ ದುಡಿಯುತ್ತಿದ್ದಾಳೆ. ಹಾಗೆಯೇ ತಾಯ್ತನದ ಭಾರವನ್ನೂ ಹೊರುತ್ತಾಳೆ. ಹೆಣ್ಣು ತಾಯಿಯಾಗದೇ ಈ ಸಮಾಜ ಮುಂದುವರೆಯಲು ಸಾಧ್ಯವಿಲ್ಲ. ಆ ಜವಾಬ್ದಾರಿಯನ್ನು ಸುಗಮವಾಗಿ ನಿರ್ವಹಿಸುವುದಕ್ಕೆ ಆ ಸಂದರ್ಭದಲ್ಲಿ ಗಂಡ, ಕುಟುಂಬದವರು, ಕೆಲಸ ಕೊಟ್ಟವರು, ಎಲ್ಲರೂ ಅವಳಿಗೆ ಬೆಂಬಲವಾಗಿ ನಿಲ್ಲಬೇಕಾದ ಜವಾಬ್ದಾರಿ, ಕರ್ತವ್ಯ ಸಮಾಜದ್ದಾಗಿದೆ. ಆ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದಿರುವುದರಿಂದಲೇ ಕುಟುಂಬದ ಅಡಿಪಾಯ ಅಲುಗಾಡುತ್ತಿದೆಯಷ್ಟೇ.

ತಾಯ್ತನ ಹೆಣ್ಣಿಗಿರುವ ಅನನ್ಯ ಶಕ್ತಿ ಎಂದು ವೈಭವೀಕರಿಸುವುದೇ ತಪ್ಪು. ಹಾಗೆ ಹೊಗಳಿ ಹೆಣ್ಣನ್ನು ಹೊನ್ನ ಶೂಲಕ್ಕೇರಿಸಲಾಗಿದೆ!

ಗಂಡಸಿನೊಡನೆ ಸಮಾನತೆಯ ಸ್ಪರ್ಧೆಯೆಡೆಗೆ ಮಹಿಳಾ ಚಳುವಳಿ ಹೆಚ್ಚು ಒಲವು ತೋರುತ್ತಿದೆ ಎನ್ನುವುದು ಕೂಡ ತಪ್ಪಭಿಪ್ರಾಯ. ಯಾರೂ ಯಾರೊಂದಿಗೂ ಸ್ಪರ್ಧಿಸುತ್ತಿಲ್ಲ. ಸಮಾನ ಶಿಕ್ಷಣ ಪಡೆದ ಗಂಡೂ, ಹೆಣ್ಣೂ ಅವಕಾಶ ಸಿಕ್ಕಲ್ಲಿ ಹೋಗುತ್ತಿದ್ದಾರೆ ಅಷ್ಟೇ.

–ಶಾರದಾ ಗೋಪಾಲ, ಮಹಿಳಾ ಸಂಘಟಕಿ, ಲೇಖಕಿ, ಧಾರವಾಡ

ಈ ಕಾಲಘಟ್ಟದಲ್ಲಿ ಆಕೆ ಕಳೆದುಕೊಂಡಿರುವುದೇ ಬಹಳವಿರಬಹುದಲ್ಲವೆ?



೧, ಗಂಡು ಮತ್ತು ಹೆಣ್ಣಿಗಿರುವ ದೈಹಿಕ ವ್ಯತ್ಯಾಸ ಕಣ್ಣಿಗೆ ಎದ್ದು ಕಾಣುವಂಥದ್ದು. ಹೆಣ್ಣು ಮತ್ತು ಗಂಡಿಗಿರುವ ನಿಜವಾದ ವ್ಯತ್ಯಾಸಗಳು ಮಾನಸಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಲೋಕಕ್ಕೆ ಸಂಬಂಧಿಸಿರುವಂಥವು. ಏಕೆಂದರೆ, ಹೆಣ್ಣಿನ ಕುರಿತಿರುವ ಎಲ್ಲ ಪರಿಕಲ್ಪನೆಗಳನ್ನೂ ಕಟ್ಟಿರುವುದೇ ಪುರುಷಕೇಂದ್ರಿತ ಸಮಾಜ. ಮತ್ತು ಮೇಲೆ ಸೂಚಿಸಿದ ಎಲ್ಲವನ್ನೂ ನಿಯಂತ್ರಿಸುವುದೇ ಪುರುಷ ಕಟ್ಟಳೆ. ಅಧಿಕಾರವನ್ನು ಯಾರು ನಿಯಂತ್ರಿಸಬೇಕು ಎನ್ನುವುದೇ ಇಲ್ಲಿ ಮುಖ್ಯ ವಿಷಯ. ಅಸ್ತಿತ್ವವನ್ನೇ ನಿರಾಕರಿಸಿ ಬಿಟ್ಟರೆ ಹಂಚಿಕೆಯ ಪ್ರಶ್ನೆಯೇ ಹುಟ್ಟುವುದಿಲ್ಲವೆನ್ನುವುದೇ ಹುನ್ನಾರ. ಎಷ್ಟೇ ಮುಂದುವರಿದ ಸಮಾಜವಾದರೂ ನಿರ್ಣಾಯಕ ವಿಷಯಗಳಲ್ಲಿ ಹೆಣ್ಣನ್ನು ಎರಡನೆಯ ಸ್ಥಾನದಲ್ಲಿಯೇ ನೋಡಲಾಗುತ್ತದೆ. ಆಕೆಯ ಸಾಮರ್ಥ್ಯ, ಛಲ, ಆತ್ಮವಿಶ್ವಾಸ ಮತ್ತು ಕಟ್ಟುವ ಶಕ್ತಿಗಳನ್ನು ಅಪನಂಬಿಕೆಯಿಂದ ನೋಡುವುದರಿಂದ ತಾರತಮ್ಯವಿದ್ದೇ ಇರುತ್ತದೆ. ಅಧಿಕಾರವನ್ನು ಪ್ರಶ್ನಿಸಿದೊಡನೆಯೇ ಆಕೆಯ ಭಾವುಕತೆಯ ಮೇಲೆ ಹಲ್ಲೆ ಮಾಡಲಾಗುತ್ತದೆ.

೨. ಹೆಣ್ಣಿನ ದುಡಿಮೆಗೆ ಅವಕಾಶ ಒದಗಿರುವುದೇ ಆಕೆ ಉಳಿದವರನ್ನು ಆರ್ಥಿಕವಾಗಿ ಬಿಡುಗಡೆಗೊಳಿಸುತ್ತಾಳೆ ಎಂದು. ಈ ಪ್ರಕ್ರಿಯೆಯಲ್ಲಿ ಆಕೆ ಸ್ವಾವಲಂಬತೆ, ಸ್ವಲ್ಪಮಟ್ಟಿಗಿನ ಆರ್ಥಿಕ ಸ್ವಾತಂತ್ರ್ಯ ಮತ್ತು ಮೇಲ್ಪದರಿನ ಆಶಯಗಳನ್ನು ಈಡೇರಿಸಿಕೊಳ್ಳುತ್ತಾಳೆನ್ನುವುದು ನಿಜವಾದರೂ! ತಾಯ್ತನದ ಪಾವಿತ್ರ್ಯವನ್ನು, ಕುಟುಂಬದ ಸೌಖ್ಯದ ಪರಿಕಲ್ಪನೆಯನ್ನು ಕಟ್ಟಿರುವುದು ಕೂಡ ಪುರುಷರ ಮನಸ್ಸೇ. ಇವೆಲ್ಲವುದರಿಂದ ಆಕೆಗೆ ವೈಯಕ್ತಿಕ ಸಂತೋಷ, ಸಾರ್ಥಕತೆ ದೊರಕಿರಬಹುದಾಗಿದ್ದರೂ ಈ ಕಾಲಘಟ್ಟದಲ್ಲಿ ಆಕೆ ಕಳೆದುಕೊಂಡಿರುವುದೇ ಬಹಳವಿರಬಹುದಲ್ಲವೆ?

೩. ಒಂದು ಸಮಸ್ಯಾತ್ಮಕ ಕಾಲಘಟ್ಟದಲ್ಲಿ ನಡೆಯುವ ಯಾವುದೇ ಬಗೆಯ ಅಸ್ತಿತ್ವ ನಿರೂಪಣೆಯ ಹೋರಾಟಗಳಲ್ಲಿ ಸಕಾರಾತ್ಮಕ–ನಕಾರಾತ್ಮಕ ಮತ್ತು ಅಂಚಿನ ನಿಲುವುಗಳು ಇದ್ದೇ ಇರುತ್ತವೆ. ಈ ಚಳವಳಿಯಲ್ಲಿ ಲಿಂಗತ್ವವೇ ಪ್ರಧಾನವಾಗಿರುವುದರಿಂದ ಇದು ಎದ್ದು ಕಾಣುತ್ತಿರಬಹುದಷ್ಟೇ. ಜಾತಿ, ಧರ್ಮ, ಜನಾಂಗ ಮತ್ತು ಅದೇ ಬಗೆಯ ಹಕ್ಕುಮಂಡನೆಗಾಗಿ ನಡೆಯುವ ಹೋರಾಟಗಳಿಗೂ ಈ ಪ್ರಶ್ನೆಯನ್ನು ಕೇಳಬಹುದು.

–ಎಂ.ಆರ್. ಕಮಲ, ನಿವೃತ್ತ ಅಧ್ಯಾಪಕಿ, ಕವಯತ್ರಿ, ಬೆಂಗಳೂರು

ಹೆಣ್ತನ ಮನಸ್ಸಿನ ಮಾಗುವಿಕೆ, ಅದು ಗಂಡಿಗೂ ಹೊರತಾದುದಲ್ಲ



1. ಹೆಣ್ಣು–ಗಂಡು ಎಂಬುದು ವ್ಯಕ್ತಿತ್ವದ ವ್ಯತ್ಯಾಸಗಳಲ್ಲ. ಆದರೆ ಅದನ್ನು ಹಾಗೆ ಸ್ಥಿರೀಕರಿಸಿಕೊಂಡು ಬರಲಾಗಿದೆ. ಗುಣ–ಸ್ವಭಾವಗಳು ಜೈವಿಕವಾದುದಲ್ಲ. ಅವು ಸಾಂಸ್ಕೃತಿಕ ಒಪ್ಪಿತಗಳು. ಕಲಿಕೆಗಳು. ಹೆಣ್ಣು–ಗಂಡು ಎಂಬ ವಿರೋಧದಲ್ಲಿಯೇ ಮಗುವನ್ನು ಬೆಳೆಸುವುದರಿಂದ ಅವು ವ್ಯಕ್ತಿತ್ವದ ವ್ಯತ್ಯಾಸಗಳಾಗಿ ಕಾಣುತ್ತವೆ. ವ್ಯತ್ಯಾಸಗಳಾಗಿಯಷ್ಟೇ ಉಳಿಯದೆ, ಮೇಲರಿಮೆ–ಕೀಳರಿಮೆಗಳಾಗಿ ವಿವರಣೆಗೊಂಡಿವೆ. ಗಂಡಿಗೆ ಸಂಬಂಧಿಸಿದ್ದೆಲ್ಲ ಸಬಲವಾಗಿ, ಸಶಕ್ತವಾಗಿ; ಹೆಣ್ಣಿನ ಜಗತ್ತು ದುರ್ಬಲ, ಅಶಕ್ತವಾಗಿ ಅರ್ಥ ಪಡೆದಿವೆ. ಗಂಡು–ಹೆಣ್ಣುಗಳು ನಿರ್ವಹಿಸಬಹುದಾದ ವೃತ್ತಿ–ಜವಾಬ್ದಾರಿಗಳಲ್ಲಿ ವ್ಯತ್ಯಾಸ ಇರಬೇಕಾಗಿಲ್ಲ. ಹೆಣ್ಣು ಪೈಲಟ್ ಆಗುವುದು ಗಂಡು ಹಸುಗೂಸಿಗೆ ನೀರೆರೆಯುವುದು ಅಸಾಧ್ಯವೇನಲ್ಲ.

೨. ಆಧುನಿಕ ಕಾಲ, ಬಂಡವಾಳವಾದಿ ಆಕ್ರಮಣಕ್ಕೆ ಈಡಾಗಿದೆ. ಮಾರುಕಟ್ಟೆ ಮನಸ್ಸಿನೊಳಗೂ ಸ್ಥಾಪಿತವಾಗಿದೆ. ಕುಟುಂಬದ ಪರಿಕಲ್ಪನೆ ಅಸ್ಥಿರಗೊಳ್ಳುವುದಕ್ಕೆ ಹೆಣ್ಣಿನ ಹೊರದುಡಿಮೆ ಮಾತ್ರ ಕಾರಣವಲ್ಲ. ಬದಲಾದ ವಿದ್ಯಮಾನದಲ್ಲಿ ಕುಟುಂಬದ ರಚನೆ ಬದಲಾಗಬೇಕಿದೆ. ಹೊರದುಡಿಮೆ ಹೆಣ್ಣಿನ ಆಯ್ಕೆಯಾಗಿದ್ದಲ್ಲಿ ಅದಕ್ಕೆ ಪೂರಕವಾಗಿ ಅವಳ ಕುಟುಂಬ ಸ್ಪಂದಿಸಬೇಕಿದೆ. ಕುಟುಂಬ ಎಂದರೆ ಕೂಡುಕಟ್ಟು ಎಂಬ ಪರಿಕಲ್ಪನೆಗೆ ಮರುನಿರ್ವಚನ ಒದಗಬೇಕಿದೆ. ಹೆಣ್ಣು ಕುಟುಂಬಕ್ಕೇ ಸೀಮಿತ ಮಾತ್ರಕ್ಕೇ ಅದೊಂದು ಯಶಸ್ವೀ ಕುಟುಂಬವಾಗುತ್ತದೆ ಎಂದೇನೂ ಅಲ್ಲ.

೩. ಅನಾದಿಯಿಂದಲೂ ಹೆಣ್ಣು ತುಳಿಸಿಕೊಂಡೂ ತಲೆಯೆತ್ತಿದವಳು. ತುಳಿವ ಪಾದಗಳನ್ನೂ ಸಂಭಾಳಿಸಿದವಳು. ಆ ಮೂಲಕ ಹೆಣ್ತನಕ್ಕೆ ಸ್ವಾಯತ್ತ ಶಕ್ತಿ, ಚೆಲುವನ್ನು ನೀಡಿದವಳು. ಹೌದು, ಮಹಿಳಾ ಚಳುವಳಿ ಆರಂಭದಿಂದಲೂ ದೌರ್ಜನ್ಯ, ಆಕ್ರಮಣಗಳನ್ನು ವಿವರಿಸಿಕೊಳ್ಳಲು ಅದರ ಕಾರಣದ ತಾತ್ವಿಕತೆಯನ್ನು ಶೋಧಿಸಿಕೊಳ್ಳಲು ಶ್ರಮಿಸಿದೆ. ವಿರೋಧದ ರಭಸ ವಿರೋಧಿಯ ಅನುಕರಣೆಯೂ ಆಗಿಹೋಗಿದೆ. ಆಧುನಿಕ ಹೆಣ್ಣು, ನಾಗರಿಕ ಲೋಕದ ಸಕಲೆಂಟು ಕ್ಷೇತ್ರಗಳಲ್ಲಿದ್ದಾಳೆ. ಆದರೆ ಅಲ್ಲಿ ಹೆಣ್ತನದ ವಿಶಿಷ್ಟತೆಯಿಲ್ಲ.ಹೆಣ್ತನ ಎನ್ನುವುದು ಮನಸ್ಸಿನ ಮಾಗುವಿಕೆ, ಅದು ಗಂಡಿಗೂ ಹೊರತಾದುದಲ್ಲ ಎಂಬ ಕ್ಷಮತೆ ಇಂದಿನ ಅಗತ್ಯವಾಗಿದೆ. ಮಹಿಳಾ ಚಳುವಳಿ ಈ ಎಚ್ಚರದಿಂದ ಮುಂಚಲಿಸಬೇಕಿದೆ.

–ವಿನಯಾ ಒಕ್ಕುಂದ, ಅಧ್ಯಾಪಕಿ, ಲೇಖಕಿ, ಧಾರವಾಡ

ಅರ್ಧನಾರೀಶ್ವರ ತತ್ವವನ್ನು ಸಾಕ್ಷಾತ್ಕರಿಸಿಕೊಂಡರೆ...



೧. ದೇಹವೇ ಹೆಣ್ಣು ಗಂಡುಗಳಿಗೆ ಪ್ರತ್ಯೇಕ ಸ್ವಭಾವ ಹಾಗೂ ಪಾತ್ರಗಳನ್ನು ನಿರ್ಮಾಣ ಮಾಡಿದೆ. ಆದರೆ ಇದರಲ್ಲಿ ಸಹಜ ಜೈವಿಕತೆಯ ಪಾಲೆಷ್ಟು ಹಾಗೂ ಮನುಷ್ಯ ನಿರ್ಮಿತ ವ್ಯವಸ್ಥೆಯ ಪಾಲೆಷ್ಟು ಎಂದು ಸೂಕ್ಷ್ಮವಾಗಿ ಅರಿಯುವುದು ಮುಖ್ಯ. ತಾಯ್ತನವನ್ನು ಸ್ವೀಕರಿಸಲು ವಿಕಾಸಗೊಳ್ಳುವ ಹಲವು ಹಂತಗಳನ್ನು ಅವಳ ದೇಹವು ಹಾಯ್ದು ಬರುತ್ತದೆ. ಇದು ಸೃಷ್ಟಿಯೇ ತನ್ನ ವಿಕಾಸಕ್ಕಾಗಿ ಮಾಡಿಕೊಂಡ ಯೋಜನೆ. ಸೃಷ್ಟಿಯ ಸಹಜ ಲಯವನ್ನು ಭಂಗಗೊಳಿಸಿ ಮನುಷ್ಯ ತನ್ನ ನಾಗರೀಕತೆ, ಸಂಸ್ಕೃತಿ, ಸಮಾಜಗಳನ್ನು ಕಟ್ಟಿಕೊಂಡು ಆಗಿದೆ. ಹೆಣ್ಣು ಮತ್ತು ಗಂಡಿನ ನಡುವೆ ಪಾತ್ರ ಹಾಗೂ ಜವಾಬ್ದಾರಿಗಳ ಹಂಚಿಕೆಯಲ್ಲಿ ಅವಳ ದೇಹವನ್ನು ಒಂದು ಮಿತಿಯೆಂಬಂತೆ ಕಾಣುತ್ತ ಹೋಗುವಲ್ಲಿ ಅಸಹಜತೆಯು ಮೊಳಕೆಯೊಡೆದಿದೆ. ತಾಯ್ತನವು ಅವಳ ದೇಹ ಮನಸ್ಸುಗಳ ಆಯ್ಕೆಯಾಗಿರದೇ ಅದು ಗಂಡೆಜಮಾನಿಕೆಯನ್ನು ಸ್ಥಾಪಿಸುವ ಪ್ರಜ್ಞೆಯಾಗಿ ವಿಕೃತಗೊಂಡಿರುವ ಈ ಚಾರಿತ್ರಿಕ ಸ್ಥಿತಿಯು ಅವಳ ಪ್ರಾಕೃತಿಕ ಸ್ಥಿತಿಯನ್ನು ಅರಿಯಲು ಇರುವ ತೊಡಕು.

೨. ಕುಟುಂಬದ ಪರಿಕಲ್ಪನೆ ಉಳಿಸುವ ಭಾರವನ್ನು ಅವಳ ಮೇಲೆ ಹಾಕಿ ನೀವು ಜಗತ್ತು ಆಳುವುದು ಎಷ್ಟು ಸರಿ ಸ್ವಾಮೀ?. ಹೆತ್ತ ಮಕ್ಕಳನ್ನು ಪೋಷಿಸುವುದು ಕುಟುಂಬದ ಹೊಣೆಯೂ ಅಲ್ಲವೇ? ಆಧುನಿಕ ಕಾಲದಲ್ಲಿ ಹೆಣ್ಣಿನ ಜೀವಕೇಂದ್ರವು ತಾಯ್ತನವೇ ಆಗಿ ಉಳಿದಿದೆಯೇ? ದುಡಿಮೆಯ ಮೂಲಕ ಬದುಕಿನ ಎಲ್ಲ ಕೇಂದ್ರಗಳನ್ನು ಕಟ್ಟುತ್ತಿರುವ ಹೆಣ್ಣು ಜೀವಗಳು ತಾಯ್ತನದಿಂದ ಒಡಮೂಡಿದ ದೃಷ್ಟಿಕೋನವೊಂದನ್ನು ಬದುಕಿನ ಎಲ್ಲ ನೆಲೆಗಳಿಗೆ ವಿಸ್ತರಿಸುವುದು ಸಾಧ್ಯವಾದರೆ ಎಷ್ಟು ಚೆನ್ನಾಗಿತ್ತು!. ಆಗ ಧರ್ಮ, ರಾಜಕಾರಣ, ಅಭಿವೃದ್ಧಿ, ಆಡಳಿತ, ಸಾಹಿತ್ಯ, ಕಲೆ, ಜ್ಞಾನವಲಯಗಳು ಮರುರಚನೆಗೊಳ್ಳುತ್ತಿದ್ದವು.

೩. ಮಹಿಳಾ ಚಳುವಳಿಯು ಗಂಡಿನೊಡನೆ ಸ್ಪರ್ಧಿಸಲು ಹುಟ್ಟಿದ್ದಲ್ಲ. ತನ್ನ ಅನನ್ಯತೆಯನ್ನು ಉಳಿಸಿಕೊಂಡು ಘನತೆಯಿಂದ ಬದುಕುವ ಸಂಕಲ್ಪದಿಂದ ಹುಟ್ಟಿದ್ದು. ನಮ್ಮೊಳಗಿನ ಅರ್ಧನಾರೀಶ್ವರ ತತ್ವವನ್ನು ಸಾಕ್ಷಾತ್ಕರಿಸಿಕೊಂಡರೆ ನಾವು ಪರಸ್ಪರರನ್ನು ಪ್ರೀತಿಸುತ್ತೇವೆ ಮತ್ತು ಗೌರವಿಸುತ್ತೇವೆ.

–ಗೀತಾ ವಸಂತ, ಅಧ್ಯಾಪಕಿ, ಲೇಖಕಿ, ತುಮಕೂರು

ಕುಟುಂಬ ಪರಿಕಲ್ಪನೆ ಹೆಣ್ಣಿನ ಮೇಲೇ ಯಾಕೆ ಕೇಂದ್ರೀಕೃತವಾಗಿರಬೇಕು?



೧. ನಮ್ಮ ಅತ್ತಿಗೆ ಆದಾಯತೆರಿಗೆ ಇಲಾಖೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದಾರೆ. ಖಾಸಗಿ ಕಂಪನಿಯೊಂದರಲ್ಲಿ ಇಂಜಿನಿಯರ್ ಆಗಿದ್ದ ನಮ್ಮಣ್ಣ ಅನಿವಾರ್ಯ ಕಾರಣದಿಂದ ವೃತ್ತಿ ತ್ಯಜಿಸಿ, ಸ್ವಇಚ್ಛೆಯಿಂದ ಮನೆಗೆಲಸ ಮತ್ತು ಮಕ್ಕಳ ಪಾಲನೆಯನ್ನು ನಿರ್ವಹಿಸುತ್ತಿದ್ದಾನೆ. ಸುತ್ತಣ ಸಮಾಜ ನಿಂದಿಸುತ್ತದೆ, ಸಾಮಾಜಿಕ ವ್ಯವಸ್ಥೆ ಎಳೆದ ಗೆರೆ ಇದು. ಆದರೆ ಪರಸ್ಪರ ಹೊಂದಾಣಿಕೆಯಿಂದ ಅವರಲ್ಲಿ ಯಾವ ವೈಮನಸ್ಸೂ ನುಸುಳಿಲ್ಲ. ಕುಟುಂಬ ಪರಿಕಲ್ಪನೆಯು ಹೆಣ್ಣಿನ ಮೇಲೆಯೇ ಯಾಕೆ ಕೇಂದ್ರೀಕೃತವಾಗಿರಬೇಕು? ಹೆಣ್ಣು–ಗಂಡುಗಳಿಗೆ ಇದೇ ವೃತ್ತಿ ಅಂತ ಯಾರು ಮಾಡಿದ್ದು ?

ತುಂಬಾ ಕಷ್ಟದ ತಾಯ್ತನವನ್ನು ಹೊಂದಬೇಕೋ ಬೇಡವೋ ಎಂಬ ಆಯ್ಕೆ ಹೆಣ್ಣಿಗಿರಬೇಕು. ಮಾನವ ಸಂತತಿಯ ಬೆಳವಣಿಗೆಗೋಸ್ಕರ ಅವಳನ್ನು ಒತ್ತಾಯಪೂರ್ವಕ ತೊಡಗಿಸಿಕೊಳ್ಳುವುದು ದುರದೃಷ್ಟಕರ.ಮದುವೆ ಬೇಡ ಎನ್ನುವ ಹೊಸ ತಲೆಮಾರಿನ ಹುಡುಗಿಯರನ್ನು 'ದೊಡ್ಡದೇನಾದರೂ ಸಾಧನೆ ಮಾಡಲೋಸ್ಕರ ಮದುವೆ ಬೇಡ ಎನ್ನುತ್ತೀರ?' ಅಂತ ಕೇಳಿನೋಡಿ, 'ಇಲ್ಲ, ನಿರಾಳ ಉಸಿರಾಡಿಕೊಂಡು ಆರಾಮಾಗಿ ಬದುಕಲು' ಅನ್ನುತ್ತಾರೆ, ಅಂದರೆ ಈ ವಿವಾಹವೆಂಬ ಸಂಸ್ಥೆ ಎಷ್ಟರಮಟ್ಟಿಗೆ ಹೆಣ್ಣುಮಕ್ಕಳ ಖಾಸಗೀ ಬದುಕಿನ ಅಸ್ತಿತ್ವವನ್ನು (ಇದು ಬರಿ ಲೈಂಗಿಕತೆಯದಲ್ಲ) ಕಸಿದುಕೊಂಡ ಬಂಧನವಾಗಿದೆ? ಈ ಉಸಿರುಗಟ್ಟಿಸುವಿಕೆಯಿಲ್ಲದಿದ್ದರೆ ಕುಟುಂಬ ಬೇಕು ಆದರೆ ಸಂಬಳವಿಲ್ಲದ ಕೆಲಸವನ್ನು ಗೌರವಿಸುವ ಅರಿವಿರಲಿ.

ಬಾಲ್ಯದಲ್ಲಿ ಅಪ್ಪ–ಅಮ್ಮ, ಚಿಕ್ಕಪ್ಪ–ಚಿಕ್ಕಮ್ಮಂದಿರು ನಾನು ದೊಡ್ಡದಾಗಿ ನಕ್ಕರೆ ಬೈಯುತ್ತಿದ್ದರು, (ಬೈಯ್ಯುವಲ್ಲಿ ಹೆಂಗಸರೂ ಸೇರಿದ್ದಾರೆ) ನನಗಾಗ ವಿಪರೀತ ಹಿಂಸೆಯೆನಿಸಿ, ಆ ಬೈಯುವಿಕೆಯ ಕಾರಣವನ್ನು ವಿರೋಧಿಸಿದ್ದೆ. ಇದುಅಕೆಡೆಮಿಕ್ ಸ್ತ್ರೀವಾದ ಅಲ್ಲ, ಇದು ನಮ್ಮ ಸ್ವಂತ ಬದುಕು. ನಮಗೆ ನೈಸರ್ಗಿಕವಾಗಿ ದೊರೆವ ನಿರಾಳ ಬದುಕಿಗಾಗಿ ದನಿಯೆತ್ತಿದ್ದೇವೆ. ಸಮಾನತೆಯ ಆಶಯದ ನಮ್ಮ ಹೋರಾಟ 'ಯಾರ' ವಿರುದ್ಧ ಅಲ್ಲ, 'ಯಾವುದರ' ವಿರುದ್ಧ ಎಂಬುದನ್ನು ನೀವೆಲ್ಲ ಮೊದಲು ತಿಳಿದುಕೊಂಡು 'ಸಾಮಾಜಿಕ ಪರಿವರ್ತನೆ'ಗಾಗಿ ಕೈಜೋಡಿಸಿ.

–ಸುನಂದಾ ಕಡಮೆ, ಕತೆಗಾರ್ತಿ, ಗೃಹಿಣಿ, ಹುಬ್ಬಳ್ಳಿ

ಗೆರೆ ಎಳೆಯುವುದು ಮನಸ್ಸು ಮತ್ತು ಮನಸ್ಸನ್ನು ರೂಪಿಸುವ ಸಮಾಜ



೧.ಹೆಣ್ಣು ಮತ್ತು ಗಂಡಿನ ಜೈವಿಕ ಭಿನ್ನತೆಯ ಕಾರಣದಿಂದ ಭಾವನಾತ್ಮಕ ನೆಲೆಯಲ್ಲಿ ವ್ಯತ್ಯಾಸಗಳಿರುವುದನ್ನು ಕಾಣಬಹುದು ಹೆಣ್ಣು ತಾಳ್ಮೆ, ಮತ್ತು ತಾಳಿಕೆಯ ಗುಣವುಳ್ಳವಳು. ಗಂಡಿನಲ್ಲಿ ಸಾಹಸ ಪ್ರವೃತ್ತಿ ಜಾಸ್ತಿ. ಹೆಣ್ಣು ಹಡೆಯಬಲ್ಲಳು, ಹಾಲೂಡಿಸಬಲ್ಲಳು. ಈ ವ್ಯತ್ಯಾಸಗಳು ಇಬ್ಬರ ವೃತ್ತಿ/ಜವಾಬ್ದಾರಿಗಳ ನಿರ್ವಹಿಸುವಲ್ಲಿ ಯಾವುದೇ ಗೆರೆಯನ್ನು ಎಳೆದು ವಿಂಗಡಿಸುವುದಿಲ್ಲ. ಗೆರೆ ಎಳೆಯುವುದು ಮನಸ್ಸು ಮತ್ತು ಮನಸ್ಸನ್ನು ರೂಪಿಸುವ ಸಮಾಜ ಹಾಗೂ ಸಮಾಜದ ರೂಢಿಗತ ನಡವಳಿಕೆಗಳು.

೨. ಕೃಷಿ ಕುಟುಂಬದ ಮಹಿಳೆಯರು, ಕೃಷಿ ಕಾರ್ಮಿಕ ಮಹಿಳೆಯರು, ಕೂಲಿ ನಾಲಿ ಮಾಡುವ ಹೆಣ್ಣುಮಕ್ಕಳು ಎಂದಿನಿಂದಲೂ ಒಳಗೆ ಹೊರಗೆ ದುಡಿಯುತ್ತಿರುವರು. ಇವರ ದುಡಿಮೆ ದುಡಿಮೆಯಲ್ಲವೇ ? ಅಂದಿನಿಂದಲೂ ಅಘಾತಕ್ಕೊಳಗಾಗದ ಕುಟುಂಬದ ಪರಿಕಲ್ಪನೆಯ ಅಡಿಪಾಯ ಇಂದು ಅಘಾತಕ್ಕೊಳಗಾಗಿದೆಯೇ? ಹಾಗೆ ಆಘಾತಕ್ಕೊಳಗಾಗಿದೆ ಎನ್ನುವುದಾದರೆ, ಅದು ಹೆಣ್ಣು ಹೊರಗಡೆ ದುಡುಯಲು ಹೊರಟಿದ್ದರಿಂದ ಅಲ್ಲ.ಹೆಣ್ಣು ದುಡಿಯುವ ಜಾಗದಲ್ಲಿ ಮತ್ತು ಎರಡೂ ಕಡೆ ದುಡಿವ ಒತ್ತಡದಿಂದ ಎಂಬುದು ನನ್ನ ನಮ್ರ ಅನಿಸಿಕೆ.

೩. ಇಲ್ಲ, ಹಾಗನಿಸುತ್ತಿಲ್ಲ.ಹೆಣ್ಣುಮಕ್ಕಳು ತಮ್ಮ ಮೇಲಿನ ದೌರ್ಜನ್ಯದ ವಿರುಧ್ಧ, ತಾರತಮ್ಯದ ವಿರುಧ್ಧ ಸಂಘಟಿತರಾಗಿ ದನಿ ಎತ್ತಲು, ಹೋರಾಡಲು ಮಹಿಳಾ ಚಳುವಳಿಗಳ ಅಗತ್ಯವಿದೆ.ಚಳುವಳಿಯ ಒಡನಾಟದಲ್ಲಿ ಅರಿವು ಪಡೆದ ಹೆಣ್ಣು ಮಗಳು ತಾರತಮ್ಯದ ವಿರುಧ್ಧ, ಪುರುಷಾಧಿಪತ್ಯದ ವಿರುಧ್ಧ ಮಾತನಾಡಿದರೆ ಸಹಜವಾಗಿಯೇ ಅದು ನಿಮಗೆ ಗಂಡಸಿನೊಡನೆಯ ಸಮಾನತೆಯ ಸ್ಪರ್ಧೆ ಎಂಬಂತೆ ಕಂಡರೂ, ಅದು ಒಳಾಲಯದಲ್ಲಿ ತನ್ನ ಅಸ್ಮಿತೆಯನ್ನು,ತನ್ನ ಅನನ್ಯತೆಯನ್ನು,ತನ್ನ ಘನತೆ ಗೌರವವನ್ನು ಉಳಿಸಿಕೊಳ್ಳಲು ಹೆಣ್ಣೊಬ್ಬಳು ನಡೆಸುವ ಹೋರಾಟವಾಗಿರುತ್ತದೆ.

–ಜಿ.ಮಲ್ಲಿಕಾ ಬಸವರಾಜು. ಸಾಮಾಜಿಕ ಕಾರ್ಯಕರ್ತೆ, ಗೃಹಿಣಿ, ತುಮಕೂರು

ಹೆತ್ತರೆ ಮಾತ್ರ ತಾಯ್ತನವೆ? ಗಂಡಿನೊಳಗೂ ತಾಯ್ತನ ಇರುತ್ತದೆಯಲ್ಲವೆ?




೧. ಪ್ರಕೃತಿ ದತ್ತವಾಗಿರುವ ವ್ಯತ್ಯಾಸ ಬಿಟ್ಟರೆ ಬೇರೆ ಯಾವ ವ್ಯತ್ಯಾಸವೂ ಇಲ್ಲ. ಗಂಡು–ಹೆಣ್ಣು ಪರಸ್ಪರ ಕೇವಲ ಮನುಷ್ಯ ಜೀವಿಗಳೆಂದು ಒಪ್ಪಿ, ಯಾರಿಗೆ ಯಾವ ಕೆಲಸ ಮಾಡಲು ದೇಹ–ಬುದ್ಧಿಗಳಿಗನುಗುಣವಾಗಿ ಅನುಕೂಲ/ಸಾಮರ್ಥ್ಯವಿದೆಯೊ ಅದನ್ನು ಯಾವುದೇ ಶ್ರೇಷ್ಟತೆ/ ಕೀಳರಿಮೆಯ ವ್ಯಸನಗಳಿಲ್ಲದೆಯೇ ಮಾಡುವ ಮನೋಸಿದ್ಧತೆ ಇಬ್ಬರಿಗೂ ಇರಬೇಕಾಗುತ್ತದೆ.

೨. ಕುಟುಂಬದ ಬಂಡಿ ಎಳೆಯುವಲ್ಲಿ ಯಾರೂ ಹೆಚ್ಚೂ ಅಲ್ಲ; ಕಡಿಮೆಯೂ ಅಲ್ಲವೆಂಬ 'ಅರಿವಿ'ದ್ದರೆ, 'ಸಮಾನತೆ' ತಂತಾನೇ ಇರುತ್ತದೆ. ಹೊರಗೆ ದುಡಿಯುವ ಅನಿವಾರ್ಯತೆಯನ್ನು ಸೃಷ್ಟಿಸಿಕೊಂಡು, ಈಗ ಕುಟುಂಬದ ಅಡಿಪಾಯಕುಸಿಯುತ್ತಿದೆಯೆಂದು ಹೆಣ್ಣನ್ನೇ ಹೊಣೆ ಮಾಡಿದರೆ ಹೇಗೆ?! 'ತಾಯ್ತನ'ದ ಮಹತ್ವವನ್ನು, ಮನೆಯೊಳಗಿನ ದುಡಿಮೆಯನ್ನು ಗೌರವದಿಂದ ಪುರುಷ ಪ್ರಧಾನ ಸಮಾಜ ಕಂಡಿದ್ದರೆ, ಹೊರಗೆ ದುಡಿವ ಅಗತ್ಯ ಬರುತ್ತಿರಲಿಲ್ಲವೇನೋ!

ಹೆತ್ತರೆ ಮಾತ್ರ ತಾಯ್ತನವೆ? ಗಂಡಿನೊಳಗೂ ತಾಯ್ತನ ಇರುತ್ತದೆಯಲ್ಲವೆ? ತಾಯ್ತನದ ಮಹತ್ತನ್ನು ಎಳೆವೆಯಲ್ಲೇ ಮಕ್ಕಳಿಗೆ ಕುಟುಂಬ, ಶಿಕ್ಷಣ, ಸಮಾಜ, ಮಾಧ್ಯಮಗಳ ಮೂಲಕ ನಾವು ತಲುಪಿಸಬಹುದಿತ್ತು. ಮಕ್ಕಳಿಗೆ ಮಹಿಳಾ ಚಳುವಳಿಯ ನಂತರವಾದರೂ ಕಲಿಸಿ ಬೆಳೆಸುವ ಅವಕಾಶವಿತ್ತು. ಅದಾಗಲಿಲ್ಲ.!

೩. ೮೦ರ ದಶಕದ ಮಹಿಳಾ ಚಳುವಳಿಯ ನಂತರ ನಮ್ಮ ಕಲ್ಪನೆಗೂ ಮೀರಿದ ತಂತ್ರಜ್ಞಾನದ ಅನೇಕ ಸಾಧ್ಯತೆಗಳನ್ನು ಸೃಷ್ಟಿಸಿಕೊಂಡು ಆಧುನಿಕರಾಗಿದ್ದೇವೆ! ಬದುಕುಗಳಲ್ಲಿ ಬದಲಾವಣೆ ಕಂಡಿದೆ. ಇನ್ನೂ ಇಂತಹ ಪ್ರಶ್ನೆಗಳು ಹುಟ್ಟಿಕೊಳ್ಳುವುದು ವಿಪರ್ಯಾಸ! ಮಹಿಳಾ ಚಳುವಳಿಯ ಮೂಲ ಉದ್ದೇಶ ಗಂಡನ್ನು ವಿರೋಧಿಸುವುದಲ್ಲ. ಪುರುಷ ಪ್ರಧಾನ ವ್ಯವಸ್ಥೆಯ 'ಯಜಮಾನಿಕೆ'ಯನ್ನು ವಿರೋಧಿಸುವುದಷ್ಟೇ. ಇದನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಿರುವುದರ ಪರಿಣಾಮ ಸ್ಪರ್ಧೆಗೆ ಇಳಿದಂತೆ ಕಾಣುತ್ತಿದೆ! ಅಂದರೆ, ಇನ್ನೂ ಪರಸ್ಪರ ಯಾವ ಹಂತದಲ್ಲೂ ಮಾನಸಿಕವಾಗಿ ಮಾಗಿಲ್ಲವೆಂದೇ ಅರ್ಥ. ಇನ್ನಾದರೂ ಮಾಗಲು ಅನುವು ಮಾಡಿಕೊಡಬೇಕಾಗಿರುವವರು ಯಾರು? ಹೇಗೆ? ಯೋಚಿಸುವ ಅಗತ್ಯವಿದೆ.

–ಗೀತಾ ಡಿ.ಸಿ., ಅಧ್ಯಾಪಕಿ, ಕವಯತ್ರಿ ಬೆಂಗಳೂರು



ಧರ್ಮವಿಚಾರ ಪುಟ

ನದಿಯ ಹರಿವಿನ ತಂಪು – ಸ್ತ್ರೀಮತದ ಪಥ

–ಸಬಿತಾ ಬನ್ನಾಡಿ

. "ಹೆಣ್ಣು ಭಿನ್ನಳು ಆದರೆ ಕೀಳಲ್ಲ" ಎಂಬ ಹೆಣ್ಣರಿವು ಇಂದು ಸಾವಿರಾರು ಪುಟಗಳಲ್ಲಿ ಹಬ್ಬಿ ನಿಂತಿದೆ. ಆದರೆ ಅದರೆಡೆಗೆ ಅವಜ್ಞೆ, ಅನುಮಾನಗಳು ಮಾತ್ರ ಇಂದಿಗೂ ಬಗೆಹರಿಯದೇ ಇದೆ. ಹೀಗಾಗಿ ಹೆಣ್ಣು ಒಂದು ಹೆಜ್ಜೆ ಮುಂದಿಟ್ಟರೆ ಎರಡು ಹೆಜ್ಜೆ ಹಿಂದಿಡುವ ಆತಂಕದಲ್ಲಿ ಇದ್ದಾಳೆ. ಈ ನಡುವೆ ಹೆಣ್ಣು ಕಣ್ನೋಟವು ಆಳವಾಗಿ ತನ್ನ ಮಂಡನೆಗಳನ್ನು ಮಾಡುತ್ತಲೇ ಇದೆ.



ಚಿತ್ರ:ಕೃಪೆ: ಕೆ.ಕೆ. ಹೆಬ್ಬಾರ್ ಗ್ಯಾಲರಿ

ಶ್ಯಾಮಲವರ್ಣದ ವಿಜ್ಜಿಕೆಯನ್ನರಿಯದೇ
ದಂಡಿಯು ಸರಸ್ವತಿಯನ್ನು
ಗೌರವ ವರ್ಣದವಳೆಂದು
ಸುಮ್ಮನೇ ವರ್ಣಿಸಿದ್ದಾನೆ

ಎಂಬುದು ಸುಮಾರು ಎಂಟನೇ ಶತಮಾನದಲ್ಲಿದ್ದ ಸಂಸ್ಕೃತದಲ್ಲಿ ಬರೆಯುತ್ತಿದ್ದ ಕನ್ನಡತಿ ವಿಜ್ಜಿಕೆಯ ಮಾತು. ಈ ಮಾತು ಅವಳ ಆತ್ಮವಿಶ್ವಾಸಕ್ಕಷ್ಟೇ ಮುಖ್ಯವಲ್ಲ, ಬದಲಿಗೆ ಮಹಾನುಭಾವರ ಕಣ್ಣಿಗೆ ಕಾಣದ ಹಲವು ಸಂಗತಿಗಳು ಅದರಲ್ಲಿವೆ. ಆದರೆ ಅವರು ತಮ್ಮ ಕಣ್ಣಿಗೆ ಕಂಡಿದ್ದನ್ನೇ ಶಾಸನವಾಗಿಸಿದ್ದಾರೆ ಎಂಬುದನ್ನೂ ಹೇಳುತ್ತದೆ. ರೂಪದಿಂದ ಸರಸ್ವತಿಯಲ್ಲ, ಸರಸ್ವತಿಯಿಂದ ರೂಪ ಎಂದು ಅವಳು ಕಣ್ನೋಟವನ್ನು ತಿದ್ದುತ್ತಿದ್ದಾಳೆ. ಈ ಬದುಕನ್ನು, ಸುತ್ತಲಿನ ಜಗತ್ತನ್ನು, ಬಾಳಬೇಕಾದ ರೀತಿಯನ್ನು ಕುರಿತು ಹೆಣ್ಣು ತನ್ನದೇ ಲೋಕದೃಷ್ಟಿಯನ್ನು ಹೊಂದಿದ್ದೂ ಗಂಡಸಿನಂತೆ ಅವಳು ಅದಕ್ಕೆ ಸಾಂಸ್ಥಿಕ ರೂಪ ಕೊಡದೇ, ಆಯಾ ಕಾಲಕ್ಕೆ ಅಳ್ಳಕಗೊಳ್ಳುವಂತೆ ಬಾಳ ದಾರಿಯಾಗಿ ಅದನ್ನು ನೇರ್ಪುಗೊಳಿಸಿಕೊಳ್ಳುತ್ತಾ ಹೋಗಿದ್ದಾಳೆ. ಇದೇ ವಾಸ್ತವದಲ್ಲಿ ಹೆಣ್ಣಿನ ಮತ. ಅದಕ್ಕವಳು ಎಲ್ಲೂ ಧರ್ಮ ಎಂಬ ಹೆಸರು ಕೊಟ್ಟಿಲ್ಲ, ಅದಕ್ಕೆ ಯಾವ ವಾರಸುದಾರರನ್ನೂ ನೇಮಿಸಿಲ್ಲ. ಮತ್ತಿದು ಇರಬೇಕಾದದ್ದೇ ಹಾಗೆ. ಹಾಗಿದ್ದಾಗ ಅದಕ್ಕಾಗಿ ಕಾದಾಟ, ಏರಾಟ, ಚೀರಾಟಗಳೂ ಬೇಕಿರುವುದಿಲ್ಲ.


ಕೃಷಿ ವಿಷಯ ಪರಿಣಿತೆ ವಿ. ಗಾಯತ್ರಿಯವರು ಒಮ್ಮೆ ಮಾತಾಡುತ್ತಾ, ಹೆಂಗಸರು ಕೃಷಿಯ ಎಲ್ಲಾ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದಾಗ ಅವರು ಅನುಸರಿಸುತ್ತಿದ್ದ ನಿಯಮದ ಬಗ್ಗೆ ಹೇಳುತ್ತಿದ್ದರು. ಅದರ ಪ್ರಕಾರ ಬಿತ್ತನೆ ಮಾಡುವಾಗ ನಡು ಬೆರಳುಗಳನ್ನು ಜೋಡಿಸಿ, ಕಿರುಬೆರಳು ಮತ್ತು ಹೆಬ್ಬೆಟ್ಟನ್ನು ಪ್ರತ್ಯೇಕಗೊಳಿಸಿ ಬಿತ್ತನೆ ಮಾಡುತ್ತಿದ್ದರಂತೆ. ಆಗ ಅದು ಮೂರು ಧಾರೆಗಳಾಗಿ ನೆಲಕ್ಕೆ ಬೀಳುತ್ತಿತ್ತಂತೆ. ಬೆಳೆದ ಬೆಳೆಯಲ್ಲಿ ಒಂದು ಪಶು ಪಕ್ಷಿಗಳಿಗೆ, ಇನ್ನೊಂದು ಇತರರಿಗೆ, ಮೂರನೆಯದು ನಮಗೆ ಸಿಗಲಿ ಎಂದು ಇದರರ್ಥವಂತೆ! ಎಂಥಾ ಉದಾತ್ತ ಚಿಂತನೆ. ಈ ಪ್ರಕೃತಿ ಧರ್ಮ ಪ್ರೇರಿತ ಚಿಂತನೆ ಎಲ್ಲ ಮನುಷ್ಯರದಾಗಬೇಕಿತ್ತು. ಆದರೆ ಎಲ್ಲದರಲ್ಲೂ ವೈಯಕ್ತಿಕ ಲಾಭವೇ ಮಹತ್ತರವಾದುದು ಎಂಬುದು ಮೌಲ್ಯವಾದ ತಕ್ಷಣ ಮತ್ತದೇ ಧರ್ಮದ ಪೋಷಾಕು ಧರಿಸಿದ ತಕ್ಷಣ ಅದಕ್ಕೂ ರಕ್ಷಣೆಯ ಗೂಟಗಳು ಬೇಕಾಗ ತೊಡಗುತ್ತವೆ. ಮಾತ್ರವಲ್ಲ ಅದಕ್ಕಾಗಿ ಪ್ರತ್ಯೇಕತೆಯ ಮತಿಯನ್ನು ಬೆಳೆಸಬೇಕಾಗುತ್ತದೆ. ಇದರ ಫಲವೇ ಒಟ್ಟು ಬದುಕಿನಲ್ಲಿ ಹೆಣ್ಣು ಮತ್ತೆ ಮತ್ತೆ ತನಗೂ ಜಾಗ ಕೇಳುವ ಹಾಗೆ, ಪ್ರಶ್ನಿಸುವ ಹಾಗೆ, ವಿವರಿಸುವ ಆಯಾಸಕ್ಕೆ ಒಳಗಾಗುವ ಹಾಗೆ ಆಯಿತು.

ದಿನ ದಿನದ ಬದುಕಿನ ಅನುಭವದಿಂದಲೇ ಲೋಕಜ್ಞಾನ ಕಟ್ಟಿದ ಹೆಂಗಸರ ಮಾತಿಗೆ ನಾವು ಕಿವಿಗೊಟ್ಟಿದ್ದೇ ಕಡಿಮೆ. 'ಕೂಟಕ್ಕೆ ಸತಿ ಪತಿ ಎಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ' ಎಂಬ ಆಯ್ದಕ್ಕಿ ಲಕ್ಕಮ್ಮನ ಮಾತು ಅರಿವಿನ ವಿಷಯದಲ್ಲಿ ಹೆಣ್ಣನ್ನು ಪರಿಗಣಿಸದ ತಾರತಮ್ಯದ ಅಸಂಬದ್ಧತೆಯನ್ನು ಪ್ರಶ್ನಿಸುತ್ತದೆ. ಈ ಅಸಂಬದ್ಧ ಹೇರಿಕೆಯನ್ನು ಸುಸಂಬದ್ಧಗೊಳಿಸಲು ಹೆಣ್ಣಿನ ಮನಸ್ಸನ್ನು ತಿದ್ದುವ ನಿರಂತರ ಕಾಯಕವನ್ನು ಸಾಂಸ್ಥಿಕಗೊಂಡ, ಲಾಭವನ್ನು ಗುರಿಯಾಗಿಸಿಕೊಂಡ ಧರ್ಮಗಳು ಬೇರೆ ಬೇರೆ ರೀತಿಯಲ್ಲಿ ಮಾಡಿಕೊಂಡು ಬಂದಿವೆ. ಅದರ ಒಂದು ನಿದರ್ಶನವನ್ನು ನಾವು ಸಂಚಿಯ ಹೊನ್ನಮ್ಮನಲ್ಲಿ ನೋಡುತ್ತೇವೆ. ಪತಿವ್ರತೆಯರ ಧರ್ಮದ ಬಗೆಗೆ 'ಹದಿಬದೆಯ ಧರ್ಮ' ಕಾವ್ಯದಲ್ಲಿ ಬರೆವ ಆಕೆ, "ತಲೆಯಲ್ಲಿಟ್ಟು ಮುದ್ದಿಸಿದರೂ ಕಾಲುಗಳಿಂದ ನೆಲದ ಮೇಲಿಟ್ಟು ಒರಸಿದರೂ ಏನಾಯಿತು? ಒಡೆಯನಿಟ್ಟಲ್ಲಿ ಒಡವೆ ಇರಬೇಕು ಎಂದು ತಿಳಿದು ಒಳ್ಳೆಯ ಹೆಂಡತಿ ಎನ್ನಿಸಿಕೊಂಡವಳು ನಡೆಯಬೇಕು" ಎನ್ನುತ್ತಾಳೆ. ಆದರೆ ಇದೇ ಹೆಣ್ಣಿನ ಜನ್ಮವನ್ನೇ ಕೀಳಾಗಿಸುತ್ತದೆ ಎಂದು ತಿಳಿಯದ ಆಕೆ ಹೆಣ್ಣುಮಕ್ಕಳ ಹುಟ್ಟನ್ನು ನಿರಾಕರಿಸುವುದನ್ನು ಆಕ್ಷೇಪಿಸಿ "ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ/ಪೆಣ್ಣಲ್ಲವೆ ಪೊರೆದವಳು/ ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು/ ಕಣ್ಣು ಕಾಣದ ಗಾವಿಲರು" ಎನ್ನಬೇಕಾಗುತ್ತದೆ. ಇಂಥಹ ಸ್ತ್ರೀ ಅಧರ್ಮಗಳ ಸ್ಥಾಪಿಸುವಿಕೆಯಿಂದ ಹೊರಬರಲು ನಿರಂತರ ಪ್ರಯತ್ನ ಮುಂದುವರಿದೇ ಇದೆ. ಅದು ಸ್ತ್ರೀವಾದದ ಚಿಂತನೆಗಳ ಮೂಲಕ ಹೊಸ ಅರಿಯುವ ಕಣ್ಣುಗಳನ್ನೂ ನೀಡಿತು.

ವಿಶ್ವಾಮಿತ್ರನಿಗೆ ಗುರುಕಾಣಿಕೆಯಾಗಿ ಎಂಟುನೂರು ಕುದುರೆಗಳನ್ನು ಒದಗಿಸಲು ಗಾಲವ, ಯಯಾತಿಯ ಸಹಾಯ ಕೋರಿದಾಗ, ಆತ ತನ್ನ ಮಗಳು ಮಾಧವಿಯನ್ನು ಯಾರಿಗಾದರೂ ಕೊಟ್ಟು ಕುದುರೆ ಧಕ್ಕಿಸಿಕೋ ಎಂದು ಅವಳನ್ನು ಅವನಿಗೆ ಕೊಡುತ್ತಾನೆ. ಆಕೆ ಮೂರು ಜನರಿಗೆ ಒತ್ತೆಯಾಗಿ ಮಕ್ಕಳನ್ನು ಹೆತ್ತು ತೊರೆದು ಬರಬೇಕಾಗುತ್ತದೆ. ಈ ಋಷಿ ಮುನಿಗಳು ಸದಾ ಧರ್ಮದ ಚರ್ಚೆಯಲ್ಲಿರುತ್ತಾರೆ. ಇಂತಹ ಒಂದು ಸನ್ನಿವೇಶದಲ್ಲಿ ಅನುಪಮಾ ನಿರಂಜನ ಬರೆದ 'ಮಾಧವಿ' ಕಾದಂಬರಿಯಲ್ಲಿ ಆಕೆ ತನ್ನೊಳಗೇ ಒಂದು ಪ್ರಶ್ನೆ ಹಾಕಿಕೊಳ್ಳುತ್ತಾಳೆ. "ಸ್ತ್ರೀ ಧರ್ಮ ಏನು? ಮೌನವಾಗಿ ಚಕಾರವೆತ್ತದೆ ನಡೆಯುವುದೊಂದೇ ಏನು? ಮಕ್ಕಳನ್ನು ಹೆತ್ತು ಬೆಳೆಸುವುದೊಂದೇ ಅವಳ ಧರ್ಮವೇನು? ಯಾವ ಅನ್ಯಾಯಗಳಾದರೂ ಪ್ರತಿಭಟಿಸದೆ ಇರುವುದೇ ಏನು?" ಈ ಅರ್ಥದಲ್ಲೇ ಸಿಮೋನ್‌ದ ಬೋವಾ, "ಹೆಣ್ಣನ್ನು ಆಗಿಸಲಾಗುತ್ತದೆ" ಎಂದಿದ್ದು. "ಹೆಣ್ಣು ಭಿನ್ನಳು ಆದರೆ ಕೀಳಲ್ಲ" ಎಂಬ ಹೆಣ್ಣರಿವು ಇಂದು ಸಾವಿರಾರು ಪುಟಗಳಲ್ಲಿ ಹಬ್ಬಿ ನಿಂತಿದೆ. ಆದರೆ ಅದರೆಡೆಗೆ ಅವಜ್ಞೆ, ಅನುಮಾನಗಳು ಮಾತ್ರ ಇಂದಿಗೂ ಬಗೆಹರಿಯದೇ ಇದೆ. ಹೀಗಾಗಿ ಹೆಣ್ಣು ಒಂದು ಹೆಜ್ಜೆ ಮುಂದಿಟ್ಟರೆ ಎರಡು ಹೆಜ್ಜೆ ಹಿಂದಿಡುವ ಆತಂಕದಲ್ಲಿ ಇದ್ದಾಳೆ. ಈ ನಡುವೆ ಹೆಣ್ಣು ಕಣ್ನೋಟವು ಆಳವಾಗಿ ತನ್ನ ಮಂಡನೆಗಳನ್ನು ಮಾಡುತ್ತಲೇ ಇದೆ. ಖ್ಯಾತ ಪರಿಸರವಾದಿ ವಂದನಾಶಿವ ತಾವು ನಡೆಸುವ ಕೋರ್ಸ್ ಒಂದಕ್ಕೆ 'ಗ್ರ್ಯಾಂಡ್ ಮದರ್ಸ್ ಯುನಿವರ್ಸಿಟಿ' ಎಂದು ಹೆಸರಿಸಿದ್ದಾರೆ. ಇದು ನಿಜವಾಗಿಯೂ ಸ್ತ್ರೀ, ಪುರುಷರು ಹೆಜ್ಜೆಯಿಡಬೇಕಾದ ದಾರಿ ಯಾವುದು ಎಂಬುದನ್ನು ಹೇಳುತ್ತದೆ. ಆರ್ಥಿಕ ಚಿಂತನೆಯನ್ನು ನಾವು ಗ್ರಹಿಸಬೇಕಾದ ಕ್ರಮವನ್ನು ಬದಲಿಸಿಕೊಳ್ಳಬೇಕಾಗಿದೆ. ಆರ್ಥಿಕತೆಯೆಂದರೆ, ಪುರುಷ ಚಿಂತನೆಯು ಸ್ಥಾಪಿಸಿದಂತೆ ಕೇವಲ ವಾಣಿಜ್ಯ ಲಾಭವಾಗಿರದೆ, 'ಕೊಡುವ, ಪ್ರೀತಿಸುವ, ಹಂಚಿಕೊಳ್ಳುವ ಮತ್ತು ಕಾಳಜಿವಹಿಸುವ' ಅವಕಾಶಗಳನ್ನು ವಿಸ್ತರಿಸುವ ಸಂಗತಿಯಾಗಿರಬೇಕು ಎಂದು ಅವರು ಹೇಳುವ ಈ ಮೂಲತತ್ವವು ಸಾಮಾನ್ಯ ಹೆಣ್ಣುಮಕ್ಕಳ ಅಸಾಮಾನ್ಯ ಜ್ಞಾನಮೂಲದಿಂದ ಹುಟ್ಟಿರುವಂತದು. ಇದನ್ನವರು ತಾವು ಮಂಡಿಸುವ ಪರಿಸರ ಸ್ತ್ರೀವಾದದ ಮೂಲ ಭಿತ್ತಿಯನ್ನಾಗಿಸಿಕೊಳ್ಳುತ್ತಾರೆ. ಆಸ್ತಿ, ಅಂತಸ್ತು, ಅಧಿಕಾರ ಇರುವ ಗಂಡಸು ಶ್ರೇಣೀಕರಣದ ಪಿರಮಿಡ್‌ನ ತುತ್ತತುದಿಯಲ್ಲಿರುತ್ತಾನೆ ಎಂದು ನಂಬುವ ಸ್ತ್ರೀವಾದದ ಕೆಲವು ಧಾರೆಗಳನ್ನು ಅವರು ನಿರಾಕರಿಸುತ್ತಾರೆ. ಯಾಕೆಂದರೆ, ಹೆಣ್ಣಿನ ಗುರಿ ಈ ಪಿರಮಿಡ್ ತುದಿಗೆ ತಲುಪುವುದಾದರೆ ಅದು ಸ್ತ್ರೀವಾದವಾಗುವುದಿಲ್ಲ. ಅದು ಮಾರ್ಗರೆಟ್ ಥ್ಯಾಚರ್ ಬ್ರ್ಯಾಂಡ್‌ನ ಫೆಮಿನಿಸಂ ಆಗುತ್ತೆ. ಮತ್ತದು ಪುರುಷ ನಿರ್ಮಿಸಿದ ಗಂಡು ಪ್ರಧಾನತೆಯನ್ನು ಪುರಸ್ಕರಿಸಿ ಹೆಣ್ಣು ಹಾಗೆ ಆಗುವುದನ್ನು ಗುರಿಯಾಗಿಸಿ, ಅವಳೂ ಗಂಡು ರೂಪಿಸಿದ 'ಅಭಿವೃದ್ಧಿ' ರಾಜಕೀಯದಂತೆ, ಪರಿಸರದಿಂದ ದೂರ ಹೋಗುವ ವಿನಾಶಕಾರಿ ಚಿಂತನೆಗೆ ಬಲಿಯಾಗುತ್ತಾಳೆ ಎನ್ನುತ್ತಾರೆ.

ನನ್ನ ಬದುಕು ಎಂದು ನನ್ನದೇ ಆಗಿತ್ತು?
ಮನೆಯಲ್ಲಿ ಪುರುಷ ಅಹಂಕಾರ
ನನ್ನ ಒಂದು ಕೆನ್ನೆ ಚುಚ್ಚುತ್ತಿದ್ದರೆ
ಬೀದಿಯಲ್ಲಿ ಜಾತಿ ಅಹಂಕಾರ
ನನ್ನ ಇನ್ನೊಂದು ಕೆನ್ನೆಯನ್ನು
ಸೀಳಿ ಹರಿಯುತ್ತಿದೆ

ಸ್ವರೂಪಾ ರಾಣಿಯವರ ಈ ಸಾಲುಗಳಲ್ಲಿನ 'ಬೀದಿಯಲ್ಲಿನ ಜಾತಿ ಅಹಂಕಾರ' ಹೆಣ್ಣಿಗೂ ಇರಬಹುದು. ಹಾಗೆಯೇ, ಹೆಣ್ಣಿಗೆ ಬರಬಹುದಾದ ವರ್ಗ ಅಹಂಕಾರವನ್ನೂ ಪ್ರಶ್ನಿಸಬೇಕೆಂಬ ಪ್ರಜ್ಞೆಯನ್ನು ಹುಟ್ಟಿಸುತ್ತಲೇ, ಅದನ್ನು ಪ್ರೀತಿಯ ರಾಜಕಾರಣವಾಗಿ ಮುನ್ನೆಲೆಗೆ ತಂದವರು ಕಪ್ಪು ಸ್ತ್ರೀವಾದಿಗಳು. "ನಾವೆಲ್ಲರೂ, ಎಲ್ಲ ಹೆಂಗಸರೂ ಮತ್ತು ಎಲ್ಲ ಗಂಡಸರೂ ಒಳಿತಾಗಿ ಬಾಳಬೇಕು. ಇದಕ್ಕಾಗಿ ನಾವೆಲ್ಲರೂ ಸ್ತ್ರೀವಾದಿಗಳಾಗಬೇಕು" ಎಂಬ ಚಿಮಮಾಂಡಾ ಅಡಿಚಿಯ ಮಾತುಗಳನ್ನು ಸ್ತ್ರೀಮತದ ತಿರುಳು ಎಂದು ಭಾವಿಸಬಹುದು.



(ಲೇಖಕಿಯು ತರೀಕೆರೆ ಸರ್ಕಾರಿ ಪ್ರ.ದ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಿಕೆಯಾಗಿದ್ದು ಅಂಕಣಕಾರ್ತಿ ಹಾಗೂ ಕವಯತ್ರಿಯೂ ಆಗಿದ್ದಾರೆ..)

ನವಿಲುಗರಿ

ಬಯಕೆ



ಎಷ್ಟೋ ದಿನಗಳ ನಂತರ ನಿಂತೆ
ನಿರಾಳವಾಗಿ ಮಸುಕು ಧೂಳಿನಲ್ಲಿ
ಮಾಸಿದ ಕನ್ನಡಿಯಲ್ಲಿ ನಾನಿರಲಿಲ್ಲ
ನೆರೆತ ತಲೆ, ಬಣ್ಣವಿಲ್ಲದ ಕಣ್ಣುಗಳು.

ವೀಣೆ ಗೊತ್ತಿಲ್ಲ, ರಾಗಸಂಗೀತ ಗೊತ್ತಿಲ್ಲ
ಹೆಣ್ಣಿ ಸಹಜ ನಯ, ಬಿನ್ನಾಣ ಗೊತ್ತಿಲ್ಲ.
ಹುಟ್ಟು, ಸಾವಿನ ಅರ್ಥವಾಗದ
ಲಯವೊಂದು ಕೆಣಕುತ್ತದೆ ನನ್ನನ್ನು.

ಎಷ್ಟೊಂದು ಮಾತನಾಡಬಹುದಿತ್ತು
ನಿಮ್ಮೊಂದಿಗೆ ಕದಲದ ಕಡಲನ್ನು,
ಮೇಲೆರಗುವ ಆಗಸವನ್ನು
ನೋಡುತ್ತಲೇ ಹೋದೆ.


ತೇಲಾಡುವ ಸ್ವರಗಳು,
ಪ್ರಾಸಾನುಪ್ರಾಸಗಳು
ಕಣ್ಬಿಡುವ ಎಳಸು ವ್ಯಂಜನಗಳು
ಮೇಲೇಳದ ಬಾಲಂಗೋಚಿಯಾದವು.

ಈಗ ಸೂರ್ಯ ಕೆಳಗಿಳಿದ ಹೊತ್ತು
ಮಾತನಾಡುವ ಹೊತ್ತು ಮೊರೆವ ಕಡಲೊಂದಿಗೆ
ಆಗಸದ ನೀಲಿಯೊಂದಿಗೆ
ಕವಿತೆಗಳೆಂಬ ಬೆಳ್ಳಿರೇಖೆಗಳೊಂದಿಗೆ

–ಎಚ್.ಎಲ್ ಪುಷ್ಪ



ಹುಡುಕಾಟ



ರಾತಿ ಒಂದ್ಹೊತ್ತು ಕಳೆದರೂ
ಮರಿ ಗೂಡಿಗೆ ಬರಲಿಲ್ಲ
ಅನ್ನ ನೀರು ಮುಟ್ಟದೇ
ಎಗರಿ ಆತಂಕದಲಿ
ಗುರುಗಾಡಿ ಮುಲುಗಿದಳು
ಅವಳು ಆ ತಾಯಿ

ಹೊರಗೆಲ್ಲೆಲ್ಲು ಸೀಳು ನಾಯಿಗಳು
ರಕ್ತಸಿಕ್ತ ಬಾಯಿಗಳು
ಪುಟ್ಟದೇಹದ ಹೂಮರಿ
ಎಲ್ಲಿ ಹೋಯಿತೊ ಹಾದಿತಪ್ಪಿ

ಕಾಲಿಡಲು ತೆರಪಿಲ್ಲದ ಬೀದಿಗಳು
ಹಿಂದೆ ಬಂದರೆ ಹಾಯದಿರಿ
ಮುಂದೆ ಬಂದರೆ ಒದೆಯದಿರಿ
ಕಂದ ಯಾರದಾದರೇನು ನಿಮ್ಮದೆನ್ನಿ ಸದ್ಯ

ಕಳವಳಿಸುವ ಮನಸು
ತೂಗಾಡುವ ಬೆಳಕು
ತಿಳಿದೂ ತಿಳಿಯದೊ ಹೆಜ್ಜೆ ಇಟ್ಟಿರಬಹುದು
ನಿಮ್ಮ ಗುಹೆಯೊಳಗೆ

ದಾರಿಗಳೇ ಮರಳಿಸಿ ಮಗುವ
ಕಾಡುಗಳೇ ಕಾಣಿಸಿ ಶಿಶುವ
ಗಾಳಿಯೇ ಸುದ್ದಿ ತಂದೆಯಾ
ರಾತ್ರಿಗಳೇ ನಿದ್ದೆ ತರುವಿರಾ?

–ಆರ್. ತಾರಿಣಿ ಶುಭದಾಯಿನಿ

(ಮುಲುಗುವ ಜೀವಿಗಾಗಿ ನಮ್ಮದೊಂದು ಪ್ರಾರ್ಥನೆ)

ದಿನದ ಪ್ರಾರ್ಥನೆ



ಎದ್ದ ಕೂಡಲೇ
ಒಲೆ ಹಚ್ಚುವೆ
ದೀಪ ಬೆಳಗಿದಂತೆ

ಹೆಚ್ಚುವುದು, ಕೊಚ್ಚುವುದು
ಸೋಸುವುದು ಕಾಸುವುದು
ಹುರಿಯುವುದು ಕರಿಯುವುದು
ಭಕ್ತಿಯಿಂದಲೇ ಮಾಡುವೆ
ನಡುನಡುವೆ ಹಾಡುವೆ, ಗೊಣಗುವೆ
ಇದುವೇ ಮನೆಮಂದಿಯ
ಶಕ್ತಿ, ಅನುರಕ್ತಿಯ ಮೂಲ
ಅರಿತಿರುವೆ ನುರಿತಂತೆ...

ಅಯ್ಯೋ ಎಷ್ಟು ಮಾಡಿದರೂ ಅಷ್ಟೇ
ಎಂದು ನಿಡುಸುಯ್ದರೂ
ತಾನೇ ಆಡುವುದು ರಟ್ಟೆ
ತುಂಬಿ ಕೊಡುವೆ, ನೀಡುವೆ
ಬೆಚ್ಚಗಿಟ್ಟು ಕಾಯುವೆ ಜಗದ ಹೊಟ್ಟೆ

ಕಸ ಒಗೆದು, ಹಾಲು ಕಾಸಿ
ಕಟ್ಟೆ ಒರೆಸಿ, ಸೊಪ್ಪ ಸೋಸಿ
ಹೆಪ್ಪನೆರೆದು , ಕಾಳು ನೆನೆಸಿ
ಕಣ್ಣು ಎಳೆದು, ನಿದ್ದೆ ಕರೆದು
ಕೈ ಮುಗಿಯುವೆ
ಮುಗಿವುದಲ್ಲಿಗೆ ದಿನದ ಪ್ರಾರ್ಥನೆ!

–ಸವಿತಾ ನಾಗಭೂಷಣ

ಹೆಜ್ಜೆ ಮೂಡಿದ ಹಾದಿ

ಹೀಗೂ ಮೂಡಬಹುದು ಹೆಜ್ಜೆ
ಸ್ನಾನ ಮಾಡಿ ಶಕೆ ಗುಳ್ಳೆ ಬರದಿರಲೆಂದು
ಸಿಂಪಡಿಸಿಕೊಳ್ಳುವ ಪೌಡರ್
ನೆಲಕ್ಕೆ ಉದುರಿ ಅದರ ಮೇಲೆ ಇಟ್ಟ
ಪಾದ ಮೂಡಿಸುವ ಹೆಜ್ಜೆ

ಹೆಜ್ಜೆ ಮೂಡುತ್ತಿರುತ್ತದೆ ಬಗೆ ಬಗೆಯಲ್ಲಿ
ಸುಖದಲ್ಲಿ ದುಃಖದಲ್ಲಿ
ತೇವದಲ್ಲಿ ಬಿರು ಬಿಸಿಲಿನಲ್ಲಿ
ಪಾದಕ್ಕಂಟಿದ ಅದರದೇ
ಬಣ್ಣದಿಂದ ಧೂಳಿಂದ
ನಾವು ನಡೆದಂತೆ



ಕೆಲವೊಮ್ಮೆ ನಾವು ನಡೆದರೂ
ಹೆಜ್ಜೆ ಮೂಡಿಯೇ ಇರುವುದಿಲ್ಲ
ಆಗ ಆ ಶೂನ್ಯವನ್ನು ಈ ಹೆಜ್ಜೆಯ ಬಿಂಬ
ತುಂಬಬಹುದು
ಕಾಣದ ಹೆಜ್ಜೆಗೂ ಒಂದು ನೋಟ
ಇರುವುದೆಂದು

–ಆರ್. ಜ್ಯೋತಿ



ಚಿತ್ರಗಳು: **ವಿಜಯಶ್ರೀ ಹಾಲಾಡಿ**

ಒಂದು ಲಲಿತ ಪ್ರಬಂಧ

ಜೀವ ಮಿಡಿತದ ಸದ್ದು

–ವಿಜಯಶ್ರೀ ಹಾಲಾಡಿ



ಸುಂದರವಾದ ಜೀವಂತ ಬೇಲಿ ಅಥವಾ ಕಂಪೌಂಡ್, ಒಳಗೊಂದಷ್ಟು ಜಾಗ, ನಾಲ್ಕು ಗಿಡ–ಪೊದೆಗಳು, ಸರಳವಾದ ಮನೆ, ಸುತ್ತಮುತ್ತ ಹಕ್ಕಿಗಳು ಕುಳಿತು ಹಾಡುವ ಮರಗಳು... ಕನಿಷ್ಠ ಇಷ್ಟಾದರೂ ನಿಸರ್ಗ ಸಾಂಗತ್ಯವಿರುವ ಮನೆಗಳನ್ನೇ ಹುಡುಕಿ ವಾಸವಿದ್ದ ನಮಗೆ ಅಪಾರ್ಟ್‌ಮೆಂಟ್ ಒಂದಕ್ಕೆ ಹೋಗಲೇಬೇಕಾದ ಪರಿಸ್ಥಿತಿಯೊಂದು ಧುತ್ತನೆ ಎದುರಾಯಿತು. ಒಳಗೊಳಗೇ ಒದ್ದಾಡಿದರೂ, ಬಿಕ್ಕಿದರೂ, ನಾವಿದ್ದ ಜೀವಸಂಕುಲದ ಮನೆ ಕೈ ಹಿಡಿದು ಎಳೆಯುತ್ತಿದ್ದರೂ ಏನೂ ಮಾಡುವಂತಿರಲಿಲ್ಲ. ಈ ಸೂಕ್ಷ್ಮಗಳನ್ನೆಲ್ಲ ಅವಲೋಕಿಸಿ ಸಮಾಧಾನಿಸಿಕೊಳ್ಳುವಷ್ಟು ವ್ಯವಧಾನವೂ ತುಟ್ಟಿಯಾದ ಆ ತುರ್ತು ಸಂದರ್ಭದಲ್ಲಿ ಭಾವಗಳನ್ನೆಲ್ಲ ಗಂಟು ಕಟ್ಟಿಕೊಂಡು ಹೊಸಮನೆಗೆ ಹೊರಟೆವು. ಬೆಕ್ಕು, ನವಿಲು, ಕಾಡುಕೋಳಿ, ಗುಡ್ಡೆಹೆಗ್ಗ, ಮುಂಗುಸಿ, ಇಲಿಗಳ ಸಾನಿಧ್ಯದ ಹಳೆಮನೆಗೆ ಕೊರಳುಬ್ಬಿ ವಿದಾಯ ಹೇಳಿದೆವು.

ಗಿಡಮರ ಪರಿಸರದಿಂದ ಕೂಡಿ 'ಜೀವ' ಇರುವಂತೆ ಕಾಣುವ ಫ್ಲಾಟೊಂದರಲ್ಲೇ ಸದ್ಯ ಮನೆ ಸಿಕ್ಕಿತು. ಈ ನಮ್ಮನೆ ಎರಡನೇ ಮಹಡಿಯ ಮೂಲೆಯಲ್ಲಿತ್ತು. ಬಾಗಿಲು ತೆರೆದು ಒಳಗೆ ಹೆಜ್ಜೆಯಿಟ್ಟರೆ ಅಲ್ಲಿಂದ ಮುಖ್ಯಕೋಣೆ ಮತ್ತು ಅಡುಗೆಮನೆಗೆ ಸರಾಸರಿ ಹತ್ತು ಮೀಟರ್ ದೂರ! ಅಂದರೆ ಅಷ್ಟುದ್ದದ ಹಾಲ್! ಇದೊಂತರಾ ಸುರಂಗ ಹೊಕ್ಕ ಭಾವ ಕೊಡುತ್ತಿತ್ತು. ನನಗೂ ಇದೇ ಬೇಕಿತ್ತು. ಹೀಗೆ ಉದ್ದಕ್ಕೆ ಚಾಚಿಕೊಂಡಿರುವ ಮನೆಗಳು ಕಣ್ಣಾಮುಚ್ಚಾಲೆ ಆಟದಲ್ಲಿ ಬಚ್ಚಿಟ್ಟುಕೊಳ್ಳುವ ಜಾಗಗಳಂತೆ ಆಪ್ತ. ಮುಖ್ಯಕೋಣೆಗೆ ಅಂಟಿಕೊಂಡಂತೆ ಮನೆಯ ಕೊನೆಯಲ್ಲಿ ಒಂದು ಮುಚ್ಚಿದ ಬಾಲ್ಕನಿಯಾದರೆ, ಚಾವಡಿ(ಹಾಲ್)ಗೆ ತಾಗಿಕೊಂಡು ಇನ್ನೊಂದು ತೆರೆದ ಬಾಲ್ಕನಿ. ಅಡುಗೆಮನೆಯ ಕಿಟಕಿಯಲ್ಲಿ ಪುಟ್ಟರಸ್ತೆ, ಅದರಾಚೆಯ ಮನೆ–ತೋಟಗಳ ಹೊರಪ್ರಪಂಚಕ್ಕೆ ಕಿಂಡಿ. ಚಾವಡಿ ಬಾಲ್ಕನಿಯ ಹೊರಗಿನ ನೋಟ ಆಹ್ಲಾದಕರ; ಇಲ್ಲಿ ಹತ್ತಿರದ ಮನೆಯವರ ಅದ್ಭುತ ತೋಟ–ಹೂವುಗಳು, ಮರಗಳು, ನಾಯಿಗಳು! ಈ ಬಾಲ್ಕನಿಯಲ್ಲಿ ಗಿಡಗಳನ್ನು ಇಡಲು ಒಂದಷ್ಟು ಜಾಗ. ಇದಕ್ಕೆ 'ಬಸವನ ಹುಳು ಬಾಲ್ಕನಿ' ಎಂದು ಕರೆಯೋಣ. ಇತ್ತ, ಮುಖ್ಯಕೋಣೆಯ ಬಾಲಂಗೋಚಿ ಬಾಲ್ಕನಿಯ ಕಿಟಕಿಗಳನ್ನು, ಹೋದವಳೇ ತೆಗೆದಿಟ್ಟೆ. ಹೊರಗಿನ ಗಾಳಿ ಬೀಸಿ ಬಂದು ಹಿತವೆನಿಸಿತು. ಹತ್ತಿರದ ಮನೆಯವರ ನಾಯಿಮನೆಗಳು, ಕೆಂಪು ಹಸಿರು ದೊಡ್ಡ ದೊಡ್ಡ ಎಲೆಗಳ ಕಾಡುಬಾದಾಮಿ ಗಿಡಗಳು, ಒಳಮಾರ್ಗದಲ್ಲಿ ಓಡಾಡುವ ದಾರಿಗರು ಎಲ್ಲವೂ ಇಲ್ಲಿಂದ ಹಣಕಿದಾಗ ಕಾಣುವಂತಿತ್ತು. ಇದನ್ನು 'ಸೂರಕ್ಕಿ ಬಾಲ್ಕನಿ' ಎಂಬ ಅನ್ವರ್ಥ ಹೆಸರಿನಿಂದ ಕರೆಯುತ್ತೇನೆ.

'ಬಸವನಹುಳು ಬಾಲ್ಕನಿ'ಗೆ ನಮ್ಮ ಹಳೆಮನೆಯ ಗಿಡಗಳು ಬಂದವು. ತರುವಾಗ ದಾರಿಯಲ್ಲಿ ಒಂದಷ್ಟು ಮುರಿದುಹೋದರೂ ಬೇಗನೆ ಚೇತರಿಸಿಕೊಂಡವು. ದಿನ ಕಳೆದಂತೆ ದಾಸವಾಳಗಳು ಅರಳಿದಾಗ ಸೂರಕ್ಕಿಗಳು ಯಾರ ಹೆದರಿಕೆಯೂ ಇಲ್ಲದೆ ಮಕರಂದ ಹೀರಿ ಹೋಗತೊಡಗಿದವು. ಇತ್ತ, ಉದ್ದನೆಯ ಚಾವಡಿಯ ಕಿಟಕಿ ತೆರೆದುಕೊಂಡದ್ದು ಕಟ್ಟಡದ ಇನ್ನೊಂದು ಭಾಗದ ಗೋಡೆಗೆ. ಪಾರಿವಾಳದ ಸದ್ದು ಕೇಳುತ್ತ ಕಿಟಕಿ ಸರಳಿಗೆ ಮುಖವಿಟ್ಟು ಕುತ್ತಿಗೆ ಮೇಲೆ ಕೆಳಗೆ ಮಾಡಿ ಹುಡುಕಾಡಿದಾಗ ಕಂಡದ್ದು ಅವುಗಳ ಗೂಡಿನ ಕುರುಹು! ಈ ಹುಡುಕಾಟ ಸಾಕಷ್ಟು ಸಂತಸ ತಂದಿತು. ಆ ಕಡೆಯ ಮನೆಗಳ ಗೋಡೆಯಲ್ಲಿ ಇದ್ದ ಪುಟ್ಟ ಪೆಟ್ಟಿಗೆಯಾಕಾರದ ಜಾಗಗಳಲ್ಲಿ ಎರಡು ಪಾರಿವಾಳಗಳು ಕಡ್ಡಿ ತಂದು ಹಾಕುತ್ತಿದ್ದವು. ಗಂಡುಹಕ್ಕಿ ಉದ್ದುದ್ದ ಕಡ್ಡಿಗಳು, ಸಪೂರ ಬೇರು, ನಾರುಗಳನ್ನು ತಂದು ಹಾಕಿದರೆ, ಹೆಣ್ಣುಹಕ್ಕಿ ಸುಮ್ಮನೆ ಕುಳಿತಿತ್ತು. ದಿನಗಳು ಕಳೆಯುತ್ತ ಮೊಟ್ಟೆಗಳಿಗೆ ಕಾವು, ಮರಿಯೊಡೆಸಿದ ಸದ್ದು. ಮೇಲಿನಿಂದ ಕೆಳಗೆ ಸಾಲಾಗಿ ಮೂರು 'ಗೋಡೆಪೆಟ್ಟಿಗೆ'ಯೊಳಗೆ ಪಾರಿವಾಳ ಜೋಡಿಗಳು ಮನೆ ಮಾಡಿಕೊಂಡವು.

ಹಕ್ಕಿಯ ಚಿಂತೆ, ಕಾವಿಲ್ಲದೆ ತಣ್ಣಗಾಗಬಹುದಾದ ಮೊಟ್ಟೆಗಳ ಚಿಂತೆ, ಹೊರಗೆಲ್ಲೋ ಇರುವ ಅದರ ಸಂಗಾತಿಯ ಚಿಂತೆ, ಮಗನ ಪರೀಕ್ಷೆಯ ಚಿಂತೆ... ಒಟ್ಟಿನಲ್ಲಿ ಆ ರಾತ್ರಿ ನಾವ್ಯಾರೂ ಊಟ, ನಿದ್ದೆ ಮಾಡಲಿಲ್ಲ. ಬಾಲ್ಕನಿಯ ಬಾಗಿಲನ್ನು ತೆರೆದಿಟ್ಟು, ಹಕ್ಕಿಯಿದ್ದ ಕೋಣೆಯ ಬಾಗಿಲನ್ನು ಭದ್ರವಾಗಿ ಹಾಕಿಕೊಂಡು ಚಾವಡಿಯಲ್ಲಿ ಅಡ್ಡಾದೆವು. ಬೆಳಗಾಗುವುದನ್ನೇ ಕಾದು, ಓಡಿಹೋಗಿ ನೋಡಿದರೆ, ಸಜ್ಜಾದಿಂದ ಇಳಿದ ಸೂರಕ್ಕಿ ರೂಮಿನ ಮೂಲೆಯಲ್ಲಿ ಕುಳಿತಿತ್ತು. ಹಗಲಿನ ಬೆಳಕಿಗಾದರೂ ಹಾರಿ ಹೋಗಿ ಗೂಡು ಸೇರಬಹುದೆಂದುಕೊಂಡಿದ್ದ ನಮಗೆ ನಿರಾಶೆ. ಆದರೆ ತುಸು ಹೊತ್ತಲ್ಲೇ ಹಿಡಿಸಲಾಗದ ಸಂತಸ.

ಎರಡನೆ ಅತಿಥಿ ಸೂರಕ್ಕಿ. ಅಂದರೆ ನೇರಳೆ ಸೂರಕ್ಕಿ ದಂಪತಿ! ನಾವು ಮನೆ ಸೇರಿಕೊಂಡ ಸುಮಾರು ಐದು ತಿಂಗಳ ನಂತರ ಇವರ ಆಗಮನವಾಯಿತು. ಒಂದು ದಿನ ಬಟ್ಟೆ ಒಣಗಿಸಲೆಂದು 'ಸೂರಕ್ಕಿ ಬಾಲ್ಕನಿ'ಯ ಬಾಗಿಲು ತೆರೆದಾಗ ಬಟ್ಟೆ ದಾರದ ಮೇಲೆ ಸೂರಕ್ಕಿಯೊಂದರ ಚಟುವಟಿಕೆ ಕಂಡು ಸದ್ದಿಲ್ಲದೆ ಬಾಗಿಲೆಳೆದುಕೊಂಡು ಬಂದೆ. ಆದ ಖುಷಿಯನ್ನು ಮುಚ್ಚಿಡಲಾಗದೆ ಮಗನನ್ನು ಕರೆದು ಹಂಚಿಕೊಂಡೆ. ಮುಂದಿನ ಕೆಲ ದಿನಗಳು ಪಕ್ಕದ ಕಿಟಕಿಯ ಮೂಲಕ ಗಮನಿಸಿದೆವು. ಎಂತೆಂತದೋ ಕಸದ ತರ ಕಾಣುವ ಸರಕನ್ನು ಜೊಂಪೆ ಜೊಂಪೆಯಾಗಿ ತಂದು ಹಕ್ಕಿ ಗೂಡು ನೇಯುತ್ತಿತ್ತು. ಸ್ವಲ್ಪ ದಿನದೊಳಗೆ ಗೂಡು ದೊಡ್ಡದಾಯಿತು. ಜೋಡಿ ಆಚೀಚೆ ಹಾರಾಡುತ್ತಿದ್ದವು. ಆದರೆ ಕ್ರಮೇಣ ಚಟುವಟಿಕೆ ಸ್ತಬ್ಧವಾಯಿತು; ಕಾವು ಕೊಡುತ್ತಿರಬಹುದು ಎಂದೆಲ್ಲ ಯೋಚಿಸಿದರೂ ಎರಡು ತಿಂಗಳೇ ಉರುಳಿದಾಗಲೂ ಹಕ್ಕಿಗಳು ಕಾಣಲಿಲ್ಲ. ಹಾಗಾದರೆ ಗೂಡು ಬಿಟ್ಟು ಹೋಗಿವೆ ಎಂದಾಯಿತು. ನಾವು ಹಣಕಿದ್ದಕ್ಕೇ 'ಸಾವಾಸ ಬೇಡ'ವೆಂದು ನಿರ್ಧರಿಸಿ ಹಾರಿಹೋದವೋ ಎಂದು ಬೇಸರವೆನಿಸಿತು. ಇನ್ನೇನು ಮಾಡೋಣ, ದಾರದ ಮೇಲೆ ಬಟ್ಟೆಯಾದರೂ ಒಣ ಹಾಕೋಣವೆಂದುಕೊಂಡು ಸೀರೆ, ಬೆಡ್‌ಶೀಟ್ ಹರವಿದೆ. ಅದು ಮಾರ್ಚ್ ತಿಂಗಳು, ಮಗನಿಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ತಯಾರಿಯ ದಿನಗಳು. ಆ ರಾತ್ರಿ ನಾನೊಂದು ತಪ್ಪು ಮಾಡಿದೆ. ಒಣಗಿಸಿದ್ದ ಹೊದಿಕೆಯನ್ನು ತೆಗೆದುಕೊಂಡೆ. ಛೇ, ಎಂತಾ ಕೆಲಸವಾಯ್ತು! ಹಕ್ಕಿಯೊಂದು ಹಾರಿ ಕೆಳಗೆ ಇಟ್ಟಿದ್ದ ಮೂಟೆಯೊಂದರ ಮೇಲೆ ಕುಳಿತಿತು! ಗಾಬರಿ, ಭಯದೊಂದಿಗೆ ಓಡಿಹೋಗಿ ಮಗನನ್ನು ಕರೆದೆ. ಮರುದಿನ ಅವನ ಮೊದಲ ಪರೀಕ್ಷೆ. ಆಗ ರಾತ್ರಿ ಸುಮಾರು ಒಂಬತ್ತು ಗಂಟೆ. 'ಹಕ್ಕಿ ಈ ತರ ಆಗಿದೆ' ಎಂದಾಗ ಅವನು ಅಪ್ಪನನ್ನೂ ಕರೆದ. ಆ ಹಕ್ಕಿಗೆ ಏನೂ ಕಾಣುತ್ತಿರಲಿಲ್ಲವೋ ಅಥವಾ ಕರೆಂಟಿನ ಬೆಳಕಿಗೆ ಹಾಗಾಗುತ್ತಿತ್ತೋ ತಿಳಿಯಲಿಲ್ಲ. ಕಣ್ಣು ಕಾಣದಂತೆ, ದಿಕ್ಕೇ ತೋಚದಂತೆ ವರ್ತಿಸಿತು. ಕಿಟಕಿಯ ಮೂಲಕ ರೂಮಿನೊಳಗೆ ಹಾರಿಬಂದಿತು. ಅಲ್ಲಿ, ಇಲ್ಲಿ ತೂರಾಡಿ ಮೂಲೆಯಲ್ಲಿ ಹೋಗಿ ಕುಳಿತಿತು. ಹೇಗಾದರೂ, ಅದನ್ನು ಮುಟ್ಟದೇ ಹಿಡಿದು ಹೊರಗೆ ಬಿಡೋಣ ಎಂದು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಸ್ವಲ್ಪ ಹೊತ್ತು ತಪ್ಪು ತಪ್ಪಾಗಿ ಹಾರಾಡಿ ಮೇಲುಗಡೆಯ ಸಜ್ಜಾದಲ್ಲಿ ಸರಂಜಾಮುಗಳ ಮೇಲೆ ಕುಳಿತುಕೊಂಡಿತು. ನನಗೆ ಎಷ್ಟು ದುಗುಡವಾಯಿತೆಂದು ಹೇಳಲಾಗದು. ವಿನ್ಯಾಸ್ ಕೂಡಾ ತನ್ನ ಪರೀಕ್ಷೆ ಮರೆತು, ನಿಂತಲ್ಲಿ ನಿಲ್ಲಲಾಗದೆ ಚಡಪಡಿಸಿದ. ಅಮ್ಮಾ ಹೊದಿಕೆ ಯಾಕೆ ಒಣಹಾಕಿದ್ದೆ ಅಲ್ಲಿ ? ಯಾಕಮ್ಮಾ ಹೀಗೆ ಮಾಡಿದೆ ? ಎಂದು ಪದೇ ಪದೇ ಪ್ರಶ್ನಿಸಿದಾಗ ನನ್ನಲ್ಲಿ ಉತ್ತರವಿರಲಿಲ್ಲ.

ಹಕ್ಕಿಯ ಚಿಂತೆ, ಕಾವಿಲ್ಲದೆ ತಣ್ಣಗಾಗಬಹುದಾದ ಮೊಟ್ಟೆಗಳ ಚಿಂತೆ, ಹೊರಗೆಲ್ಲೋ ಇರುವ ಅದರ ಸಂಗಾತಿಯ ಚಿಂತೆ, ಮಗನ ಪರೀಕ್ಷೆಯ ಚಿಂತೆ... ಒಟ್ಟಿನಲ್ಲಿ ಆ ರಾತ್ರಿ ನಾವ್ಯಾರೂ ಊಟ, ನಿದ್ದೆ ಮಾಡಲಿಲ್ಲ. ಬಾಲ್ಕನಿಯ ಬಾಗಿಲನ್ನು ತೆರೆದಿಟ್ಟು, ಹಕ್ಕಿಯಿದ್ದ ಕೋಣೆಯ ಬಾಗಿಲನ್ನು ಭದ್ರವಾಗಿ ಹಾಕಿಕೊಂಡು ಚಾವಡಿಯಲ್ಲಿ ಅಡ್ಡಾದೆವು. ಬೆಳಗಾಗುವುದನ್ನೇ ಕಾದು, ಓಡಿಹೋಗಿ ನೋಡಿದರೆ, ಸಜ್ಜಾದಿಂದ ಇಳಿದ ಸೂರಕ್ಕಿ ರೂಮಿನ ಮೂಲೆಯಲ್ಲಿ ಕುಳಿತಿತ್ತು. ಹಗಲಿನ ಬೆಳಕಿಗಾದರೂ ಹಾರಿ ಹೋಗಿ ಗೂಡು ಸೇರಬಹುದೆಂದುಕೊಂಡಿದ್ದ ನಮಗೆ ನಿರಾಶೆ. ಆದರೆ ತುಸು ಹೊತ್ತಲ್ಲೇ ಹಿಡಿಸಲಾಗದ ಸಂತಸ. ತೆರೆದ ಬಾಗಿಲ ಮೂಲಕ ಬಾಲ್ಕನಿಗೆ ಹಾರಿ, ತನ್ನ ಗೂಡನ್ನು ಸೇರಿಕೊಂಡಿತ್ತು ಸೂರಕ್ಕಿ. ವಿನ್ಯಾಸ್ ಖುಷಿಯಿಂದ ಪರೀಕ್ಷೆಗೆ ಹೊರಟ. ಅಂತೂ ಮುಂದೆ ಇನ್ಯಾವುದೇ ವಿಘ್ನಗಳು ಬಾರದೇ ಸೂರಕ್ಕಿ ಮರಿಯೊಡೆಸಿತು. ಗುಟುಕು ಕೊಟ್ಟಿತು. ಗೂಡೊಳಗಿನ ಮರಿಗಳ "ಚೀ ಚೀ" ಕೂಗು ಪಿಸುಗುಡುವಿಕೆಯಂತೆ ಕಿವಿ ತುಂಬಿತು! ಕೊನೆಗೊಂದು ದಿನ ಮರಿಗಳು ದೊಡ್ಡದಾಗಿ ಹಾರಿಯೂ ಹೋಗಿ ಗೂಡು ಖಾಲಿಯಾದಾಗ ಇನ್ನದು ಹಳೆಯ ಗೂಡು ಅಂದುಕೊಂಡೆವು. ಆದರೆ ಮತ್ತೊಂದು ತಿಂಗಳು ಕಳೆಯುವಾಗ ಗೂಡೊಳಗೆ ಚಟುವಟಿಕೆ ಆರಂಭವಾಯಿತು! ಬಹುಶಃ ಇನ್ನೊಂದು ಸೂರಕ್ಕಿ ಕುಟುಂಬ ಆ ಗೂಡನ್ನು ಸ್ವೀಕರಿಸಿತ್ತು! ಇದಂತೂ ಹೊಸ ವಿಷಯ. ಈ ಮೊದಲು ಹಳೆಮನೆಗಳಲ್ಲಿ ನಾವು ಕಟ್ಟಿದ ರಟ್ಟಿನ ಪೆಟ್ಟಿಗೆಗೆ ಬೇರೆ ಬೇರೆ ಮಡಿವಾಳ ಹಕ್ಕಿಗಳು ಮತ್ತು ಕಾಡುಮುನಿಯ ಹಕ್ಕಿಗಳು ಬಂದು ಸಂಸಾರ ಹೂಡಿದ್ದು ಹೌದು, ಆದರೆ ಇದು ಸೂರಕ್ಕಿಯೊಂದು ಕಟ್ಟಿದ ಗೂಡು; ಇನ್ನೊಂದು ಸೂರಕ್ಕಿ ಜೋಡಿ ಅದರಲ್ಲಿ ಬಂದು ವಾಸ ಮಾಡುವುದು ರೋಮಾಂಚನಕಾರಿ! ಬಾಡಿಗೆ ಇಲ್ಲದ ಚಂದದ ಮನೆ! ಈ ಸೂರಕ್ಕಿಗಳೂ ಮೊಟ್ಟೆಯಿಟ್ಟು,

ಕಾವುಕೊಟ್ಟು ಮರಿಮಾಡಿದವು. ಸೂರಕ್ಕಿ ಮೊಟ್ಟೆ ಮರಿಯಾಗಲು ಹದಿನೈದರಿಂದ ಹದಿನೇಳು ದಿನಗಳ ಸಮಯ. ಮರಿ ದೊಡ್ಡದಾಗಲು ಒಂದೂವರೆ ತಿಂಗಳು ಎಂದರೂ ಒಟ್ಟಿನಲ್ಲಿ ಮೂರು ತಿಂಗಳು. ಆದರೆ ವಿಚಿತ್ರವೆಂದರೆ ಗೂಡಲ್ಲಿ ಸದಾ ಚಟುವಟಿಕೆ ಮುಂದುವರಿಯುತ್ತಲೇ ಇದೆ! ಜೂನ್, ಜುಲೈ, ಆಗಸ್ಟ್ ತಿಂಗಳ ಜಡಿಮಳೆಯಲ್ಲೂ ನಿರಂತರ ತುತ್ತುಣಿಸುವಿಕೆ. ಹಾಗಾದರೆ ಕನಿಷ್ಠವೆಂದರೂ ವರ್ಷದಲ್ಲಿ ನಾಲ್ಕು ಹಕ್ಕಿ ಸಂಸಾರಗಳು ಆ ಗೂಡಲ್ಲಿ ವಸತಿ ಹೂಡಿ ಹೋಗಿವೆ ! ಒಟ್ಟಿನಲ್ಲಿ ಹಕ್ಕಿಗಳ ನಡವಳಿಕೆಯ ಕುರಿತು ಹೊಸತೊಂದು ಮಾಹಿತಿ ತಿಳಿಸಿಕೊಟ್ಟದ್ದು ನಮ್ಮ ಬಾಲ್ಕನಿ ಸೂರಕ್ಕಿಗಳು!

ಹಾಗೇ ಇಲ್ಲಿ ಪ್ರಸ್ತಾಪಿಸಲೇಬೇಕಾದ ಇನ್ನೊಂದು ಬಹುಮುಖ್ಯ ವಿಷಯವೆಂದರೆ ಅವು ಕೊರೋನಾ ಸಂಕಟ ಕಾಲದ ದಿನಗಳು. ಮನುಷ್ಯ ಇನ್ನೊಬ್ಬ ಮನುಷ್ಯನಿಂದ ದೂರಾಗಿ, ಮನೆಯೊಳಗೆ ಬಂಧಿಯಾದ ದಿನಗಳು. ಇದರೊಂದಿಗೆ ಲಾಕ್‌ಡೌನ್, ಆ ನಂತರದ ಸಾಲು ಸಾಲು ಸಾವು ನೋವುಗಳು; ದುಃಖದ, ಗೊಂದಲದ ಕ್ಷಣಗಳು. ಆಗ ತಮ್ಮ ಚಿಟಪಟ ಚಿಮ್ಮುವಿಕೆಯಿಂದ ನಮಗೆ ಆಮ್ಲಜನಕವಾದದ್ದು ಈ ಸುರಂಗದ ಮನೆ, ಹಕ್ಕಿಗಳು, ನಾಯಿಗಳು, ಬಸವನಹುಳುಗಳು...

ಈ ನಡುವೆ ಹತ್ತಿರದ ಮನೆಯ ನಾಯಿಗಳ ಕುರಿತು ಹೇಳಬೇಕು. ಗಿಡ ಮರ ಬಳ್ಳಿಗಳ ಮಧ್ಯೆ ಇರುವ ಆ 'ನಕ್ಷತ್ರ ಮನೆ'ಯಲ್ಲಿ ಒಟ್ಟು ಮೂರು ನಾಯಿಗಳು. ಎರಡು ಹೆಣ್ಣು ಒಂದು ಗಂಡು... ಟಾಮಿ, ಜಿಮ್ಮಿ, ಮೋತಿ. ಇವುಗಳ ಒಗ್ಗಟ್ಟಿನ ಸಂಗೀತವೇ ಒಂದು ಅದ್ಭುತ. ನಮ್ಮನೆಗೆ ಬಂದವರೆಲ್ಲ ಇದನ್ನು ಕೇಳಿ ಆಶ್ಚರ್ಯಚಕಿತರಾಗುತ್ತಿದ್ದರು. ಮೊದಮೊದಲು ನಮ್ಮದೂ ಅದೇ ಪರಿಸ್ಥಿತಿ. ಬೊಗಳಲು ಶುರು ಮಾಡಿದರೆ ಮೂರೂ ಸೇರಿ ಬೊಬ್ಬೆಯೋ ಬೊಬ್ಬೆ! ಆ ಬೊಬ್ಬೆಗೂ ಒಂದು ವಿಚಿತ್ರ ಲಯ! ಎರಡು ಮೂರು ನಿಮಿಷ... ಒಬ್ಬ ನಿಲ್ಲಿಸಿದರೆ ಸಾಕು, ಉಳಿದೆಲ್ಲರೂ ಗಪ್‌ಚಿಪ್; ಎಲ್ಲವೂ ಸ್ತಬ್ಧ, ನೀರವ. ಜಡಿಮಳೆ ಬಂದುಬಿಟ್ಟಂತೆ! ನಮ್ಮ ಸೂರಕ್ಕಿ ಬಾಲ್ಕನಿಗೂ ನಾಯಿಮನೆಗೂ ಎರಡು ಮಾರಿನಷ್ಟೇ ದೂರ. ನಡುವೆ ಒಂದೇ ಒಂದು ಆವರಣ. ಮತ್ತೆರಡು ಕಾಡು ಬಾದಾಮಿ, ದಾಸವಾಳದ ಗಿಡಗಳು. ಇನ್ನು, ಕಾಡು ಬಾದಾಮಿಯ ಬೀಜವನ್ನು ಗೂಡಿಗೆ ಸಾಗಿಸುತ್ತಾ ಕಂಪೌಂಡಿನುದ್ದಕ್ಕೂ ಜಿಗಿದಾಡುವ ಅಳಿಲೊಂದರ ಕಾರುಬಾರಂತೂ ಭಯಂಕರ!

ಮತ್ತೊಂದು ಕಡೆ ಅಡುಗೆಮನೆಯ ನೋಟಕ್ಕೆ ದಕ್ಕುವ ಮನೆಯಲ್ಲೂ ಎರಡು ನಾಯಿಗಳು. ಒಬ್ಬ ಕಾಳ ಇನ್ನೊಬ್ಬ ಟಾಮಿ. ಕಾಳ ದಪ್ಪ ದಪ್ಪಗೆ ಮೈ ತುಂಬಿಕೊಂಡ ಕಟ್ಟುಮಸ್ತಿನ ಆಸಾಮಿ, ಧೈರ್ಯವಂತ. ಇವನಿಗಿಂತ ಕಿರಿಯನಾದರೂ ಮುದುಕನಂತೆ ನಡೆದಾಡುವ ಟಾಮಿ ಜೆರ್ಮನ್ ಶೆಫರ್ಡ್ ಸಂತತಿಯವನು. ಟಾಮಿ ಎತ್ತಕಡೆ ಹೊರಟರೂ ಅವನ ಹಿಂದೆ ಕಾಳ ಇದ್ದೇ ಇರುತ್ತಿದ್ದ. ಕಾಳನ ವರ್ತನೆ ಹೇಗೆಂದರೆ, ಟಾಮಿ ಸಣ್ಣವನು, ಏನೂ ತಿಳಿಯುವುದಿಲ್ಲ; ತಾನೇ ಅವನನ್ನು ಸಂಭಾಳಿಸಬೇಕು, 'ನಾನೇ ಅವನ ಬಾಡಿಗಾರ್ಡ್' ಎಂಬಂತೆ! ಇವರಿಬ್ಬರ ಜೋಡುನಡಿಗೆ ಬಹಳ ಚಂದ.

ಇನ್ನು, ನಮ್ಮ 'ಬಸವನಹುಳು ಬಾಲ್ಕನಿ'ಗೆ ಬರುವ. ಇದು ಹೂ ಗಿಡಗಳು, ಕೆಸ, ಉರಗ, ದೊಡ್ಡಪತ್ರೆ, ಮಾವು, ಹಲಸು ಗೇರು ಸಸಿಗಳು, ಬಿದ್ದು ಹುಟ್ಟಿದ ಕಲ್ಲುಬಾಳೆ ಮುಂತಾದವುಗಳಿಂದ ಕಿಕ್ಕಿರಿದ ಪ್ರದೇಶ. ಬಟ್ಟೆಗೂ ಇಲ್ಲೇ ಬಿಸಿಲು ಕಾಣಬೇಕು. ಮೆಣಸಿನಕಾಳು, ಎಳ್ಳು, ಜೀರಿಗೆ, ಕೆಂಪುಮೆಣಸು, ಕೊತ್ತಂಬರಿ ಎಲ್ಲವೂ ಮುಗ್ಗಲು ಹಿಡಿಯದಂತೆ ಇಲ್ಲೇ ಒಣಗಿಸಬೇಕು. ಒಟ್ಟಿನಲ್ಲಿ ಒಂದಂಗುಲವೂ ವ್ಯರ್ಥವಾಗದೆ ಉಪಯೋಗವಾಗುವ ಜಾಗ.

ಕಿಟಕಿಯ ಹೊರಭಾಗದಲ್ಲೆಲ್ಲೋ ಮೈನಾ ಹಕ್ಕಿಯ ಗೂಡುಗಳಿವೆ, ಪಕ್ಕದ ಮನೆ ಬಾಲ್ಕನಿಯಲ್ಲಿ ಪಿಕಳಾರಗಳ ಮನೆಯಿದೆ, ಪಾರಿವಾಳಗಳಂತೂ ಕಟ್ಟಡದ ದಶದಿಕ್ಕುಗಳ ಕಿಂಡಿ–ಕಂಡಿಗಳಲ್ಲೂ ಗೂಡುಕಟ್ಟಿ ದಿನವಿಡೀ ಗುಟರ್ ಗುಟರ್ ಎಂಬ ಮಧುರ ಸಂಗೀತವೊದಗಿಸಿವೆ! ಅಡುಗೆ ಮನೆಗೆ ಕಾಲಿಟ್ಟರೆ ಸಾಕು, ಮರಿಗಳನ್ನೋ, ಸಂಗಾತಿಯನ್ನೋ ಸಂತೈಸುವ, ಸೆಳೆಯುವ ಪಾರಿವಾಳಗಳ ಮಾತು ಸಿಂಕಿನ ಹಳಸಲು ಪಾತ್ರೆ ತೊಳೆಯುವುದನ್ನೂ ಪ್ರೀತಿಸುವಂತೆ ಮಾಡುತ್ತದೆ!

ಪಿಕಳಾರ (ಬುಲ್ ಬುಲ್), ಸೂರಕ್ಕಿಗಳು ಅಲ್ಲಲ್ಲಿ ಗೂಡು ಕಟ್ಟಿಕೊಂಡಿರುವ ಇಡೀ ಅಪಾರ್ಟ್‌ಮೆಂಟೇ ಸೃಷ್ಟಿಜಾಲಕ್ಕೆ ಒಂದು ಜೀವಂತ ರೂಪಕವಾಗಿದೆ... ಒಂದು ಬೆಳಗ್ಗೆ ಚಾವಡಿಯಲ್ಲಿ ತಿಂಡಿ ತಿನ್ನುತ್ತ ಕುಳಿತಿದ್ದಾಗ ಬಾಲ್ಕನಿಯ ಹೂವಿನ ಕುಂಡದಲ್ಲಿ ಏನೋ ಚಲನೆ ಕಂಡಿತು "ಹಾವು ಬಂತಾ ಇಷ್ಟು ಮೇಲೆ?" ಎಂದು ಆಶ್ಚರ್ಯದಿಂದ ಗಮನಿಸಿದಾಗ ಕಂಡದ್ದು ಒಂದು ಪಿಕಳಾರ. ಅಲ್ಲಿ ಇರುವೆಗಳಿಗೆಂದು ಹಾಕಿದ್ದ ದೋಸೆ 'ಚೂರನ್ನು ತಿನ್ನುತ್ತಿತ್ತು!

ಅಗಲದ ಬುತ್ತಿ ಪಾತ್ರೆಯೊಂದರಲ್ಲಿ ಸ್ವಲ್ಪ ಬೆಳಗಿನ ತಿಂಡಿ ಮತ್ತು ಅಕ್ಕಿ. ಇನ್ನೊಂದು ತಟ್ಟೆಯಲ್ಲಿ ಅರ್ಧ ಸಿಪ್ಪೆ ಬಿಡಿಸಿದ ಬಾಳೆಹಣ್ಣನ್ನು ಇಟ್ಟೆ. ಜೊತೆಗೆ ಬಕೆಟ್ ಮತ್ತು ಚೊಟ್ಟು (ಮಗ್ಸ್)ಗಳಲ್ಲಿ ತಣ್ಣನೆಯ ನೀರು. ಇಲ್ಲಿಗೆ ಮೊತ್ತಮೊದಲ ಅತಿಥಿಗಳಾಗಿ ಬಂದದ್ದು ಬುಲ್ ಬುಲ್ ಜೋಡಿ! ನಂತರ ಕಾಗೆಗಳು. ಇದೇ ಖುಷಿಯಲ್ಲಿ ದಿನವೂ ಆಹಾರ ಇಡುತ್ತಾ ನೀರು ಬದಲಿಸುತ್ತಾ ಕಾದೆ. ಮೂರ್ನಾಲ್ಕು ದಿನಗಳಲ್ಲಿ ಮೈನಾ ಬಂದವು. ಕ್ರಮೇಣ ಇಷ್ಟು ದಿನ ಕಾಣಿಸದಿದ್ದ ದರಲೆ ಹಕ್ಕಿಗಳೂ (ಸಾತ್‌ಭಾಯಿ) ಬಂದವು. ಬಾಳೆಹಣ್ಣನ್ನು ಅರ್ಧಮಾಡಿ ಹಾಕಿದಾಗ ಕಾಗೆಗಳು ಆಚೆ ಈಚೆ ನೋಡಿ ಇಡೀ ಚೂರನ್ನೇ ಹೊತ್ತೊಯ್ಯುವುದನ್ನು ನೋಡಿ, ಸಣ್ಣ ಸಣ್ಣ ಹೋಳುಗಳಾಗಿ ಮಾಡಿ ಹಾಕಿದೆ. ಆಶ್ಚರ್ಯಕರವೆಂಬಂತೆ ಎರಡು ಹೆಣ್ಣು ಕೋಗಿಲೆಗಳು ಬಂದವು! ಒಂದು ದಿನ 'ಕ್ಯಾಕ್ ಕ್ಯಾಕ್' ಎಂಬ ಜೋರಾದ ಶಬ್ದ ಕೇಳಿ ಮೈನಾಗಳು ಜಗಳವಾಡುತ್ತಿರಬೇಕೆಂದು ಭಾವಿಸಿದರೆ, ಹೆಣ್ಣು ಕೋಗಿಲೆಯ ಗಡಸು ದನಿಯ ಕೂಗಾಟವೆಂದು ಮರುದಿನ ತಿಳಿಯಿತು! ಕಂದುಬಣ್ಣ, ಮೈತುಂಬಾ ಚುಕ್ಕಿಗಳ ಇವು ನೋಡಲು ಎಷ್ಟು ಚಂದ! ವಿಪರೀತ ಹೆದರಿಕೆಯಿಂದ ಬಹು ಸಣ್ಣ ಕಂಪನವನ್ನೂ ಗುರುತಿಸಿ ಧಡಲ್ಲನೆ ಓಡಿಬಿಡುವುದು ಇವುಗಳ ಸ್ವಭಾವ. ಗಂಡು ಕೋಗಿಲೆಯೂ ಬರುತ್ತದೆ; ಕಾಗೆಗಳ ಗುಂಗಿನಲ್ಲಿದ್ದ ನಾವು ಫಕ್ಕನೆ ಅದನ್ನು ಗುರುತಿಸಲಿಲ್ಲ. ಮುಂದೆ ಬಂದ ವಿಶೇಷ ನೆಂಟರೆಂದರೆ ಕಾಲೊಂದನ್ನು ಕಳೆದುಕೊಂಡ ಕಾಗೆ. ಅದನ್ನಂತೂ ಹಿಡಿದು ಮುತ್ತಿಕ್ಕಬೇಕೆಂಬಷ್ಟು ಮುದ್ದು ಉಕ್ಕಿ ಬರುತ್ತಿತ್ತು.

"ಬಸವನಹುಳು ಬಾಲ್ಕನಿ"ಗೆ ಈ ಹೆಸರು ಬಂದದ್ದೇಕೆ ಎಂಬ ಕುರಿತು ಈಗ ಹೇಳುತ್ತೇನೆ. ಗಿಡಗಳಿಗೆ ದಿನವೂ ನೀರು ಹಾಕುವುದರಿಂದ ಅವುಗಳ ಬುಡ ತಂಪಾಗಿರುತ್ತದೆ. ಈ ಭಾಗದಲ್ಲಿ ಸೆಪ್ಟಂಬರಿನಿಂದ ಶುರುವಾಗುವ ಸುಡುಬಿಸಿಲು ಮೇ ತಿಂಗಳವರೆಗೆ ಮುಂದುವರಿಯುತ್ತದೆ. ನಡುನಡುವೆ ಮಳೆ, ಅಡ್ಡಮಳೆಗಳು ಬಂದು ಹೋದರೂ ಬಿಸಿಲಿನ ಝಳ ವಿಪರೀತವಿರುತ್ತದೆ. ಮಕರ ಸಂಕ್ರಾಂತಿಯವರೆಗಿನ ಬಿಸಿಲು ನೇರವಾಗಿ ಇಲ್ಲಿಗೆ ಹೊಡೆಯುತ್ತದೆ. ಹಾಗಾಗಿ ಬೆಳಗ್ಗೆ ಮತ್ತು ಸಂಜೆ ಎರಡೆರಡು ಬಾರಿ ಗಿಡಗಳಿಗೆ ನೀರುಣಿಸುತ್ತೇವೆ. ಸಹಜವಾಗೇ ಸುತ್ತಲಿನ ವಾತಾವರಣಕ್ಕಿಂತ ನಮ್ಮ ಬಾಲ್ಕನಿ ಕೂಲ್. ಈ ಕಾರಣಕ್ಕಾಗಿಯೋ ಏನೋ 'ಮರಜವಳೆ' ಎಂದು ನಾವು ಕರೆಯುವ ಸಿಂಬಳದ ಹುಳುವಿನ ಜಾತಿಯಲ್ಲೇ ಕಪ್ಪು ಬಣ್ಣದ ಹುಳ ಕಾಣಿಸಿಕೊಂಡಿತು. ಮೊದಮೊದಲು ಇದ್ದ ನಾಲ್ಕೈದು ಹುಳುಗಳು ಒಮ್ಮೊಮ್ಮೆ ಒಳಗೂ ಬಂದು ಜೋಪಾನವಾಗಿ ಹೊರದಬ್ಬಿಸಿಕೊಳ್ಳುತ್ತಿದ್ದವು. ಆದರೆ ವರ್ಷವೊಂದು ಕಳೆಯುವುದರಲ್ಲಿ ಇವುಗಳ ಸಂಖ್ಯೆ ಐವತ್ತಕ್ಕಿಂತ ಜಾಸ್ತಿಯಾಯಿತು! ಇವು ಹಗಲಿನಲ್ಲಿ ಕಾಣಿಸಿಕೊಳ್ಳುವುದು ಕಮ್ಮಿ. ಆಶ್ಚರ್ಯವೆಂದರೆ ಇವುಗಳ ಜೊತೆ ಹೊಸ ಪರಿಚಯವಾಗಿ ಬಂದ ಬಸವನ ಹುಳುಗಳದ್ದು... ಮಗ ಕಾಲೇಜಿನ ಅಸೈನ್‌ಮೆಂಟ್ಸ್ ಬರೆಯುವ ಸಮಯದಲ್ಲಿ ನಾವಿಬ್ಬರೂ ಮಲಗುವುದು ರಾತ್ರಿ ಒಂದು ಗಂಟೆಯಾಗುತ್ತಿತ್ತು. ಹಾಗೊಂದು ದಿನ ನಾನು ಬಾಲ್ಕನಿಗೆ ಹೋಗಿ ನೋಡಿದಾಗ ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಹೊಸತಾಗಿ ಕಾಡಿನಿಂದ ತಂದು ನೆಟ್ಟ ನೆಲಸಂಪಿಗೆ ಗಿಡದ ಕುಂಡದಲ್ಲಿ ಹತ್ತಕ್ಕಿಂತ ಜಾಸ್ತಿ ಬಸವನಹುಳುಗಳು ಕೂತಿದ್ದವು. ರಾತ್ರಿ ಏಳು–ಎಂಟರ ಹೊತ್ತಿಗೆ ಅವು ಅಲ್ಲಿರಲಿಲ್ಲ. ಮರುದಿನವೂ ರಾತ್ರಿ ಒಂದರ ಹೊತ್ತಿನಲ್ಲಿ ಪರೀಕ್ಷಿಸಿದಾಗ ದಾಸವಾಳದ ಗಿಡದ ಬುಡದಲ್ಲಿ ಇಪ್ಪತ್ತಕ್ಕಿಂತಲೂ ಹೆಚ್ಚು ಬಸವನಹುಳುಗಳು! ಆಶ್ಚರ್ಯವೆಂದರೆ ಬೆಳಗ್ಗೆ ಆರೂವರೆಯ ಹೊತ್ತಿಗೆ ಎದ್ದು ನೋಡುವಾಗ ಒಂದೇ ಒಂದೂ ಸಿಗುವಂತಿರಲಿಲ್ಲ. ರಾತ್ರಿ ಒಂಬತ್ತರ ನಂತರ ಬೆಳಗ್ಗೆ ಐದರ ನಡುವಿನ ಹೊತ್ತಲ್ಲಿ ನಮ್ಮ ಬಾಲ್ಕನಿಯಲ್ಲಿ ಬಸವನಹುಳುಗಳದ್ದೇ ಜಾತ್ರೆ! ಬೇರೆ ಸಮಯದಲ್ಲಿ ಇವು ಎಲ್ಲಿ ಹೋಗುತ್ತವೆ?

ನಮ್ಮ ಫ್ಲಾಟಿನ ಮನೆ; ನೆಲದ ಸ್ಪರ್ಶ ಮಣ್ಣ ಘಮ, ಮರಗಳ ಸ್ನೇಹ, ಬೆಕ್ಕು ನಾಯಿಗಳ ಸಾನಿಧ್ಯ ಇಲ್ಲದ ನೆಲೆಯಾದರೂ ಇಲ್ಲಿಯೂ ಜೀವಮಿಡಿತದ ಸದ್ದಿದೆ. ಮರಗಿಡಗಳ, ತಂಗಾಳಿಯ ಸ್ಪರ್ಶವಿದೆ, ವಿಧ ವಿಧ ಹಕ್ಕಿ ಹಾಡಿನ ನಿನಾದವಿದೆ. ಇನ್ನೊಂದು ವಿಶೇಷವೆಂದರೆ ಕೆಳಗಿನ ಮನೆಯ ಕುಕ್ಕರ್ ಕರೆ, ಪಕ್ಕದ ಮನೆಯ ಒಗ್ಗರಣೆ ಘಾಟು, ಹತ್ತಿರದ ಮನೆಯ ಮಗುವಿನ ತೊದಲು ಮೇಲ್ಯಾವುದೋ ಮನೆಯ ಮಿಕ್ಸಿಯ ಆರ್ಭಟ. ನಮ್ಮ ಮೇಲ್ಗಡೆಯೇ ಇರುವ ವಿದ್ಯಾರ್ಥಿಗಳ ಓಡುನಡಿಗೆಯ ದಡಬಡ, ನಡುರಾತ್ರಿಯ ಸಂಗೀತ–ಮಾತುಕತೆ. ಹೀಗೆ ಎಲ್ಲವೂ ಮನದಲ್ಲಿ ದಾಖಲಾಗುತ್ತ ಇಲ್ಲಿ ನಾವು ಮಾತ್ರ ಅಲ್ಲ, ಎಲ್ಲರೂ ಇದ್ದಾರೆ; ನಮ್ಮೊಂದಿಗೇ ಇದ್ದಾರೆ ಎಂಬ ಭ್ರಮೆಯನ್ನೂ ಮೂಡಿಸುತ್ತದೆ. ಇಂತಹ ಹುಸಿಭ್ರಮೆಯು ಭದ್ರತೆಯೂ ಅಗತ್ಯವಿರಬಹುದು. ಇದಕ್ಕೆಂದೇ ಕೆಲವರು ಫ್ಲಾಟಿನ ಮನೆಯೇ ಬೇಕೆಂದು ಹಟಹಿಡಿಯುವುದೇನೋ!




(ಮೂಡುಬಿದ್ರೆಯ ಶಾಲೆಯೊಂದರಲ್ಲಿ ಉಪಾಧ್ಯಾಯಿನಿ ಆಗಿರುವ ಲೇಖಕಿ ಚಿತ್ರ ಕಲಾವಿದೆಯೂ ಹೌದು)

ನಿಜವಾದ ಸತ್ಯ ಮತ್ತು ವೇಷದ ಸತ್ಯ:

ಮಾಸ್ತಿ ಕಥಾಲೋಕದ ಸ್ತ್ರೀದರ್ಶನ

–ಎಚ್.ಎಸ್. ರಾಘವೇಂದ್ರ ರಾವ್

"ಹಿರಿಯರು ಹೇಳಿದ್ದೆಂದು ನೋಡುವುದು ಒಳ್ಳೆಯದೇ. ಹಿರಿಯರು ನಮಗೆ ಹೊರಗಣ ಗುರುಗಳು. ಅವರ ಧ್ವನಿಯನ್ನು ಕೇಳಿ. ಒಳಗೂ ಒಬ್ಬ ಗುರು ಇದ್ದಾನೆ. ಅವನನ್ನು ಮುಚ್ಚಿಡಬೇಡಿ. ಎರಡೂ ಧ್ವನಿಗಳ ಶ್ರುತಿ ಸೇರಿದಾಗ ತೋರುವ ಸತ್ಯ ನಿಜವಾದ ಸತ್ಯ. ಅದುವರೆಗಿನ ಸತ್ಯ ವೇಷದ ಸತ್ಯ" (ಸಾರಿಪುತ್ರನ ಕೊನೆಯ ದಿನಗಳು, ಮಾಸ್ತಿ)



ಶ್ರೀನಿವಾಸರ ಸೃಜನಶೀಲತೆ ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ವೈಚಾರಿಕತೆಗಳ ನಡುವೆ ಘಟಿಸುವ ಸಂಯೋಜನೆ ಮತ್ತು ಸಂಘರ್ಷಗಳಲ್ಲಿ ಯಾವುದು ಮುನ್ನೆಲೆಗೆ ಬರುತ್ತದೆ ಎನ್ನುವುದು ಅವರ ಕಥೆಗಳ ಯಶಸ್ಸನ್ನು ತೀರ್ಮಾನಿಸುತ್ತದೆ. ಪಶ್ಚಿಮದ ಆಧುನಿಕತೆಯ ಫಲಾನುಭವಿಗಳಾಗಿಯೂ ಅದರ ವಿರುದ್ಧವಾಗಿ ಭಾರತೀಯ ಸಂಸ್ಕೃತಿ ಮತ್ತು ಭಾರತೀಯ ಜೀವನಶೈಲಿಗಳ 'ಒಂದು ಬಗೆಯ' ಹೆಚ್ಚುಗಾರಿಕೆಯನ್ನು ಎತ್ತಿಹಿಡಿದ ಕನ್ನಡ ಲೇಖಕರಲ್ಲಿ ಮಾಸ್ತಿಯವರು ಮುಖ್ಯರು. ಕರ್ನಾಟಕದ ಜನಸಮುದಾಯಗಳ ಬಹುತ್ವದ ನಿಕಟ ಪರಿಚಯವನ್ನು, ಬೇರೆ ಯಾವುದೇ ಸಾಹಿತಿಗಿಂತ ಹೆಚ್ಚಾಗಿಯೇ ಪಡೆದ ಮಾಸ್ತಿಯವರು ತಮ್ಮ ನೂರು ಕತೆಗಳಲ್ಲಿ ತೆರೆದಿಟ್ಟಿರುವ ಲೋಕವೈವಿಧ್ಯದ ಬಗೆಯು ಅನನ್ಯವಾದುದು. ಈ ಲೋಕದಲ್ಲಿ ಅನೇಕ ಹೆಣ್ಣುಮಕ್ಕಳೂ ಇದ್ದಾರೆ. (ಮಾಸ್ತಿಯವರು ಅವರೆಲ್ಲರನ್ನೂ 'ತಾಯಂದಿರು' ಎಂದೇ ಕರೆದಾರು.) ಈ ಹೆಣ್ಣುಮಕ್ಕಳು ಕರ್ನಾಟಕಕ್ಕೆ ಸೀಮಿತವಲ್ಲ. ಫ್ರಾನ್ಸ್‌ನ ಚಾಟ್ಲೆಟ್ ಪ್ರಭುವಿಯಿಂದ ದಕ್ಷಿಣ ಅಮೆರಿಕಾದ ಗಿರಿಜನ ಹೆಣ್ಣಿನವರೆಗೆ, ಆಚಾರ್ಯರ ಪತ್ನಿಯಿಂದ ನಿಜಗಲ್ಲಿನ ರಾಣಿಯವರೆಗೆ, ವೆಂಕಟಿಗನ ಹೆಂಡತಿಯಿಂದ ವೆಂಕಟಶಾಮಿಯ ಪ್ರಣಯಿನಿಯಾದ ದೊಂಬರ ಹುಡುಗಿಯವರೆಗೆ, ಶಕುಂತಲೆಯಿಂದ ಚಟ್ಟೇಗಾರ ಹೆಣ್ಣಿನವರೆಗೆ, ಮೇಲೂರು ಲಕ್ಷ್ಮಮ್ಮನವರಿಂದ ಮೊದಲಾಗಿ ಬೀದಿಯಲ್ಲಿ ಹೋಗುವ ನಾರಿಯವರೆಗೆ ಚಾಚಿಕೊಂಡಿರುವ ಈ ಸ್ತ್ರೀಸಮುದಾಯದ ಹರಹು ಮತ್ತು ವೈವಿಧ್ಯಕ್ಕೆ ಸರಿಸಮನಾದುದು ಕನ್ನಡದಲ್ಲಿ ಮತ್ತೊಂದು ಇಲ್ಲ. ಇವರೆಲ್ಲರನ್ನೂ ಒಟ್ಟಾಗಿ ನೋಡಿದಾಗ ಮಾಸ್ತಿಯವರ ಸ್ತ್ರೀ–ದರ್ಶನದ ಕಲ್ಪನೆ ಬರುತ್ತದೆ. ಮಾಸ್ತಿಯವರು ಇವರೆಲ್ಲರ ಮನದೊಳಗೆ ಪ್ರವೇಶಿಸಿ, ಅವರ ತಲ್ಲಣ–ಜೀವಂತಿಕೆಗಳನ್ನು ಅರ್ಥ ಮಾಡಿಕೊಳ್ಳಲು, ಕಲೆಯಾಗಿ ಮರುರೂಪಿಸಲು ಯಶಸ್ವಿಯಾದ ಪ್ರಯತ್ನ ಮಾಡಿರುವರೆನ್ನುವುದೂ ದಿಟವೇ. ಆದರೆ ಇಂಥ ಅನುಭವದ ಜೊತೆಗೆ, ಇಷ್ಟೊಂದು ಪಾತ್ರಗಳ ನಿರ್ಮಿತಿಯೊಳಗೆ ತೊಡಗಿಕೊಂಡ ಬರಹಗಾರನ 'ಮೌಲ್ಯಪ್ರಜ್ಞೆ' ಮತ್ತು 'ಸ್ವ'–ಭಾವಗಳ ಬಗೆಗಿನ ಅರಿವು ಕೂಡ ಮುಖ್ಯವಾಗುತ್ತದೆ. ಯಾಕೆಂದರೆ ಮಾಸ್ತಿಯವರು ಮತ್ತೆ ಮತ್ತೆ ಹೇಳಿರುವಂತೆ ಅವರ ಕಥೆಗಳು, ಅವರ ಜೀವನದರ್ಶನಕ್ಕೆ ನೀಡಿರುವ 'ನಿದರ್ಶನ'ಗಳು. ಈ ದರ್ಶನವು ಹಿರಿಯರು ನೀಡಿದ ತಿಳಿವಳಿಕೆಯ ಬೆಳಕಿನಿಂದ ಮತ್ತು ಸ್ವಂತ ವಿವೇಚನೆಯಿಂದ ಬಂದಿದ್ದು.

ಹೆಣ್ಣಿನ 'ವೈಯಕ್ತಿಕ ಅಸ್ತಿತ್ವ' ಮತ್ತು 'ಸಾಮಾಜಿಕ ಅಸ್ತಿತ್ವ'ಗಳ ನಡುವೆ ಇರುವ/ಮೂಡುವ ಬಿರುಕುಗಳು ಮತ್ತು ಅವಳು ಮಾಡಿಕೊಳ್ಳಬೇಕಾದ ಹೊಂದಾಣಿಕೆಗಳ ದುರಂತವನ್ನು ಮಾಸ್ತಿ ಚೆನ್ನಾಗಿ ಬಲ್ಲರು. ಈ ಲೋಕದಲ್ಲಿ, ಗಾಯಗೊಳ್ಳದ ಹೆಣ್ಣು–ಹೃದಯವೇ ಇಲ್ಲವೆನ್ನುವುದು ಅವರಿಗೆ ಚೆನ್ನಾಗಿ ತಿಳಿದಿದ್ದ ಸಂಗತಿ. ಆದರೆ, ಆ ಗಾಯವನ್ನು ಮರೆಮಾಚಿಕೊಂಡು ಕುಟುಂಬದ, ಊರಿನ ಒಳಿತಿಗಾಗಿ ಬದುಕುವ/ಸಾಯುವ ವಿವೇಕವುಳ್ಳ ಹೆಣ್ಣು ಅವರ ಗೌರವವನ್ನು ಸಂಪಾದಿಸುತ್ತಾಳೆ. ಹಾಗಲ್ಲದವರನ್ನು ಅವರು ತಿರಸ್ಕರಿಸದಿದ್ದರೂ ಗೌರವಿಸುವುದಿಲ್ಲ. ಹೀಗೆ ಹೊಂದಿಕೊಳ್ಳುವ ಹಂಬಲ ಮತ್ತು ಅನಿವಾರ್ಯತೆ ಗಂಡಿಗಿಂತ ಹೆಚ್ಚಾಗಿ ಹೆಣ್ಣಿಗೆ ಇದೆಯೆನ್ನುವುದೂ ಅವರಿಗೆ ಗೊತ್ತು. ಅವರು ಸೃಷ್ಟಿಸುವ ಶಕುಂತಲೆಯು ಹೇಮಕೂಟದಲ್ಲಿ ತನ್ನ ತಿಳಿವಳಿಕೆಯನ್ನು ಗೆಳತಿಯರೊಂದಿಗೆ ಹಂಚಿಕೊಂಡರೂ ಮತ್ತೆ 'ಜ್ವರಸಮಾನ'ವಾದ ಅರಮನೆಗೆ ಹಿಂದಿರುಗುತ್ತಾಳೆ. ಅವರ ಕಥೆಯು, ಹರಿಯುವ ಹೊಳೆಯಾದ 'ಮಾಲಿನಿ'ಯನ್ನು ನಿಂತ ನೀರಿನ ಕೊಳವಾದ 'ಗೌತಮಿ'ಯಾಗಿ ಬದಲಿಸುವುದರಲ್ಲೂ ಈ ಹೊಂದಿಕೆ, ಹೊಂದಾಣಿಕೆಗಳ ಪಾಠವಿದೆ. ಮಾನವೀಯವಾದ ಸ್ಪಂದನಗಳನ್ನು ಮನುಷ್ಯಸಹಜವಾದ ದೌರ್ಬಲ್ಯಗಳೆಂದು ಗ್ರಹಿಸುವ ವ್ಯವಸ್ಥೆಯನ್ನು ಒಪ್ಪಿಕೊಂಡಾಗ ನಮ್ಮ ತಿಳಿವಳಿಕೆಗೆ ಮಿತಿಗಳು ಉಂಟಾಗುತ್ತವೆ. ಇದು ಒಳ್ಳೆಯತನ ಮತ್ತು ಕೆಟ್ಟತನಗಳೆಂಬ ವರ್ಗೀಕರಣಕ್ಕೆ ನಿಲುಕದ ಮಿತಿ. ಲೇಖಕರು ಆ ಮಿತಿಯೊಳಗಡೆಯೇ ಉಳಿಯುತ್ತಾರೆ ಅಥವಾ ಅದನ್ನು ಮೀರುವ ಬಂಡಾಯ ಮಾಡುತ್ತಾರೆ.

ಎಲ್ಲ ಹಿರಿಯ ಲೇಖಕರ ಹಾಗೆ, ಮಾಸ್ತಿಯವರಿಗೂ ಪರಮನಃಪ್ರವೇಶದ ಶಕ್ತಿ ಇತ್ತು. ಅದು ಇಲ್ಲದೆ ಹೋದರೆ ಲೋಕಚಿತ್ರಣವಾಗಲೀ ಲೋಕದರ್ಶನವಾಗಲೀ ಸಾಧ್ಯವಿಲ್ಲ. ಆ ಶಕ್ತಿಗೆ ಸಾಮಾಜಿಕ ಅಸ್ಮಿತೆಗಳನ್ನು ಮೀರುವ ಸಾಮರ್ಥ್ಯ ಇರುತ್ತದೆ. ಸೀತೆ, ಚೋಮ, ಗುತ್ತಿ, ತಿಮ್ಮಿ, ಸರಸೋತಿ, ಆಣೆ ಬಡ್ಡಿ ರಂಗಮ್ಮರನ್ನು ಸೃಜಿಸಿದ ಶಕ್ತಿಯು ಈ ಬಗೆಯದು. ಆದರೆ, ಕೆಲವು ಸಲ ಈ ಸೃಜನಶೀಲತೆಗೆ ವೈಚಾರಿಕತೆಯ ಚೌಕಟ್ಟು ಒದಗಿ ಬರುತ್ತದೆ. ಸಂಪ್ರದಾಯ, ಪರಂಪರೆ ಮತ್ತು ಪುರುಷಪ್ರಧಾನ ಸಮಾಜದಲ್ಲಿ ಆಳವಾಗಿ ಬೇರೂರಿದ ನಂಬಿಕೆಗಳು ಈ ಚೌಕಟ್ಟನ್ನು ನಿರ್ಮಿಸುತ್ತವೆ. ಕಳೆದ ಶತಮಾನದ ಕರ್ನಾಟಕವು ಒಟ್ಟಂದದಲ್ಲಿ ಆಧುನಿಕತೆಗೆ ಸ್ಪಂದಿಸಿದ ಬಗೆಯಲ್ಲಿಯೇ ಇಂಥದೊಂದು ದ್ವಂದ್ವ ಇದೆ. ಅದು ತಾನು ಪಡೆದ ಆಧುನಿಕತೆಯ ಸೌಲಭ್ಯಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದರಲ್ಲಿ ಅಸಹನೆ ಮತ್ತು ಸ್ವಾರ್ಥಗಳನ್ನು ತೋರಿಸಿದೆ. 'ಮೆರಿಟ್' ಎಂಬ ಹುಸಿ 'ನಿರ್ಮಿತಿ'ಯ ಹೆಸರಿನಲ್ಲೋ ಅಥವಾ 'ಗೃಹಲಕ್ಷ್ಮಿ', 'ಮನೆ ಮನೆಯ ತಪಸ್ವಿನಿ', ಮುಂತಾದ ಮುಳ್ಳಿನ ಕಿರೀಟಗಳಿಂದಲೋ, ಕಾಮದ ವೈಭವೀಕರಣದಿಂದಲೋ ಹಿಂದುಳಿದವರ, ಹೆಂಗಸರ ವ್ಯಕ್ತಿತ್ವದ ಸಮಗ್ರೀಕರಣವನ್ನು ವಿರೋಧಿಸುತ್ತಲೇ ಬಂದಿದೆ. ಉದ್ಯೋಗಸ್ಥ ಮಹಿಳೆಯರ ಬಗ್ಗೆ ಆ ಕಾಲದ ಕರ್ನಾಟಕದ ಬಹು ಪಾಲು ಮುಖ್ಯ ಲೇಖಕರು ಅಸಹನೆಯನ್ನೇ ತೋರಿಸಿದ್ದಾರೆ. ಭೈರಪ್ಪನವರು ಮಾತ್ರವಲ್ಲ, ಕಾರಂತ, ಅಡಿಗ, ಇನಾಂದಾರ್, ಅನಂತಮೂರ್ತಿ, ತೇಜಸ್ವಿ ಮುಂತಾದ ಹಲವರ ಬರವಣಿಗೆಯಲ್ಲಿ ಈ ಲಕ್ಷಣಗಳನ್ನು ಗುರುತಿಸಬಹುದು. ಮಾಸ್ತಿಯರಂತೂ ಒಂದು ಸಂದರ್ಶನದಲ್ಲಿ, 'ನಮ್ಮ ಹೆಣ್ಣುಮಕ್ಕಳು ಶಿಕ್ಷಣ ಪಡೆಯಲಿ. ಆದರೆ ಕೆಲಸ ಮಾಡುವುದು ಬೇಡ.' ಎಂದು ಸ್ಪಷ್ಟವಾಗಿಯೇ ಹೇಳಿದ್ದಾರೆ. ಕೊಡಗಿನ ಗೌರಮ್ಮ ಅಥವಾ ತ್ರಿವೇಣಿಯವರು ಅ.ನ.ಕೃ., ತ.ರಾ.ಸು. ಮುಂತಾದವರಿಗಿಂತ ಒಳ್ಳೆಯ ಲೇಖಕರೆಂದು ಗುರುತಿಸಲು ಆಗಲೂ ಈಗಲೂ ಸಾಧ್ಯವಾಗಿಲ್ಲ. ಮಾಸ್ತಿಯವರು ಹೆಣ್ಣಿನ ಬಗ್ಗೆ ಹೊಂದಿರುವ ಸಹ–ಅನುಭೂತಿಯ ಆಚೆಗೆ, ಅವರಲ್ಲಿಯೂ ಇದೇ ಲಕ್ಷಣಗಳನ್ನು ಗುರುತಿಸಬಹುದು. ಹೆಂಗಸರಿಗೆ 'ರಕ್ಷಣೆ'ಯ ಅಗತ್ಯವಿದೆಯೆಂದು ಹೇಳುತ್ತಲೇ ಅವರ ಸ್ವಾತಂತ್ರ್ಯವನ್ನು ನಿರಾಕರಿಸುವುದು ಸಹಜವಾಗಿಬಿಡುತ್ತದೆ. ಮಾಸ್ತಿಯವರ ಹಲವು ಕಥೆಗಳನ್ನು ಮೆಚ್ಚಿಕೊಳ್ಳುತ್ತಲೂ ಅವರು ಕನ್ನಡದ ಅತ್ಯುತ್ತಮ ಕಥೆಗಾರರಲ್ಲಿ ಮುಖ್ಯರೆಂದು ಒಪ್ಪಿಕೊಳ್ಳುತ್ತಲೂ ಆ ಕಥೆಗಳಲ್ಲಿ ಬರುವ ಸ್ತ್ರೀಚಿತ್ರಣದ ಕೆಲವು ಲಕ್ಷಣಗಳನ್ನು ಗುರುತಿಸುವುದು ನನ್ನ ಈ ಬರವಣಿಗೆಯ ಉದ್ದೇಶ.

ಪುರುಷ ಪಾತ್ರಗಳ ಉದಾತ್ತತೆ ಹಾಗೂ ಉದಾರತೆಗಳನ್ನು ತೋರಿಸಿಕೊಡಲು ಸ್ತ್ರೀಪಾತ್ರಗಳನ್ನು ಬಳಸಿಕೊಳ್ಳುವುದು ಮಾಸ್ತಿಯವರ ಕೆಲವು ಕಥೆಗಳ ಲಕ್ಷಣ. ಹೆಣ್ಣು 'ತಪ್ಪಿ ನಡೆದಾಗ' ಆ ತಪ್ಪನ್ನು ಸಹಜವೆಂದು ಅರ್ಥ ಮಾಡಿಕೊಂಡು ಅವರನ್ನು 'ಕ್ಷಮಿಸುವ', 'ಸರಿಪಡಿಸುವ' ಗಂಡಸರು ಇಲ್ಲಿ ಮುನ್ನೆಲೆಗೆ ಬರುತ್ತಾರೆ. ಉದಾಹರಣೆಗೆ 'ವೆಂಕಟಿಗನ ಹೆಂಡತಿ' ಕಥೆಯಲ್ಲಿ ವೆಂಕಟಿಗನು ತಪ್ಪು ಮಾಡಿದ ಹೆಂಡತಿಯನ್ನು, ಅವಳು ಪಡೆದ ಮಗುವನ್ನು **ತನ್ನದಾಗಿ** ಒಪ್ಪಿಕೊಳ್ಳುವ ಮೂಲಕ ಇಂತಹ ಉದಾರತೆಯನ್ನು ತೋರಿಸುತ್ತಾನೆ. ಆದರೆ, ಇಡೀ ಕಥೆಯಲ್ಲಿ ಆ ಹೆಂಡತಿಯು ಒಂದೇ ಒಂದು ಮಾತನ್ನು ಆಡುವ ಅವಕಾಶವನ್ನು ಪಡೆಯುವುದಿಲ್ಲ. ಅವಳಿಗೆ ತನ್ನ ತೀರ್ಮಾನಗಳ ಹಿಂದಿನ ಒತ್ತಡಗಳನ್ನು ಹೇಳಿಕೊಳ್ಳುವ ಅವಕಾಶವೇ ಸಿಗುವುದಿಲ್ಲ. 'ಗೌತಮಿ ಹೇಳಿದ ಕಥೆ'ಯಲ್ಲಿ, ಜೀವಮಾನವೆಲ್ಲ ಒಂಟಿಯಾಗಿ ಕಳೆದ ಮಾಲಿನಿ/ಗೌತಮಿ ಕೂಡ ಕುಲಪತಿಗಳ ಮಾತನ್ನೇ ಪರಮಸತ್ಯವೆಂದು ಒಪ್ಪಿಕೊಳ್ಳುವ ಸ್ಥಿತಿಗೆ ಪಳಗಿರುತ್ತಾಳೆ. 'ಆಂಗ್ಲನೌಕಾ ಕ್ಯಾಪ್ಟನ್', 'ಅರ್ವಾಚೀನ ಆಂಗ್ಲ ಶಕುಂತಲೆ' ಮುಂತಾದ ಹಲವು ನಿದರ್ಶನಗಳನ್ನು ಕೊಡಬಹುದು. ಇಂಥ ಕಡೆ ಲೇಖಕರ

> **'ಮಾಸ್ತಿಯವರು ಸಮಾಜದ ಬೇರೆ ಬೇರೆ ವರ್ಗ, ವರ್ಣಗಳ ಹೆಣ್ಣುಮಕ್ಕಳ ನಡಾವಳಿಯಲ್ಲಿ ಬೇರೆ ಬೇರೆಯ ಲಕ್ಷಣಗಳನ್ನು ಗುರುತಿಸುತ್ತಾರೆ ಮತ್ತು ವಿಭಿನ್ನ ಮಾನದಂಡಗಳನ್ನು ಬಳಸುತ್ತಾರೆ ಎಂದು ಕಾಣುತ್ತದೆ. ಜಾತಿಯ ಶ್ರೇಣೀಕರಣದಲ್ಲಿ ಕೆಳಗೆ ಹೋದಂತೆ ನೈತಿಕತೆಯ ನಿಯಮಗಳು ಸಡಿಲವಾಗುವಂತೆ ಭಾಸವಾಗುತ್ತದೆ. ಅವರ ಕಥೆಗಳಲ್ಲಿ ಸಂಪ್ರದಾಯಬದ್ಧವಾದ ನಿಯಮಗಳನ್ನು ಮುರಿಯುವ ಬ್ರಾಹ್ಮಣ ಹೆಣ್ಣುಮಕ್ಕಳು ಇಲ್ಲವೇ ಇಲ್ಲವೆಂದರೂ ನಡೆಯುತ್ತದೆ. ಆ ಸಮುದಾಯದಲ್ಲಿ ಹಿಂಸೆ, ನೋವು, ದುಃಖಗಳ ಅಗ್ನಿದಿವ್ಯ ಇರುವುದಿಲ್ಲ ಎಂದಲ್ಲ. 'ಆಚಾರವಂತ ಅಯ್ಯಂಗಾರ್' ಕಥೆಯಲ್ಲಿಯೂ ಮದುವೆಯಾಗದ 'ಪತಿವ್ರತೆ'ಯೇ ಬರುತ್ತಾಳೆ. ಆದರೆ, ಅನ್ಯ ಧರ್ಮಗಳು ಮತ್ತು ಅನ್ಯ ಜಾತಿಗಳಿಗೆ ಸೇರಿದವರ ಕಥೆಗಳಲ್ಲಿ ಈ ನಿಯಮಗಳು ಇಷ್ಟು ಕಟ್ಟುನಿಟ್ಟಾಗಿ ಇರುವುದಿಲ್ಲವೆಂದೂ ಅಂಥ ವರ್ತನೆಯ ಬಗ್ಗೆ ಹೆಚ್ಚು ಸಹಿಷ್ಣುತೆ ಇರುವುದೆಂದೂ ಈ ಕಥೆಗಳು ಹೇಳುತ್ತವೆ.'**

ತಾತ್ವಿಕತೆಯು ಕಥೆಯ ಕಲಾತ್ಮಕವಾದ ವಿವರಗಳನ್ನೂ ರೂಪಿಸುತ್ತದೆ. ಈ ತಾತ್ವಿಕತೆಯು ಮಾಸ್ತಿಯವರ ವೈಯಕ್ತಿಕ ನೆಲೆಯದು ಮಾತ್ರವಲ್ಲ. ಅದು ಆ ಕಾಲದ ಸಮಾಜದ ಪ್ರತಿಷ್ಠಿತ ಶಕ್ತಿಗಳ ನಿಲುವಿಗೆ ಕನ್ನಡಿ ಹಿಡಿಯುತ್ತದೆ. ಅಂಥ ಶಕ್ತಿಗಳ ಪ್ರತಿನಿಧಿಗಳು ಈಗಲೂ ಇನ್ನಷ್ಟು ಕ್ರೂರವಾಗಿಯೇ ಇರುವುದನ್ನು ನಾವು ಗಮನಿಸಬಹುದು. ಮಾಸ್ತಿಯವರ ಕಥೆಗಳು ತಾವು ನಡೆಯುವ ಕಾಲ-ದೇಶಗಳ ಎಲ್ಲೆಯನ್ನು ಮೀರಿ ಎಲ್ಲ ಕಾಲಕ್ಕೂ ಸಲ್ಲುವ ಸತ್ಯಗಳನ್ನು ಹೇಳುತ್ತವೆ. ಅಷ್ಟೇ ಅಲ್ಲದೆ, ಓದುವವರ ಮನಸ್ಸಿನಲ್ಲಿ ಮಾಲಿನಿ, ಶಕುಂತಲೆ, ಚಿಕ್ಕಮ್ಮ ಮುಂತಾದವರ ಬಗ್ಗೆ ಅನುಕಂಪದ ಒರತೆಗಳು ಚಿಮ್ಮುವುದನ್ನು, ತಾತ್ವಿಕತೆಯನ್ನೂ ಮೀರಿದ ಭಾಷಿಕಕಲೆಯ ಸಾಧನೆಯೆಂದೇ ಹೇಳಬಹುದು.

ಮಾಸ್ತಿಯವರು ಸಮಾಜದ ಬೇರೆ ಬೇರೆ ವರ್ಗ, ವರ್ಣಗಳ ಹೆಣ್ಣುಮಕ್ಕಳ ನಡಾವಳಿಯಲ್ಲಿ ಬೇರೆ ಬೇರೆಯ ಲಕ್ಷಣಗಳನ್ನು ಗುರುತಿಸುತ್ತಾರೆ ಮತ್ತು ವಿಭಿನ್ನ ಮಾನದಂಡಗಳನ್ನು ಬಳಸುತ್ತಾರೆ ಎಂದು ಕಾಣುತ್ತದೆ. ಜಾತಿಯ ಶ್ರೇಣೀಕರಣದಲ್ಲಿ ಕೆಳಗೆ ಹೋದಂತೆ ನೈತಿಕತೆಯ ನಿಯಮಗಳು ಸಡಿಲವಾಗುವಂತೆ ಭಾಸವಾಗುತ್ತದೆ. ಅವರ ಕಥೆಗಳಲ್ಲಿ ಸಂಪ್ರದಾಯಬದ್ಧವಾದ ನಿಯಮಗಳನ್ನು ಮುರಿಯುವ ಬ್ರಾಹ್ಮಣ ಹೆಣ್ಣುಮಕ್ಕಳು ಇಲ್ಲವೇ ಇಲ್ಲವೆಂದರೂ ನಡೆಯುತ್ತದೆ. ಆ ಸಮುದಾಯದಲ್ಲಿ ಹಿಂಸೆ, ನೋವು, ದುಃಖಗಳ ಅಗ್ನಿದಿವ್ಯ ಇರುವುದಿಲ್ಲ ಎಂದಲ್ಲ. 'ಆಚಾರವಂತ ಅಯ್ಯಂಗಾರ್' ಕಥೆಯಲ್ಲಿಯೂ ಮದುವೆಯಾಗದ 'ಪತಿವ್ರತೆ'ಯೇ ಬರುತ್ತಾಳೆ. ಆದರೆ, ಅನ್ಯ ಧರ್ಮಗಳು ಮತ್ತು ಅನ್ಯ ಜಾತಿಗಳಿಗೆ ಸೇರಿದವರ ಕಥೆಗಳಲ್ಲಿ ಈ ನಿಯಮಗಳು ಇಷ್ಟು ಕಟ್ಟುನಿಟ್ಟಾಗಿ ಇರುವುದಿಲ್ಲವೆಂದೂ ಅಂಥ ವರ್ತನೆಯ ಬಗ್ಗೆ ಹೆಚ್ಚು ಸಹಿಷ್ಣುತೆ ಇರುವುದೆಂದೂ ಈ ಕಥೆಗಳು ಹೇಳುತ್ತವೆ. ಈಗಾಗಲೇ ಪ್ರಸ್ತಾಪಿಸಿರುವ ಕಥೆಗಳ ಜೊತೆಗೆ, 'ಜೋಗ್ಯೋರ ಅಂಜಪ್ಪನ ಕೋಳೀ ಕಥೆ', 'ದುರದೃಷ್ಟದ ಹೆಣ್ಣು', 'ಪಕ್ಷಿ ಜಾತಿ' ಮುಂತಾದ ಕಥೆಗಳನ್ನೂ ಹೆಸರಿಸಬಹುದು. 'ವಿಚಿತ್ರಪ್ರೇಮ' ಎಂಬ ಕಥೆಯ ನಾಯಕಿಯಾದ ಚಾಟ್ಲೆಟ್ ಪ್ರಭುವಿಯು ನಾಲ್ವರು ಪುರುಷರನ್ನು ಬೇರೆ ಬೇರೆ ಕಾರಣಗಳಿಗಾಗಿ ಇಷ್ಟಪಟ್ಟು, ಎಲ್ಲರೊಂದಿಗೂ ಮೈತ್ರಿ ಬೆಳೆಸಿ, ಕೊನೆಗೆ ಗಂಡನ ಜೊತೆಯಲ್ಲಿಯೂ ಪ್ರೀತಿಯಿಂದಲೇ ಇರುವುದನ್ನು ಬಹಳ ತಿಳಿವಳಿಕೆಯಿಂದ ಚಿತ್ರಿಸಲು ಮಾಸ್ತಿಯವರಿಗೆ ಸಾಧ್ಯವಾಗಿದೆ. ಕನ್ನಡದಲ್ಲಿ ಹೀಗೆ ನೋಡಬಲ್ಲ ಇನ್ನೊಬ್ಬ ಲೇಖಕನನ್ನು ಹೆಸರಿಸುವುದು ಕಷ್ಟ. 'ನಡಾವಳಿಗಳ ಬಗ್ಗೆ ವಿಭಿನ್ನ ಸಮುದಾಯಗಳು ತಳೆದಿವೆಯೆನ್ನಲಾದ ವಿಭಿನ್ನ ಧೋರಣೆಗಳಲ್ಲಿ' ಯಾವುದು ಹೆಚ್ಚು 'ಆರೋಗ್ಯಕರ'ವೆನ್ನುವುದರ ಬಗ್ಗೆ ನಮ್ಮ ಕಾಲದ ಓದುಗರು ತಳೆಯುವ ನಿಲುವುಗಳು, ಮಾಸ್ತಿ ಕಥೆಗಳ ನಿಲುವು ಮತ್ತು ಸ್ವತಃ ಮಾಸ್ತಿಯವರ ನಿಲುವು ಒಂದೇ ಆಗಿರುವುದಿಲ್ಲ. ಸ್ವತಃ ಕುವೆಂಪು ಅವರು ಗುತ್ತಿ-ತಿಮ್ಮಿ, ಐತ-ಪೀಂಚಲು ಮತ್ತು ಚಿನ್ನಮ್ಮ-ಮುಕುಂದಯ್ಯರು ಮದುವೆಗೆ ಮುಂಚೆ ಇಟ್ಟುಕೊಂಡ ಸಂಬಂಧಗಳನ್ನು ವಿವರಿಸುವಾಗಲೂ ಈ ಬಗೆಯದೇ ನಿಲುವನ್ನು ತಳೆಯುತ್ತಾರೆ. ಕೊನೆಗೂ 'ನೈತಿಕತೆಯು' ಮೇಲುವರ್ಗಗಳ ಸ್ವತ್ತೇನೋ ಎನ್ನುವಂತೆ ಬರೆಯುತ್ತಲೇ ಅದರಿಂದಾಗುವ ಹಿಂಸೆಯನ್ನೂ ನಿರೂಪಿಸುವುದು ಇಂತಹ ಲೇಖಕರಿಗೆ ಸಾಧ್ಯವಾಗುತ್ತದೆ.

ಮಾಸ್ತಿಯವರು ತಮ್ಮ ನಿರೂಪಕರ ಒಳಗೆ ಇದ್ದಾಗಲೂ ಅವರಿಗೆ ವಿಶಿಷ್ಟವಾದ ವ್ಯಕ್ತಿತ್ವವನ್ನು ಕೊಡುತ್ತಾರೆ. ಪಾತ್ರಗಳು, ಅವು ಬದುಕುತ್ತಿರುವ ಸಮಾಜ, ನಿರೂಪಕ ಮತ್ತು ಕಥೆಗಾರನ ನಡುವೆ ಹುಟ್ಟಿಕೊಳ್ಳುವ ಸಂಕೀರ್ಣವಾದ ಸಂಬಂಧಗಳ ಮೂಲಕವೇ ಈ ಕಥೆಗಳಿಗೆ ಬಹುಮುಖತೆ ಮೂಡುತ್ತದೆ. ಹೀಗೆ ಕಲಾತ್ಮಕವಾಗಿರುವುದರಿಂದಲೇ ಈ ಕಥೆಗಳು ಸಂವೇದನಶೀಲರಾದ ಓದುಗರಲ್ಲಿ ಪಡೆಯುವ 'ಮರು ಹುಟ್ಟು'ಗಳು ಅವಕ್ಕೆ ಹೊಸ ಆಯಾಮವನ್ನು ಕೊಟ್ಟು ಅವಕ್ಕೆ ಶಾಶ್ವತವಾದ ಜೀವಂತಿಕೆಯನ್ನು ಕೊಡುತ್ತವೆ. ಬಹಳ ಕ್ರೂಡ್ ಆಗಿ ಸ್ತ್ರೀಪರವಾದ, ಹೆಣ್ಣಿನ ಪರವಾಗಿ ವಕೀಲಿ ಮಾಡುವ ಕೆಟ್ಟ ಕಥೆಗಳಿಗೆ ಈ ಗುಣ ಇರುವುದಿಲ್ಲ. ಅಧಿಕೃತವಾದ ಅನುಭವಕ್ಕಿಂತ, ಖಚಿತವಾದ ಸ್ತ್ರೀಪರ ನಿಲುವುಗಳಿಗಿಂತ ಭಿನ್ನವಾದ ಬೇರೆ ಯಾವುದೋ ಶಕ್ತಿ ದಿಟವಾದ ಸಾಹಿತ್ಯಕ ಸೃಜನಶೀಲತೆಗೆ ಇರುತ್ತದೆ. ಅದು ಭಾಷಿಕವಾದರೂ, ಆಕೃತಿವಿಶಿಷ್ಟವಾದರೂ ಕೇವಲ 'ಈಸ್ಥೆಟಿಕ್' ಅಲ್ಲ. ಜಗತ್ತಿನ ಹಿರಿಯ ಲೇಖಕರನ್ನು, ಅವರ ಧಾರ್ಮಿಕ/ವೈಚಾರಿಕ ನಿಲುವುಗಳಾಚೆಗೂ ಎಲ್ಲ ಕಾಲಕ್ಕೂ 'ರೆಲೆವೆಂಟ್' ಆಗಿ ಮಾಡುವುದು ಈ ಗುಣವೇ. ಈ ಮಾತಿಗೆ ಶೇಕ್ಸ್‌ಪಿಯರ್ ಅತ್ಯುತ್ತಮ ಉದಾಹರಣೆ. ಮಾಸ್ತಿಯವರ ಕಥೆಗಳ ವೈಚಾರಿಕತೆಯನ್ನು ಕಟುವಾಗಿ ವಿಶ್ಲೇಷಣೆ ಮಾಡುವಾಗಲೂ ಈ ಸಂಗತಿಯನ್ನು ಮರೆಯಬಾರದು. ಸಣ್ಣ ಕಥೆಯ ಮಾಧ್ಯಮವು ಮಾಸ್ತಿಯವರಿಗೆ ಒಲಿದ ಹಾಗೆ, ಕುವೆಂಪು, ಕಾರಂತ ಮತ್ತು ಭೈರಪ್ಪನವರಿಗೆ ದಕ್ಕಲಿಲ್ಲವೆನ್ನುವುದನ್ನು ಇಲ್ಲಿ ಸುಮ್ಮನೆ ನೆನಪು ಮಾಡಿಕೊಳ್ಳಬಹುದು. ಇದು ಯಾಕೆ ಹೀಗಾಯಿತು ಎಂಬ ಪ್ರಶ್ನೆಗೆ ಉತ್ತರ ಸದ್ಯಕ್ಕಂತೂ ನಿಗೂಢವಾಗಿಯೇ ಇದೆ. ಅದು ಆಕೃತಿಮೀಮಾಂಸೆಗೆ ಸಂಬಂಧಿಸಿದ ಪ್ರಶ್ನೆ.

ಗಂಡು ಹೆಣ್ಣಿನ ಸಂಬಂಧದ ಆಚೆಗೆ ಹೆಣ್ಣನ್ನು ಚಿತ್ರಿಸುವಾಗ ಮಾಸ್ತಿಯವರಿಗೆ ಬಿಡುಗಡೆ ಸಿಗುತ್ತದೆ. ಯಾಕೆಂದರೆ, ತಾಯಿ, ತಂಗಿ, ಅತ್ತೆ, ರಾಣಿ ಮುಂತಾದ ಪಾತ್ರಗಳ ನಡಾವಳಿಯನ್ನು ಬೇರೆಯದೇ ನೆಲೆಯಲ್ಲಿ ನೋಡಲು ಸಾಧ್ಯ. ಅಂಥ ಕಡೆ ಮಾಸ್ತಿಯವರು ಹೆಣ್ಣಿನ ಒಟ್ಟುಗೂಡಿಸುವ, ಪೋಷಿಸುವ, ತ್ಯಾಗ ಮಾಡುವ ಗುಣಗಳನ್ನು ಗುರುತಿಸುತ್ತಾರೆ, ಮೆಚ್ಚಿಕೊಳ್ಳುತ್ತಾರೆ. ಪ್ರಕೃತಿ ಮತ್ತು ಪುರುಷ ಇಬ್ಬರೂ ಸೇರಿ ಲೋಕವನ್ನು ಪೊರೆಯಬೇಕೆನ್ನುವ ತಾತ್ವಿಕ ನಿಲುವಿಗೆ ಅನುಗುಣವಾಗಿ, ಅವರಿಬ್ಬರಲ್ಲೂ ಇರುವ ವಿಶಿಷ್ಟ ವಿವೇಕಗಳನ್ನು ಕಂಡುಕೊಳ್ಳಬಹುದು. ಬೇರೆ ಕೆಲವು ಲೇಖಕರು ಮಾಡುವ ಹಾಗೆ ಒಳ್ಳೆಯದೆಲ್ಲವನ್ನೂ ಹೆಣ್ಣಿಗೆ ಆರೋಪಿಸಿ, ಗಂಡನ್ನು ಕ್ರೌರ್ಯ, ಆಕ್ರಮಣಶೀಲತೆ ಮತ್ತು ಸ್ವಾರ್ಥಗಳ ಆಕರದ ಹಾಗೆ ನೋಡುವುದನ್ನು ಮಾಸ್ತಿಯವರ ಕಥೆಗಳು ಇಷ್ಟ ಪಡುವುದಿಲ್ಲ. ಧಾರ್ಮಿಕ ನಾಯಕರು ಮಾತ್ರವಲ್ಲ, ಜನ ಸಾಮಾನ್ಯರಲ್ಲೂ ಮಾಸ್ತಿಯವರು ಅಂತಹ ವಿವೇಕ ಮತ್ತು ಆರ್ದ್ರತೆಗಳನ್ನು ಗುರುತಿಸುತ್ತಾರೆ. ಮೊಸರಿನ ಮಂಗಮ್ಮನ ಸೊಸೆ, ಉಗ್ರಪ್ಪನ ಹೆಂಡತಿ, ಗೌತಮಿಯಾಗಿರುವ ಮಾಲಿನಿ, 'ಬೀದಿಯಲ್ಲಿ ಹೋಗುವ ನಾರಿ', 'ಚಟ್ಟೇಕಾರ ತಾಯಿ'ಯರ ಹಾಗೆಯೇ ಬೈಚೇಗೌಡ, ವಿಶಾಲಾಕ್ಷ ಪಂಡಿತ, ಉಗ್ರಪ್ಪ, ಸಾರಿಪುತ್ರರು ಕೂಡಾ ವಿವೇಕ ಮತ್ತು ಯುಕ್ತಾಯುಕ್ತ ವಿವೇಚನೆಗಳ ಆಕರಗಳು. ಮಾಸ್ತಿಯವರು ಬಹಳವಾಗಿ ಇಷ್ಟಪಡುವ ಸಾಮುದಾಯಿಕ ವಿವೇಕವನ್ನು ಅವರು ಸೃಷ್ಟಿಸುವ ಗಂಡು, ಹೆಣ್ಣು ಇಬ್ಬರಲ್ಲಿಯೂ ಕಾಣಬಹುದು. ಆದರೆ ಸ್ತ್ರೀ ಪುರುಷರು ತೋರಿಸುವ ವಿವೇಕಗಳ ನಡುವೆ ಪರಸ್ಪರ ವಿರೋಧ ಇರುವುದು ಬಹಳ ಕಡಿಮೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಮಾಸ್ತಿಯವರು ಸೃಷ್ಟಿಸುವ ಹಲವು ಪುರುಷರಲ್ಲಿ ಹೆಣ್ಣುಮಕ್ಕಳು ಮನೆ ಮಾಡಿರುತ್ತಾರೆ. ಹಾಗೆಯೇ ಅವರು ಕಟ್ಟುವ ಹೆಣ್ಣು ಪಾತ್ರಗಳಲ್ಲಿ ಗಂಡಸರೂ ಇರುತ್ತಾರೆ. ಈ ಸಮತೋಲನ ಬೇರೆ ಲೇಖಕರಲ್ಲಿ ಅಪರೂಪ. ಕುವೆಂಪು ಅವರು ಕಂಡರಿಸಿರುವ ಐತ ಮತ್ತು ಪೀಂಚಲು ಇಂತಹ ಅಪರೂಪದ ಜೋಡಿ. ಆದರೂ ನೂರಕ್ಕೆ ನೂರರಷ್ಟು ಕೆಟ್ಟವರಾದ ಹೆಣ್ಣು ಪಾತ್ರಗಳನ್ನು ಮಾಸ್ತಿಯವರು ಚಿತ್ರಿಸಿಲ್ಲವೆಂದೇ ಹೇಳಬೇಕು.

ಮಾಸ್ತಿಯವರ ಕಥೆಗಳ ಆಕೃತಿ, ಭಾಷಿಕ ಶೈಲಿ, ಅವರು ಬಳಸುವ ಪ್ರತಿಮೆ ರೂಪಕಗಳ ಅಧ್ಯಯನ ನಡೆದಿರುವುದು ಬಹಳ ಕಡಿಮೆ. ಹೆಣ್ಣಿನ ಆಲೋಚನೆ, ಮಾತು, ಆಂಗಿಕಗಳು ಮತ್ತು ಬರವಣಿಗೆಗೆ ಅವುಗಳದೇ ಆದ ಲಿಂಗನಿರ್ದಿಷ್ಟ ಗುಣವಿರುತ್ತದೆಯೇ ಎಂಬ ಪ್ರಮೇಯವನ್ನು ಕುರಿತು ನಾವು ಇನ್ನಷ್ಟು ಯೋಚಿಸಬೇಕಾಗಿದೆ. ಅಷ್ಟೇ ಅಲ್ಲ, ಸೃಜನಶೀಲ ಲೇಖಕರ ಬರವಣಿಗೆಯು ಈ ಗುಣಗಳನ್ನು ಯಾವ ಪ್ರಮಾಣದಲ್ಲಿ ಹೇಗೆ ಒಳಗೊಳ್ಳುತ್ತದೆ ಎನ್ನುವುದು ಕೂಡ ಸಂಶೋಧನೆ ಮಾಡಬೇಕಾದ ಪ್ರಶ್ನೆಯೇ. ಈ ದೃಷ್ಟಿಯಿಂದ ನೋಡಿದಾಗ ಮಾಸ್ತಿಯವರ ಕಥೆಗಳಲ್ಲಿ ಇದೆಲ್ಲವನ್ನೂ ಒಳಗೊಳ್ಳುವ ವೈವಿಧ್ಯವು ಕಾಣಿಸುತ್ತದೆ. ಉದಾಹರಣೆಗೆ ಕಾರಂತರ ಗದ್ಯಶೈಲಿಯೊಂದಿಗೆ ಮಾಸ್ತಿಯವರ ಒಂದೇ ಕಥೆಯೊಳಗೆ ಬರುವ ಶೈಲಿಗಳನ್ನು ಹೋಲಿಸಿ ನೋಡಬಹುದು. 'ಆಚಾರ್ಯರ ಪತ್ನಿ', 'ಹೇಮಕೂಟದಿಂದ ಬಂದ ಮೇಲೆ', 'ಮಸುಮತ್ತಿ' ಮುಂತಾದ ಕಥೆಗಳನ್ನು ಹೆಸರಿಸಬಹುದು. 'ಸೋರಲೀ ಪ್ರಸಂಗ'ದ ನಿರೂಪಕನ ಶೈಲಿಗೂ 'ಗೌತಮಿ ಹೇಳಿದ ಕಥೆ'ಯ ಗೌತಮಿಯ ಶೈಲಿಗೂ ಬಹಳ ಅಂತರವಿದೆ. ಮಾಸ್ತಿಯವರ ಅನುದಿನದ ಮಾತಿನಲ್ಲಿಯೂ ಭಾಷಣಗಳಲ್ಲಿಯೂ ಈ ಗುಣವನ್ನು ಒಂದಿಷ್ಟು ಗುರುತಿಸಬಹುದಿತ್ತು. ಭಾವುಕತೆ, ಭಾವನಾತ್ಮಕತೆ, ಮಾರ್ದವ, ಹಟಮಾರಿತನ, ಜಾಣತನ ಮುಂತಾದ ಸಂಗತಿಗಳಿಗೆ ಅನುಗುಣವಾದ ಶೈಲಿಯನ್ನು ಕಂಡುಕೊಳ್ಳಲು ಅವರಿಗೆ ಸಾಧ್ಯವಾಗಿದ್ದು ಈ ಬಗೆಯ ಒಳಗೊಳ್ಳುವ ಶಕ್ತಿಯಿಂದಲೇ. ಪಾತ್ರಗಳು ಎಷ್ಟೇ ಭಾವಪರವಶರಾದರೂ ಕಥೆಗಾರನು ಭಾವವಶನಾಗದೆ ಅಪಾರವಾದ ಸಂಯಮವನ್ನು ಕಾಪಾಡಿಕೊಳ್ಳುವುದಕ್ಕೆ ಮಾಸ್ತಿಯವರ ಶೈಲಿಯು ಅತ್ಯುತ್ತಮ ನಿದರ್ಶನ. ಅವರ ಶೈಲಿಗೆ ಆ ಬಗೆಯ 'ಒಲಿಸುವ', 'ಒಪ್ಪಿಸುವ' ಗುಣ ಇದೆ. ಇಂತಹ ಸಂಗತಿಗಳನ್ನು ಇನ್ನಷ್ಟು ವಿವರವಾಗಿ ನೋಡಿದಾಗ ಮಾಸ್ತಿಯವರ ಬರವಣಿಗೆಯಲ್ಲಿ ಹೆಣ್ತನ ಮತ್ತು ಗಂಡುತನಗಳು ಆಕೃತಿಯ ನೆಲೆಯಲ್ಲಿಯೇ ಕಲೆತಿರುವ ಬಗೆಯನ್ನು ಗುರುತಿಸಬಹುದು.

ಕೊನೆಗೂ ಲೇಖಕನಿಗೆ ಲೋಕವು ಆಕರವೇ ಹೊರತು ಮಾದರಿಯಲ್ಲ. ಅಂತೆಯೇ ಸಾಹಿತ್ಯವೂ ಅದರ ಓದುಗರಿಗೆ ಒಂದು 'ಒಳನೋಟ'ವಾಗಿ ಭಾಸವಾಗುವುದೇ ಹೊರತು ಅನುಕರಣೀಯ ಮಾದರಿಯೆಂದಲ್ಲ. ಲೇಖಕನು ಲೋಕವನ್ನು ನೋಡುವುದು ತಾನು ಏನಾಗಿರುವನೋ, ಏನಾಗುತ್ತಿರುವನೋ ಅದರ ಚೌಕಟ್ಟಿನಲ್ಲಿಯೇ ಹೊರತು, ಅದರ 'ಆಬ್‌ಸಲ್ಯೂಟ್' ಆದ ಸ್ಥಿತಿಯಲ್ಲಿ ಅಲ್ಲ. ಅವನು ಆಗಿರುವುದಕ್ಕೆ, ಆಗುವುದಕ್ಕೆ ಒಟ್ಟು ಸಾಮಾಜಿಕ ಸಂದರ್ಭವೂ ಕಾರಣವಾಗಿರುತ್ತದೆ. ಬೇರೆ ಲೇಖಕರ ಹಾಗೆಯೇ ಮಾಸ್ತಿಯವರು ಕಂಡ 'ಹೆಣ್ಣು' ಮತ್ತು ಅವಳ 'ಲೋಕ'ವೂ ಅವರು ಕಂಡುದೇ ವಿನಾ ಹೆಣ್ಣುಜೀವದ ಚಲನಶೀಲತೆಗೆ ಹಿಡಿದ 'ಮಾಯಣ್ಣನ ಕನ್ನಡಿ'ಯಲ್ಲ. ಆದ್ದರಿಂದಲೇ ಅವರು ಇಷ್ಟು ಒಳ್ಳೆಯ ಕಥೆಗಳನ್ನು ಬರೆದ ನಂತರವೂ ಹೆಣ್ಣುಜೀವದ, ಅಷ್ಟೇಕೆ ಎಲ್ಲ ಜೀವಗಳ ತವಕ-ತಲ್ಲಣಗಳನ್ನು ನುಡಿಬಿಂಬಗಳಲ್ಲಿ ಕಟ್ಟಿಕೊಡುವ ಸಾಧ್ಯತೆಗಳು ಅನಂತವಾಗಿವೆ. ನನ್ನ ಈ ಬರವಣಿಗೆಯೂ ಹಾಗೆಯೇ ಅಪೂರ್ಣ....



(ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಲೇಖಕರು ಕನ್ನಡದ ಹಿರಿಯ ಸಾಹಿತ್ಯ-ಸಂಸ್ಕೃತಿ ಚಿಂತಕರೂ, ಅನುವಾದಕರೂ ಆಗಿದ್ದಾರೆ)


ನ್ಯಾ. ಎಂ. ರಾಮಾಜೋಯಿಸ್ ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತನ್ನ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.-ಸಂ.

ಪ್ರವಾಸ–ಪರಿಸರ–ಸಾಹಿತ್ಯ–ಸಂಗೀತ ಇತ್ಯಾದಿ: ಕಾಳಿ ಕಣಿವೆಯಲ್ಲಿ ನಾಲ್ಕು ದಿನಗಳು

ಪ್ರತಿ ವರ್ಷ ಫೆಬ್ರುವರಿಯಲ್ಲಿ ನಾನು ತಿರುವಣ್ಣಾಮಲೈನ ರಮಣಾಶ್ರಮಕ್ಕೆ ಒಂದು ನಾಲ್ಕು ದಿನ ಪ್ರವಾಸ ಹೋಗುವುದು ರೂಢಿ. ಆದರೆ ಕೋವಿಡ್ ಕಾರಣ ಈಗ ಆಶ್ರಮ ಮುಚ್ಚಿರುವುದರಿಂದ ಈ ಪ್ರವಾಸ ಉತ್ತರ ಕನ್ನಡ ಜಿಲ್ಲೆಯತ್ತ ಎಂದು ತೀರ್ಮಾನಿಸಿದೆ. ಅದಕ್ಕೆ ಮುಖ್ಯ ಕಾರಣಗಳು ಎರಡು. ಅಲ್ಲಿನ ಕೈಗಾದಲ್ಲಿರುವ ಗೆಳೆಯ ಮಹಾಂತೇಶರ (ದಸಂಸದ ಗೆಳೆಯ ಭದ್ರಾವತಿಯ ದಿ. ಗಿರಿಯಪ್ಪನವರ ಮಗ ಮೋಹನದಾಸ್‌ರೂ ಅಲ್ಲಿಯೇ ಇರುವರು) ಒಂದು ವರ್ಷದ ಹಳೆಯ ಕರೆ ಮತ್ತು ಆ ಜಿಲ್ಲೆಗೆ ಪದೇ ಪದೇ ಭೇಟಿ ನೀಡುವಂತೆ ನನ್ನನ್ನು ಪ್ರೇರೇಪಿಸುವ ಅದರ ಸಮೃದ್ಧ ವನಸಿರಿ, ಇನ್ನೂ ಮುಖ್ಯವಾಗಿ ಆ ವನಸಿರಿಯ ಮಧ್ಯೆ ಹರಿವ ಕಪ್ಪು ಸುಂದರಿ ಕಾಳಿ ನದಿಯ ರುದ್ರ ರಮಣ ಕಣಿವೆಗಳು. ಹಾಗಾಗಿ'ದಿಯ ತಟದಲ್ಲೇ ಇರುವ ಕೈಗಾ ನನ್ನನ್ನು ಸೆಳೆಯಿತು. ಅಲ್ಲಿನ ಅಣುವಿದ್ಯುದಾಗಾರದ ಬಗ್ಗೆ ನನ್ನದೇ ಹಳೆಯ ಆತಂಕಗಳಿದ್ದರೂ.

ನಾನು ಮತ್ತು ನನ್ನ ಪತ್ನಿ ಸವಿತಾ ಹಾಗೂ ಗೆಳೆಯರಾದ ಶೇಖರ್ ಗೌಳೇರ್ ದಂಪತಿಯೊಂದಿಗೆ ನಾನು ಕೈಗಾದತ್ತ ಹೊರಟೆವು. ಶಿರ್ಸಿಯವರೆಗೆ ತೆಳುವಾಗಿ ಇರುವ ಕಾಡು ಶಿರ್ಸಿ ದಾಟಿದ ಮೇಲೆ ದಟ್ಟವಾಗುತ್ತಾ ಈ ಕಾಲದಲ್ಲೂ ಇಂತಹ ಕಾಡು ಉಳಿದಿದೆಯಲ್ಲ ಎಂಬ ಆಶ್ಚರ್ಯವನ್ನುಂಟು ಮಾಡುತ್ತದೆ. ಯಲ್ಲಾಪುರದಲ್ಲಿ ಊಟ ಮಾಡಿ ಮುಂದೆ ನಮ್ಮ ದಿಕ್ಕನ್ನು ಕೊಂಚ ಪೂರ್ವದ ಕಡೆ ತಿರುಗಿಸಿ ಹೊರಟರೆ ಸಿಗುವುದೇ ವಜ್ರಳ್ಳಿ ಮತ್ತು ಬಾರೆ ಕಾಡು. ಈ ಕಾಡಿನ ಮಧ್ಯೆ ಅದರ ಸಸ್ಯ ವೈವಿಧ್ಯ ಮತ್ತು ದಟ್ಟಣೆಯನ್ನು ಕಂಡು ಬೆರಗಾಗುತ್ತಾ ಪ್ರಯಾಣ ಮಾಡುವುದೇ ಒಂದು ವಿಶಿಷ್ಟ ಅನುಭವ.

ಕಾಡಿನ ಮಧ್ಯದ ಶಾಲೆಯಲ್ಲಿ ಕೊಬ್ಬರಿ ಮಿಠಾಯಿ ಸವಿ!



ಅನುಭವದ ಈ ವಿಶಿಷ್ಟತೆಗೆ ಇನ್ನೊಂದು ವಿಶಿಷ್ಟತೆ ಸೇರಿಸಿದವರು ಮಹಾಂತೇಶರು. ಅವರು ನಮ್ಮ ದೀರ್ಘ ಪ್ರಯಾಣದ ದಣಿವಿಗೆ ಒಂದು ತಡೆಯಾಗಿಯೋ ಏನೋ ವಜ್ರಳ್ಳಿಯಲ್ಲಿ ಒಂದು ಶಾಲೆಗೆ ಭೇಟಿ ನಿಯೋಜಿಸಿದ್ದರು. ಇದಕ್ಕೆ ಆ ಶಾಲೆಯ ಸಿಬ್ಬಂದಿಯ, ನಿರ್ದಿಷ್ಟವಾಗಿ ಆ ಊರು ಮತ್ತು ಶಾಲೆಯ ಗ್ರಂಥ ಪಾಲಕರಾಗಿದ್ದ ಡಿ.ಟಿ.ಭಟ್ ಅವರ ಸಾಹಿತ್ಯಾಭಿಮಾನವೇ ಕಾರಣವಾಗಿತ್ತು. ಅವರು ನನ್ನ, ವಿಶೇಷವಾಗಿ ನನ್ನ ಪತ್ನಿಯ ಸಾಹಿತ್ಯಾಭಿಮಾನಿಯಾಗಿದ್ದರು. ಅವರು ದಾರಿಯಲ್ಲಿ ನಿಂತು ನಮಗಾಗಿ ಕಾಯುತ್ತಿದ್ದರು. ನಮ್ಮನ್ನು ಆ ಕಿರುರಸ್ತೆಯಿಂದ ಒಡಗೊಂಡ ಕಿರುದಾರಿಯೊಂದರಲ್ಲಿ ಕಾಡಿನ ಒಡಲೊಳಕ್ಕೇ ನಮ್ಮನ್ನು ಕರೆದೊಯ್ದರು. ನಮ್ಮ ಆಶ್ಚರ್ಯಕ್ಕೆ ಅಲ್ಲೊಂದು ಬಯಲಿತ್ತು ಮತ್ತು ಬಯಲಿನಲ್ಲಿ ಒಂದು ಅಚ್ಚುಕಟ್ಟಾದ ಪ್ರೌಢಶಾಲೆಯ ಕಟ್ಟಡವಿತ್ತು. ಅದು ಆ ಊರಿನ ಗ್ರಾಮ ಪಂಚಾಯತಿ ಸುತ್ತಮುತ್ತಲ ಹಳ್ಳಿ ಮಕ್ಕಳಿಗಾಗಿ ನಡೆಸುತ್ತಿದ್ದ ಶಾಲೆ! ಅದಕ್ಕೆ ಹೆಂಚಿನ ಮಾಡಿನ ಸಾಲಾದ ತರಗತಿ ಕೊಠಡಿ ಇತ್ಯಾದಿಗಳಲ್ಲದೆ ಅವಕ್ಕೆ ಅಂಟಿಕೊಂಡಂತೆ ಒಂದು ವಿಶಾಲ ಸಭಾಂಗಣ ಕೂಡ. ತರಗತಿ ಕೊಠಡಿಗಳ ಕಡೆ ಹೋಗಿ ಬಂದ ನನ್ನ ಪತ್ನಿ ಗ್ರಂಥಭಂಡಾರದಲ್ಲಿದ್ದ ಸಾವಿರಾರು ಪುಸ್ತಕಗಳ ಪೈಕಿ ತನ್ನದೂ ಎರಡು ಇದ್ದುದನ್ನು ಹಿಗ್ಗಿನಿಂದ ನನಗೆ ತಿಳಿಸಿದಳು! ಕಾಡು–ನಾಡುಗಳು ಒಂದಾಗುವ ಬಗೆ ಇದು.

ಸಭಾಂಗಣದಲ್ಲಿ ನೂರರ ಆಸುಪಾಸಿನ ಸಂಖ್ಯೆಯಲ್ಲಿದ್ದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮತ್ತು ಆರೇಳು ಜನ ಅಧ್ಯಾಪಕರಿದ್ದ ಸಭೆಯನ್ನುದ್ದೇಶಿಸಿ ನಾವೆಲ್ಲ ಮಾತಾಡಿದೆವು. ನಾನು ವಿದ್ಯಾರ್ಥಿಗಳಿಗೆ ಪಠ್ಯೇತರ ಪುಸ್ತಕಗಳ ಅಭ್ಯಾಸದ ಮಹತ್ವದ ಬಗ್ಗೆ ಮಾತಾಡಿದರೆ, ಸವಿತಾ ತನ್ನ ಎರಡು ಪದ್ಯಗಳನ್ನು ಓದಿದಳು. ಗೌಳೇರ್ ಪರಿಸರ ವಿಜ್ಞಾನದ ಎರಡು ಪಾಠಗಳನ್ನೇ ಮಾಡಿದರು. ಅವರ ಪತ್ನಿ ಯಶೋಧಾ ಒಂದು ಸುಮಧುರ ಗೀತೆ ಹಾಡಿದರು. ನಾವು ಶಾಲೆಯ ಗ್ರಂಥಾಲಯಕ್ಕೆ ನನ್ನ 'ಗಾಂಧಿ ಕಥನ' ಕೃತಿಯನ್ನು ಕೊಡುಗೆಯಾಗಿ ನೀಡಿದೆ. ಅಂದು ಶಾಲೆಯ ಮುಖ್ಯೋಪಾಧ್ಯಾಯರ ಹುಟ್ಟುಹಬ್ಬವಂತೆ. ನಮಗೆ ಸಿಹಿಯಾದ ಕೊಬ್ಬರಿ ಮಿಠಾಯಿ ದೊರಕಿತು. ಆ ಪರಿಸರದಲ್ಲಿ ಅದಕ್ಕೆ ವಿಶೇಷ ಸವಿಯೊದಗಿತ್ತು.

ಆ ಹೊತ್ತಿಗೆ ಅಲ್ಲಿಗೆ ಬಂದು ಸೇರಿಕೊಂಡಿದ್ದ ಮಹಾಂತೇಶರೊಂದಿಗೆ 'ಬಾರೆ' ಎಂಬ ಊರಿನ ದಟ್ಟ ಕಾಡಿನ ಮೂಲಕ ಕೈಗಾದತ್ತ ನಮ್ಮ ಪ್ರಯಾಣ. ಅಲ್ಲಲ್ಲಿ ಹಾಡು ಹಗಲಲ್ಲೇ ಕಾಡಿನ ದಟ್ಟಣೆಯಿಂದಾಗಿ ಕತ್ತಲು ಕವಿದ ಮತ್ತು ಈ ಕಾಲದಲ್ಲೂ ಸಣ್ಣಗೆ ಧುಮುಕುತ್ತಿದ್ದ ಜಲಪಾತಗಳ ಸನಿಹದಲ್ಲೇ ಇದ್ದ ಒಂದು ವಾಹನಕ್ಕೆ ಮಾತ್ರ ಜಾಗವಿದ್ದಂತಹ ಕಿರುದಾರಿಯಲ್ಲಿ ನಮ್ಮ ಈ ಪ್ರಯಾಣ. ಈ ಪ್ರಯಾಣದ ತುದಿಯಲ್ಲಿ ಕಂಡ ಒಂದು ಗದ್ದೆ ಬಯಲಿನ ದಿಗಂತದಲ್ಲಿ ಸೂರ್ಯಾಸ್ತದ ಸೌಂದರ್ಯವನ್ನೂ ಕಂಡ ನಾವು ಹೊತ್ತು ಪೂರ್ಣ ಇಳಿಯುವ ಮುನ್ನ ಕೈಗಾದ ವಿದ್ಯುದಾಗಾರದ ಸುಸಜ್ಜಿತ ಅತಿಥಿ ಗೃಹ ಹೊಕ್ಕಾಗ ಇಡೀ ದಿನದ ಪ್ರಯಾಣದ ದಣಿವು ನಮ್ಮನ್ನು ಆವರಿಸತೊಡಗಿತ್ತು. ಹಾಗೇ ನಿದಿರೆಯೂ. ಊಟದ ಉಪಚಾರ ಮುಗಿಸಿ ಮಲಗಿದಾಗ ನಮ್ಮ ಕೊಠಡಿಯ ಹಿಂದೆಯೇ ಕಣ್ಣಿಗೆ ಕಾಣುವಷ್ಟು ದೂರದಲ್ಲಿ ಕಾಳಿ ಜುಳುಜುಳು ಜೋಗುಳವನ್ನು ಕೇಳಿಸಿಯೂ ಕೇಳಿಸದಂತೆ ಹಾಡುತ್ತಾ ಹರಿಯುತ್ತಿದ್ದಳು.

ಕಾಡಿನ ಕಳ್ಳಬೇಟೆ ತಡೆ ಶಿಬಿರದಲ್ಲಿ ತೇಜಸ್ವಿ ಸಾಹಿತ್ಯ ಚಿಂತನೆ!

ಕೈಗಾದಲ್ಲಿ ನಾವಿದ್ದ ಎರಡು ದಿನವೂ ಮಹಾಂತೇಶ್ ಮತ್ತು ಅವರ ಮಹಾಘಾಟಿ ಹಾಗ್ಗೂ ಚೂಟಿ ಪತ್ನಿ ರಾಜಶ್ರೀ ನಮಗೆ ಊಟ–ತಿಂಡಿಗಳ ಉಪಚಾರವಲ್ಲದೆ ಸನಿಹದ ಕಾಳಿ ಕಣಿವೆಯ ದರ್ಶನದ ವ್ಯವಸ್ಥೆಯನ್ನೂ ಮಾಡಿದ್ದರು. ಮುಖ್ಯವಾಗಿ ಕದ್ರಾ ಮತ್ತು ಕೊಡಸಳ್ಳಿ ಜಲಾಶಯಗಳು ಮತ್ತು ಅವುಗಳನ್ನು ಸುತ್ತುವರೆದಿದ್ದ ಕಾಡಿನ ದರ್ಶನ. ಕಾಳಿ ಮೇಲ್ದಂಡೆಯ ಸೂಪ ಸೇರಿದಂತೆ ಈ ನದಿಗೆ ಅಡ್ಡಲಾಗಿ ಕಟ್ಟಿರು ಮೂರೂ ಜಲಾಶಯಗಳು ಮತ್ತು ಕೈಗಾ ವಿದ್ಯುದಾಗಾರ ರಾಜ್ಯದ ವಿದ್ಯುತ್ ಉತ್ಪಾದನೆಯ ಹೃದಯ ಭಾಗವಿದ್ದಂತೆ. ಇದನ್ನು ಕದ್ರಾ ಆಣೆಕಟ್ಟಿನ ಮೇಲೆ ನಿಂತ ನಮಗೆ ಅಲ್ಲಿನ ಇಂಜಿನಿಯರ್ ಅಶೋಕ್ ಹೂಗಾರ್ ಹೇಳಿದಾಗ ನಾವು ಆಗ ನಿಂತಿದ್ದ ಜಾಗದ ಮಹಿಮೆ ಅರ್ಥವಾಗಿ ರೋಮಾಂಚನಗೊಂಡೆವು.



ಇದರಲ್ಲಿ ವಿಶೇಷವಾದ್ದೆಂದರೆ, ಸೂಳಗೇರಿ ಕಳ್ಳಬೇಟೆ ತಡೆ ಶಿಬಿರದಲ್ಲಿ ಅಲ್ಲಿನ ಅರಣ್ಯ ಸಿಬ್ಬಂದಿಯೊಂದಿಗೆ ನಾವು ಕಳೆದ ಕಾಲ ಮತ್ತು ನಡೆಸಿದ ಸಂವಾದ. ನಮಗೆ ಕಂಡಂತೆ ಕನಿಷ್ಠ ಸೌಲಭ್ಯಗಳ ಒಂದೆರಡು ಚಾವಡಿಗಳ ಹಳೆ ಕಟ್ಟಡಗಳ ಈ ಶಿಬಿರದಲ್ಲಿನ ಫಾರೆಸ್ಟರ್ ಚಂದ್ರಕಾಂತ ನಾಯಕ್ ಅವರು ಹೇಳಿದಂತೆ ಅಲ್ಲಿರುವ ಅರಣ್ಯ ಸಿಬ್ಬಂದಿಗೆಲ್ಲ ತೇಜಸ್ವಿ ಸಾಹಿತ್ಯದ ಸೆಳೆತ. ಅವರು ತೇಜಸ್ವಿಯವರ ಬಗ್ಗೆ ಕುತೂಹಲದ ಹಲವು ಪ್ರಶ್ನೆಗಳನ್ನು ಕೇಳಿದರು. ನಾನು ತೇಜಸ್ವಿಯವರ ನನ್ನ ಒಡನಾಟದ ಮತ್ತು ಅವರ ಸಾಹಿತ್ಯದ ಹಲವು ಸ್ವಾರಸ್ಯಕರ ಪ್ರಸಂಗಳನ್ನು ಅವರೊಂದಿಗೆ ಹಂಚಿಕೊಂಡೆನು. ಅರಣ್ಯ ಸಿಬ್ಬಂದಿ ಕೂಡಾ ತಮ್ಮ ಅರಣ್ಯ ಗಸ್ತಿನಲ್ಲಿ ಗಮನಿಸಿದ ವನ್ಯಮೃಗಗಳ ಸ್ವಭಾವ ಕುರಿತ ಹಲವು ಅನುಭವ ಕಥನಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ಅವರ ಪ್ರಕಾರ ಈ ಕಾಡಿನಲ್ಲಿ ಕಳ್ಳಬೇಟೆ ಮತ್ತು ಸಾಗಣೆ ಇಲ್ಲವೇ ಇಲ್ಲವೆನಿಸುವಷ್ಟು ಕಡಿಮೆ. ಕಾರಣ ಈ ಕಾಡು ನಾಗರಿಕ ಜಗತ್ತಿನಿಂದ ಸಾಕಷ್ಟು ದೂರವಿರುವುದು ಮತ್ತು ಇಲ್ಲಿನ ಜನರ ವನಪ್ರೀತಿ ಮತ್ತು ಪರಿಸರ ಅರಿವು. ಅಲ್ಲಿ ಸ್ವಲ್ಪ ಕಾಲ ಅರಣ್ಯ ಅಧ್ಯಯನಕ್ಕಾಗಿ ಬಂದಿದ್ದ ಶಿರ್ಸಿ ಅರಣ್ಯ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳೂ ಇದರಲ್ಲಿ ಭಾಗವಹಿಸಿದ್ದರು.

ಅಚ್ಚರಿಯಂತೆ ಕಾದಿತ್ತು ಈ ಅರಣ್ಯ ಸಿಬ್ಬಂದಿಯೇ ನಮಗೆಲ್ಲ ತಯಾರಿಸಿದ್ದ ಅನ್ನ–ಸಾರು, ಪಾಯಸ, ಮೊಸರು ಮತ್ತು ಹಪ್ಪಳಗಳ ಸುಗ್ರಾಸ ವನ ಭೋಜನ! ಕಾಡಿನ ಹೊಕ್ಕಳಿನಂತಿದ್ದ ಈ ದುರ್ಗಮ ಜಾಗದಲ್ಲಿ ಈ ಪ್ರೀತಿ–ವಿಶ್ವಾಸ ನಮ್ಮನ್ನು ಆರ್ದ್ರಗೊಳಿಸಿದವು. ನಾನು ಸ್ನೇಹದ ಕಾಣಿಕೆಯಾಗಿ 'ಗಾಂಧಿ ಕಥನ'ದ ಒಂದು ಪ್ರತಿಯನ್ನು ನೀಡಿದೆನಲ್ಲದೆ, ತೇಜಸ್ವಿ ಸಾಹಿತ್ಯ ಕುರಿತ ಅವರ ಕುತೂಹಲವನ್ನು ತಣಿಸುವ ಒಂದು ಪ್ರಯತ್ನವಾಗಿ ನಾವು ಶಿವಮೊಗ್ಗಕ್ಕೆ ವಾಪಸಾದ ನಂತರ ತೇಜಸ್ವಿ ಪರಿಸರ ಸಾಹಿತ್ಯದ ಎಲ್ಲ ಕೃತಿಗಳ ಒಂದು ಸೆಟ್ ಅನ್ನು ಅವರಿಗೆ ಕಳಿಸಿಕೊಟ್ಟೆ.

ಗೋವಾ ಬೀಚ್‌ನಲ್ಲಿ 'ಥಣ್ಣನೆ'ಯ ಸೂರ್ಯಾಸ್ತಮಾನ!

ಈ ಪ್ರವಾಸದ ಇನ್ನೊಂದು ಚೆಂದದ ಕಾರ್ಯಕ್ರಮವೆಂದರೆ, ಕರ್ನಾಟಕದ ಗಡಿ ದಾಟಿದ ಕೂಡಲೇ ಸಿಗುವ ಗೋವಾದ ಒಂದು ಸಣ್ಣ ಸುಂದರ ಬೀಚು. ಹೆಚ್ಚು ದೂರ



ನಡೆಯಲಾರದಂತಹ ನನ್ನಂಥವರು ಕಡಲ ಅಲೆಗಳ ಸಂಭ್ರಮವನ್ನು ಬಹು ಹತ್ತಿರದಲ್ಲೇ ಕೂತು ಆನಂದಿಸುವ ಒಂದು ಕಟ್ಟಿಗೆ ಮಂಟಪದ ಸೌಲಭ್ಯ ಇರುವ ಎರಡು ಗುಡ್ಡಗಳ ನಡುವೆ ಕಡಲನ್ನು ಬಂಧಿಸಿರುವ ತೀರವಿದು. ಈ ಮಂಟಪದಲ್ಲಿ ಥಣ್ಣಗಿನ(ಚಿಲ್ಡ್) ಬಿಯರ್ ಕೂಡ ಲಭ್ಯವಿದ್ದು, ಅದನ್ನು ಪಶ್ಚಿಮದ ಸಂಜೆಯ ತಂಗಾಳಿಗೆ ಮುಖವೊಡ್ಡಿ ಆಸ್ವಾದಿಸುವುದರ ಸುಖವನ್ನು ನಮ್ಮ ತಂಡದಲ್ಲಿದ್ದ ನಾವು ಮುವ್ವರೂ ಗಂಡಸರು ಅನುಭವಿಸಿದೆವು. ಸವಿತಾ ನಮ್ಮ ಬಳಿ ಸ್ವಲ್ಪ ಹೊತ್ತು ಕೂತು ನಮ್ಮ ಸುಖ ನೋಡಿಯಷ್ಟೇ ತೃಪ್ತಿಪಟ್ಟುಕೊಂಡು ಒಳಗೇ ಶಪಿಸಿಕೊಂಡೋ ಅಥವಾ ಹೊಟ್ಟೆ ಉರಿದುಕೊಂಡೋ ಕಡಲ ತೀರದೆಡೆಗೆ ನಡೆದಿದ್ದ ಉಳಿದಿಬ್ಬರು ಹೆಂಗಸರ ಬಳಿ ನಡೆದಳು.

ನಮ್ಮೆಲ್ಲರ ಈ ಕಡಲ ವಿಹಾರ ಸೂರ್ಯಾಸ್ತದವರೆಗೆ ನಡೆದ ಮೇಲೆ ನಮ್ಮ ಪ್ರಯಾಣ ಸದಾಶಿವಗಢದ ಮೂಲಕ ಹತ್ತು-ಹದಿನೈದು ಕಿ.ಮೀ. ದೂರವಿದ್ದ ಕಾರವಾರಕ್ಕೆ, ಊಟಕ್ಕಾಗಿ. ಇಪ್ಪತ್ತೈದು ವರ್ಷಗಳ ಹಿಂದೊಮ್ಮೆ ನೋಡಿದ್ದ ಈ ಊರು ಈಗ ತುಂಬ ಬದಲಾಗಿದೆ. ವಿರಳ ಜನಸಂಚಾರವಿದ್ದಂತೆ ಕಂಡಿದ್ದ ಊರು ಈಗ ಆಧುನಿಕ ನಗರದ ಎಲ್ಲ ಗೌಜು-ಗದ್ದಲದಿಂದ ತುಂಬಿದೆ. ನಾನು ಈಗ ಕಾರವಾರ ಆಕಾಶವಾಣಿ ಕೇಂದ್ರದ ಉಸ್ತುವಾರಿಯಾಗಿರುವ, ಚಿತ್ರದುರ್ಗ ಆಕಾಶವಾಣಿಯಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ರಾಮಡಗಿಯವರಿಗೆ ಕರೆ ಮಾಡಿ ಊಟಕ್ಕೆ ಯಾವ ಹೋಟೆಲ್ ಒಳ್ಳೆಯದೆಂದು ಕೇಳುತ್ತಾ ಅವರನ್ನೂ ಅಲ್ಲಿಗೆ ಆಹ್ವಾನಿಸಿದೆ. ಚಿತ್ರದುರ್ಗ ಆಕಾಶವಾಣಿಯಲ್ಲಿ ಕೃಷಿ ಕಾರ್ಯಕ್ರಮಗಳ ಉಸ್ತುವಾರಿಯಾಗಿ ತಮ್ಮ ಶ್ರದ್ಧಾ-ಪ್ರತಿಭೆಗಳಿಂದ ನನ್ನ ಮೆಚ್ಚುಗೆ-ಪ್ರೀತಿಗಳಿಗೆ ಪಾತ್ರರಾಗಿದ್ದ ಅವರು ಅದೇ ಪ್ರೀತಿ-ವಿಶ್ವಾಸಗಳಿಂದ ಬಂದು ಹಳೆಯ ಆ ದಿನಗಳ ನೆನಪುಗಳನ್ನು ನಮ್ಮೆಲ್ಲರೊಂದಿಗೆ ಹಂಚಿಕೊಂಡರು. ನಾನು ಆಕಾಶವಾಣಿ ಬಿಟ್ಟು ಹದಿನೈದು ವರ್ಷಗಳೇ ಆಗಿ ಅದರ ನೆನಪುಗಳು ಹಿಂದಿನ ಜನ್ಮದ ನೆನಪುಗಳಂತೆ ಕಳೆದೇ ಹೋಗಿದ್ದರೂ, ಆತ್ಮೀಯರ ಸನಿಹ ಅವನ್ನು ಜೀವಂತಗೊಳಿಸಿ ಮನಸ್ಸನ್ನು ಆರ್ದ್ರಗೊಳಿಸುತ್ತವೆ.

ಈ ಮಧ್ಯೆ, ಸ್ವತಃ ಸಾಹಿತಿಯಾದ ಮಹಾಂತೇಶ್ ಅಂದು ಸಂಜೆ ನಾವಿದ್ದ ಅತಿಥಿ ಗೃಹದಲ್ಲೇ ಕೈಗಾ ಅಣುವಿದ್ಯುದಾಗಾರ ಸಿಬ್ಬಂದಿಯ ಸಾಹಿತ್ಯ ಬಳಗದ 'ಪುಟ್ಟ ಸಭೆಯೊಂದನ್ನು ಏರ್ಪಡಿಸಿ ಶಾಲು-ಫಲ ಪುಷ್ಪಗಳೊಂದಿಗೆ ನಮಗೊಂದು ಸನ್ಮಾನ ಏರ್ಪಡಿಸಿದರು. ನಾನು ಸಾಹಿತ್ಯದ ಚತುರ್ಮುಖಿ ಸಣದರ್ಯದ ಬಗ್ಗೆ ಮಾತಾಡಿದೆ. ಸವಿತಾ ತನ್ನೆರಡು ಪದ್ಯ ಓದಿದಳು. ಯಶೋಧಾ ಅವರು ಒಂದು ವಚನ ಹಾಡಿದರು. ನಂತರ ನಡೆದ ಸಂವಾದ ಹೆಚ್ಚಾಗಿ ಲೇಖಕ ಕೆ.ಎಸ್. ಭಗವಾನ್ ಮುಖಕ್ಕೆ ಮಸಿ ಬಳಿದ ಪ್ರಸಂಗದ ಬಗ್ಗೆಯೇ ಇತ್ತು ಗೆಳೆಯ ಗೌಳೇರ್ ನಮ್ಮೆಲ್ಲರ ಪರವಾಗಿ ಈ ಪ್ರಸಂಗವನ್ನು ಬಿರುಸಾಗಿಯೇ ಖಂಡಿಸಿದ ಈ ಸಂವಾದದಲ್ಲಿ ಇಲ್ಲಿ ದಾಖಲಿಸುವಂತಹ ಗಮನಾರ್ಹ ಸಂಗತಿಯೇನೂ ಇರಲಿಲ್ಲವಾದರೂ ಈ ಬಳಗ ತೋರಿದ ಪ್ರೀತಿ ಸ್ಮರಣೀಯವೆನಿಸಿತ್ತು.

ಹಾಸಣಗಿಯಲ್ಲಿ ವಸಂತ ರಾಗ

ನಮ್ಮ ತಂಡದ ವಾಹನ ಸಾರಥಿಯೂ ಆಗಿದ್ದ ಗೆಳೆಯ ಗೌಳೇರ್ ನಮ್ಮ ಪ್ರವಾಸದ ವಾಪಸ್ ಪ್ರಯಾಣ ಬಂದ ದಾರಿಯಲ್ಲೇ ಬೇಡವೆಂದು ಹಲವು ಮಾರ್ಗಗಳ ಬಗ್ಗೆ ಯೋಚಿಸಿದ್ದರಾದರೂ ಕೊನೆಗೆ ಸುಂಕವಿಲ್ಲದ ಬಂದ ದಾರಿಯಲ್ಲೇ ಹೋಗಬೇಕಾಯಿತು. ಏಕೆಂದರೆ, ಈ ಪ್ರವಾಸ ಹೊರಡುವ ಮುನ್ನ ಕವಯತ್ರಿ ಗೀತಾ ವಸಂತ ಅವರಿಗೆ, ಅವರು ಮತ್ತು ಅವರ ಪತಿ ವಸಂತ ಈ ಜಿಲ್ಲೆಯವರಾದ್ದರಿಂದ, ನಮ್ಮ ಈ ಪ್ರವಾಸದ ಬಗ್ಗೆ ಅವರಿಗೆ ತಿಳಿಸಿದ್ದೆ. ಗೀತಾ ಅವರೇನೋ ಆತ್ಮೀಯತೆಯಿಂದ, ಹೋಗುವ ಮಾರ್ಗದಲ್ಲಿ ಸಿಗುವ ಹಾಸಣಗಿಯಲ್ಲಿ ಈಗ ವಸಂತ್ ಇರುವುದಾಗಿಯೂ ಅಲ್ಲಿಗೆ ನಾವು ಭೇಟಿಕೊಟ್ಟು ಹೋಗಲೇಕೆಂದು ಹೇಳಿದ್ದರು. ಆದರೆ ನಾವು ಕೈಗಾವನ್ನು ಧಾವಂತದಲ್ಲಿ ಅದನ್ನು ಪರೆತಿದ್ದೆವು. ಆದರೆ ಈಗ ' ವಾಪಸ್ ಹೊರಡುವ ಸಮಯಕ್ಕೆ ಸರಿಯಾಗಿ ವಸಂತ ಅವರಿಂದ ಕರೆಬಂದು. ಹಾಸಣಗಿಯ ತಮ್ಮ ಮನೆಯಲ್ಲಿ ತಮ್ಮ ತಾಯಿ ಸಿದ್ಧಪಡಿಸುವ ಸರಳ ಊಟವನ್ನು ಮುಗಿಸಿಕೊಂಡೇ' ಪ್ರಯಾಣ ಮುಂದುವರೆಸಬೇಕೆಂದು ಆಗ್ರಹಪೂರ್ವಕ ಆಹ್ವಾನ ನೀಡಿದಾಗ ವಸಂತ್ ಅವರಿಗೆ ತಮ್ಮ ಪತ್ನಿಯ ಅಪ್ಪಣೆಯನ್ನು ಪಾಲಿಸಲು ಒದಗಿರುವ ಈ ಒಂದು ಅವಕಾಶವನ್ನೂ ತಪ್ಪಿಸಬಾರದೆಂಬ ಪರೋಪಕಾರ ದೃಷ್ಟಿಯಿಂದ ಸುಂಕವಿಲ್ಲದ ಬಂದ ದಾರಿಯಲ್ಲೇ ಹೋಗುವ ನನ್ನ ಇಚ್ಛೆಯನ್ನು ಗೌಳೇರ್ ಅವರಿಗೆ ಸಂದರ್ಭಸಹಿತ ವಿವರಿಸಿದೆ. ಅವರು ಮರು ಮಾತಿಲ್ಲದೆ ಒಪ್ಪಿದರು. ವಸಂತ್ ಹೇಳಿದ



ಸರಳ ಊಟದ ಮಾತೇನೂ ನಮ್ಮನ್ನು ನಿರುತ್ಸಾಹಗೊಳಿಸಿರಲಿಲ್ಲ. ಮೂರು ದಿನಗಳ ಕಾಲ ಮಹಾಂತೇಶ್ ದಂಪತಿ ಏರ್ಪಡಿಸಿದ್ದ ಭರ್ಜರಿ ಊಟ ತಿಂಡಿಗಳು ಈ ಸರಳ ಊಟವನ್ನು ನಮ್ಮ ಆಯ್ಕೆಯಲ್ಲ, ಕಡ್ಡಾಯವನ್ನಾಗಿ ಮಾಡಿದ್ದವು. ಶಿವಮೊಗ್ಗದವರೆಗೆ ನಾವ್ಯಾರೂ ಉದರಬಾಧೆ ಇಲ್ಲದೆ ಸುಖವಾಗಿ ಪ್ರಯಾಣಿಬೇಕಿತ್ತಲ್ಲವೆ.

ಹಾಸಣಗಿ ಯಲ್ಲಾಪುರದಿಂದ ಶಿರ್ಸಿಗೆ ಹೋಗುವ ಮಾರ್ಗಮಧ್ಯದಲ್ಲಿ ಸಿಗುವ ಮಂಚಿಕೇರಿ ಪೇಟೆ'ಯಿಂದ ಎಡಕ್ಕೆ ಒಂದು ಕಿ.ಮೀ. ಹೋದರೆ ಸಿಗುವ ಅರಣ್ಯ ಮಧ್ಯದ ಕೆಲವೇ ಮನೆಗಳ ಒಂದು ಪುಟ್ಟ ಹಳ್ಳಿ. ವಸಂತ್ ಮಂಚಿಕೇರಿಗೇ ಬಂದು ನಮ್ಮನ್ನು ಕರೆದುಕೊಂಡು ಹೋದರು. ಇಲ್ಲದಿದ್ದರೆ ಆ ಅರಣ್ಯದಲ್ಲಿ ಅವರ ಮನೆ ಹುಡುಕುವುದು ನಮಗೆ ಕಷ್ಟವೇ ಆಗುತ್ತಿತ್ತು. ಅದು ವಸಂತ್ ಅವರ ತಂದೆಯವರೂ ಆದ ಸುಪ್ರಸಿದ್ಧ ಹಿಂದೂಸ್ತಾನಿ ಸಂಗೀತಗಾರ ಗಣಪತಿಭಟ್ ಹಾಸಣಗಿಯವರ ನಿವಾಸ ಸ್ಥಳವೂ ಹೌದು. ಅವರೀಗ ಹುಬ್ಬಳ್ಳಿಯ 'ಗಂಗೂಬಾಯಿ ಹಾನಗಲ್ ಗುರುಕುಲ'ದಲ್ಲಿ ಓರ್ವ ಗುರುಗಳು. ಹಾಗಾಗಿ ನಾವು ಅವರ ಮನೆಗೆ ಹೋದಾಗ ಅವರು ಇರಲಿಲ್ಲ. ಅಡಿಕೆ-ಮೆಣಸು ತೋಟದ ಮಧ್ಯದ ಆ ಹಳೆ-ಹೊಸಮನೆಗಳ ಜೋಡಿ ಆವಾಸ ಸ್ಥಾನ. ವಸಂತ್ ಮತ್ತು ಅವರ ತಾಯಿ ಈಗ ವಾಸಿಸುತ್ತಿದ್ದ ಒಂದು ವಿಶಾಲ ಮುಖಮಂಟಪವಿದ್ದ ಹಳೆಮನೆಗೆ ನಾವು ಹೋದೆವು. ಮನೆಯ ಮೆಟ್ಟಿಲಲ್ಲೇ ಕೂತಿದ್ದ ವಸಂತರ ತಾಯಿ ನಮ್ಮನ್ನು ಪ್ರೀತಿಯಿಂದ ಸ್ವಾಗತಿಸಿ ಕುಶಲ ವಿಚಾರಿಸಿದರು. ನೀರು ನೀಡಿದರು ಇಂಗ್ಲಿಷ್ ಎಂ.ಎ. ಓದಿ ಪಿ.ಹೆಚ್.ಡಿ ಗೂ ಹೆಸರು ನೋಂದಾಯಿಸಿಕೊಂಡು ಆ ಸಂಬಂಧ ಒಂದಿಷ್ಟು ಕೆಲಸವನ್ನೂ ಮಾಡಿದ್ದ ವಸಂತ್ ಅವರನ್ನು ನಾನು ಐದಾರು ವರ್ಷಗಳ ಹಿಂದೆ ತುಮಕೂರಿನಲ್ಲಿ ನೋಡಿದಾಗ ಕಂಡಿದ್ದಕ್ಕಿಂತ ಕಿರಿಯರಾಗಿ, ದುಂಡು ದುಂಡಗೆ ಕೆಂಪು ಕೆಂಪಾಗಿ ಕಂಡು ಹಳ್ಳಿ ಬದುಕು ಇಂತಹ ಪರಿವರ್ತನೆಯನ್ನೂ ಉಂಟು ಮಾಡುವುದೇ? ಎಂಬ ಆಶ್ಚರ್ಯ ಹುಟ್ಟಿಸಿತು. ಆದರೆ ಆ ವಿಶಾಲ ಮುಖಮಂಟಪದಲ್ಲಿ ನಾವು ದಣಿವಾರಿಸಿಕೊಳ್ಳುತ್ತಾ ಕೂತು ಅವರೊಂದಿಗೆ ಮಾತಾಡತೊಡಗಿದಾಗ ಬದುಕನ್ನು ಕುರಿತ ಅವರ ದ್ವಂದ್ವದ ಒಂದು ಸೆಳಕು ನನಗೆ ಸಿಕ್ಕಂತಾಯಿತು. ಒಮ್ಮೆ ಹಿಮಾಲಯಕ್ಕೆ (ಓಡಿ?) ಹೋಗಿ ಬಂದಿರುವ ಅವರು ಬಹುಬೇಗ (ಅಂದರೆ ಪೂರಾ ಮಾಗದೆ) ಬದುಕಿನ ಜಿಜ್ಞಾಸೆಯಲ್ಲಿ ಸಿಕ್ಕಿಕೊಂಡಿರುವವರು ಎನಿಸಿತು. ಆದರೆ ನಮ್ಮ ಒತ್ತಾಯದ ಮೇರೆಗೆ ಅವರು ತಮ್ಮ ತಂದೆಯಿಂದ ಕಲಿತ ಬೃಂದಾವನ ಸಾರಂಗ ರಾಗದ ಒಂದು ಝಲಕನ್ನು ಹಾಡಿ ತೋರಿಸಿದಾಗ ಇದು ಅವರನ್ನು ಮಾಗಿಸೀತು ಎಂದು ನನಗೆ ಅನ್ನಿಸದಿರಲಿಲ್ಲ.

ಈ ಮಧ್ಯೆ ನಮ್ಮ ಗೌಳೇರ್ ತಮ್ಮ ಕ್ಯಾಮರಾ ಹಿಡಿದುಕೊಂಡು ಅರಣ್ಯದ ಅಪರೂಪದ ಪಕ್ಷಿಗಳಿಗಾಗಿ ಅರಸುತ್ತಿದ್ದರು. ವಸಂತ್, ಅವರಿಗೆ ಬಿಡುವು ಮಾಡಿಕೊಂಡು ಬಂದರೆ ಈ ಪರಿಸರದಲ್ಲಿ ನೂರಾರು ವೈವಿಧ್ಯಮಯ ಪಕ್ಷಿಗಳನ್ನು ತೋರಿಸುವುದಾಗಿ ಹೇಳಿ ತಮ್ಮ ಪಕ್ಷಿವೀಕ್ಷಣೆಯ ಅನುಭವವನ್ನು ಅವರೊಂದಿಗೆ ಹಂಚಿಕೊಂಡರು.ಹಸಿವಾಗಿದ್ದ ನಮ್ಮನ್ನು ಮನೆಯೊಡತಿ ಊಟಕ್ಕೆ ಕರೆದು ನಿಜವಾಗಿಯೂ ಸರಳವಾಗಿದ್ದ ಊಟ ಬಡಿಸಿದರು. ಅದರ ಒಂದೇ ವೈಭವ ಎಂದರೆ ಬೆಲ್ಲದ ಕರ್ಜಿಕಾಯಿ! ಮಿಕ್ಕಂತೆ ಅನ್ನದೊಂದಿಗೆ ಅಪ್ಪೆಮಿಡಿ ಸಾರು, ಶುಂಠಿ ತಂಬುಳಿ, ಬಾಳೆಕಾಯಿ ಕಾಯಿರಸ ಮತ್ತು ಗಟ್ಟಿ ಮೊಸರು. ಅಪ್ಪಟ ಹವ್ಯಕ ಊಟ. ನಾನಂತೂ ಅಪ್ಪೆಮಿಡಿ ರಸವನ್ನು ಲೊಟ್ಟೆ ಹೊಡೆದು ಸವಿದು ಸವಿತಾಗೆ ಅದರ ವಿವರ ತಿಳಿಯುವಂತೆ ಹೇಳಿದೆ.

ಉಂಡು ಸುಸ್ತಾದ ನಾವು ಸಂಜೆಯ ಕಾಫಿಗಾಗಿ ಹೊಕ್ಕದ್ದು ಹೆಗ್ಗೋಡಿನ ಗೆಳೆಯ ಕುಲಕರ್ಣಿಯವರ ಮನೆಗೆ. ಅಲ್ಲಿ ಮಂಡಕ್ಕಿ-ಮೆಣಸಿನ ಕಾಯಿ ಸವಿದು ಶಿವಮೊಗ್ಗ ಮುಟ್ಟಿದಾಗ ರಾತ್ರಿ ಒಂಭತ್ತಕ್ಕೆ ಹತ್ತು ನಿಮಿಷ ಬಾಕಿ ಇತ್ತು.

ಕೊನೆಗೊಂದು ಜೋಕು; ಮಹಾಂತೇಶರ ಪತ್ನಿ ರಾಜಶ್ರೀ ಹೇಳಿದ್ದಂತೆ!. ನಮ್ಮ ಮಾರ್ಗದಲ್ಲಿ ಈ ನಾಲ್ಕು ಊರುಗಳು ಸಿಗುತ್ತವೆ. ಅವನ್ನೊಮ್ಮೆ (ಬಸ್‌ಸ್ಟ್ಯಾಂಡಿನಲ್ಲಿನ ಬಸ್ ಏಜೆಂಟರಂತೆ) ಒಂದಕ್ಕೊಂದು ಜೋಡಿಸಿಕೊಂಡು ಓದಿ/ಕೂಗಿ ನೋಡೋಣ: ಭಾರೆ-ಸೀರೆ-ಯಲ್ಲಾ ಪೂರಾ (ಯಲ್ಲಾಪುರ)-ಕಳಚೆ!

-ಡಿ.ಎಸ್. ನಾಗಭೂಷಣ

ಪುಸ್ತಕಾವಲೋಕನ

ಪು: ಸಲ್ಮಾ ಮತ್ತು ಸುರಭಿ ಲೇ: ವೈದೇಹಿ ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು (೦೮೧೮೩-೨೬೫೬೪೬) ಪು: ೧೨೪ ಬೆಲೆ : ರೂ. ೧೨೫/-:

ಒಂದು ನಿಲುಗಡೆ ಕಂಡಿರುವ ಕಥೆಗಾರಿಕೆ?



ಇದು ಹಿರಿಯ ಕತೆಗಾರ್ತಿ ವೈದೇಹಿಯವರ ಏಳನೇ ಕಥಾ ಸಂಕಲನ. ಕನ್ನಡದ ಕಥೆಗಾರಿಕೆಯಲ್ಲಿ ತಮ್ಮದೇ ಛಾಪಿನಿಂದ ಹೆಸರಾಗಿರುವ ಇವರು 'ಕತೆ ಕತೆ ಕಾರಣ' ಎಂಬ ಈ ಹಿಂದಿನ ಕಥಾ ಸಂಕಲನದ ನಾಲ್ಕು ವರ್ಷಗಳ ನಂತರ ಹೊರ ತಂದಿರುವ ಈ ಸಂಕಲನದಲ್ಲಿ ಎರಡೋ ಮೂರೋ ಕಥೆಗಳ ಹೊರತಾಗಿ ಮಿಕ್ಕೆಲ್ಲವೂ ಬಹುಶಃ ತಮಗೆ ತೃಪ್ತಿ ತಾರದ ಕಾರಣದಿಂದಲೋ ಏನೋ ಈ ಹಿಂದಿನ ಸಂಕಲನಗಳಲ್ಲಿ ಸೇರದೆ ಹೋದ ಬರಹಗಳಾಗಿವೆ. ಬರಹ ಎಂಬ ಪ್ರಯೋಗವೇಕೆಂದರೆ, ಇವುಗಳಲ್ಲಿ ಕೆಲವು ಕಥೆಗಳ ಪ್ರಕಾರಕ್ಕೆ ಸೇರಿಸಲಾಗದ ಮುಕ್ತ ಶೈಲಿಯವೆಂದು ಕರೆಯಬಹುದಾದ ಬರಹಗಳಾಗಿವೆ. ಇಷ್ಟು ಹೇಳಿದ್ದೇ ಈ ಸಂಕಲನದ ಅವಲೋಕನದ ಸಾರಾಂಶವೂ ಆದೀತಾದರೂ, ವೈದೇಹಿಯವರು ನಮ್ಮ ಬಹುಮುಖ್ಯ ಲೇಖಕಿಯಾದುರಿಂದ ಸಂಕಲನವನ್ನು ವಿವರವಾಗಿ ನೋಡುವ ಅಗತ್ಯವಿದೆ ಎಂದು ಭಾವಿಸಿ ಈ ಮುಂದಿನ ಮಾತುಗಳು:

ಇಲ್ಲಿನ ಸಾಂಪ್ರದಾಯಿಕ ರೂಪದ ಕಥೆಗಳಲ್ಲಿ ವೈದೇಹಿಯವರ ಛಾಪಿನೊಂದಿಗೆ ನಮ್ಮ ಗಮನ ಸೆಳೆಯುವ ಕಥೆಗಳು ಎರಡೋ ಮೂರೋ ಮಾತ್ರ. ವೈದೇಹಿಯವರ ಛಾಪೆಂದರೆ ಸ್ತ್ರೀ ಸಮುದಾಯದ ದಿನನಿತ್ಯದ ಬದುಕಿನ ಸಂತೆಯ ಸಣ್ಣ ಮತ್ತು ಸೂಕ್ಷ್ಮ ವಿವರಗಳ ಮೂಲಕವೇ, ಸಾಮಾನ್ಯ ಕಣ್ಣಿಗೆ ಕಾಣದ ಹೆಣ್ಣಿನ ಸುಖ-ಸಂಕಟಗಳನ್ನು ಕಥೆಗಳನ್ನಾಗಿ ಕಟ್ಟುವುದು. ಇದರ ಒಂದು ಶ್ರೇಷ್ಠ ಉದಾಹರಣೆ ಇಲ್ಲಿನ 'ಹಿಂಸೆ' ಎಂಬ ಕಥೆ. ಮಗಳ ಹೇಳಿಕೊಳ್ಳಲಾಗದಂತಹ ದುರಂತದ ಕಾರಣ, ಯಾವ ಸಮಾರಂಭಗಳಿಗೂ ಹೋಗದ ತಾಯಿಯೊಬ್ಬಳು ಬಹು ಆತಂಕದಿಂದಲೇ ಹತ್ತಿರದ ಸಂಬಂಧಿಯೊಬ್ಬರ ಕುಟುಂಬದ ಮದುವೆಗೆ ಬಂದಿದ್ದಾಗ ಊಟದ ಸಂದರ್ಭದಲ್ಲಿ ದೂರದ ಸಂಬಂಧಿಯೊಬ್ಬಳು ಆ ದುರಂತದ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುವ ನೆಪದಲ್ಲಿ ಅದನ್ನು ಕೆದಕುವ ಮೂಲಕ ಆ ತಾಯಿಯ ಮನಸ್ಸಿನಲ್ಲಿ ಸೃಷ್ಟಿಸುವ ಸೂಕ್ಷ್ಮ 'ಹಿಂಸೆ'ಯ ಸೂಕ್ಷ್ಮ ಚಿತ್ರಣ ಇಲ್ಲಿದೆ. ಇದರ ಜೊತೆಗೇ ಇಂತಹ ಹಿಂಸೆ ಸೃಷ್ಟಿಸಬಲ್ಲ ಒಂದು ಮಹಿಳಾ ಪಾತ್ರದ ಸೃಷ್ಟಿಯೂ ಇಲ್ಲಿ ನಮ್ಮ ಗಮನ ಸೆಳೆಯುತ್ತದೆ. ಈ ಪಾತ್ರದ ಪ್ರವೇಶ ಮತ್ತು ನಿರ್ಗಮನದ ನಿರೂಪಣೆ ಹಾಗೂ ಊಟ ಬಡಿಸುವುದರ ಮತ್ತು ಊಟದ ವಿವರಗಳ ವರ್ಣನೆಯ ಕ್ರಮದಲ್ಲೇ ಕಥೆಯ ಪರಿಣಾಮವನ್ನು ಹೆಣೆದಿರುವುದರಲ್ಲಿ ಕಾಣುವ ಕಲೆ ಉತ್ಕೃಷ್ಟ ಕಥೆಗಾರಿಕೆಯ ದ್ಯೋತಕದಂತಿದೆ.

ಈ ಕಥೆಯನ್ನು ಬಿಟ್ಟರೆ ಕಲೆಗಾರಿಕೆಯಲ್ಲಿ ಇದರ ಹತ್ತಿರಕ್ಕೂ ಬರುವ ಯಾವ ಕಥೆಯೂ ಇಲ್ಲಿಲ್ಲ. ಆದರೂ 'ಅಗೋಚರರು' 'ಅವಶೇಷ' 'ಸಿಕ್ಕಿಬಿದ್ದವರು', ಮತ್ತು 'ಪೇಟಿಯೊಳಗೊಂದು ಮನೆಯ ಮಾಡಿ' ಕಥೆಗಳಲ್ಲಿ ಸ್ಥೂಲವಾದುದಾದರೂ ಒಂದು ಚೆಂದಗಾರಿಕೆ ಕಾಣಿಸುತ್ತದೆ. 'ಅಗೋಚರರು' ಕಥೆಯ ವೆಂಕತ್ತೆಯ ಪಾತ್ರ ಲೋಕದ 'ಡೊಂಕು'ಗಳಿಗೆ ಒಂದು ತೆರೆ ಎಳೆದುಕೊಂಡಂತೆ ತನ್ನದೇ ಮುಗ್ಧ ಲೋಕಪ್ರೀತಿಯಲ್ಲಿ ಮುಳುಗಿ ಬದುಕುತ್ತಿರುವ ವಿಶಿಷ್ಟ ಪಾತ್ರವಾಗಿ ಗಮನ ಸೆಳೆಯುತ್ತದೆ. ಈ ಪಾತ್ರ ಸೃಷ್ಟಿಯಾಗಿರುವುದೇ ವೈದೇಹಿಯವರ ಹದವರಿತ-ಪ್ರೀತಿಯ ಗೆರೆ ದಾಟದ-ಪರಿಹಾಸ್ಯದ ಕುಶಲ ಹೆಣಿಗೆಯಲ್ಲಿ ಎಂಬುದು ಈ ಕಥೆಯ ಹೆಗ್ಗಳಿಕೆ. 'ಅವಶೇಷ' ಕೂಡ ಇಂತಹುದೇ ವಿಚಿತ್ರ ಸ್ವಭಾವದ-ಪ್ರೀತಿಯ ಉತ್ತುಂಗದಲ್ಲಿ ಮಾತ್ರ ತನ್ನ ವ್ಯಕ್ತಿತ್ವದ ಡೊಂಕನ್ನು ಕಳೆದುಕೊಳ್ಳಬಲ್ಲ ಮದುಕಿಯೊಬ್ಬಳ ಸರಳ ಕಥೆ. 'ಸಿಕ್ಕಿಬಿದ್ದವರು' ಕಥೆಯೂ ಅಸಹಾಯಕತೆ-ಕ್ರೌರ್ಯ-ಸ್ವಾರ್ಥಗಳನ್ನು ಪ್ರದರ್ಶಿಸುವ ಪಾತ್ರಗಳನ್ನು ಬಾಳಿನ ಅವಿಷದಮಯ ಜಾಲದಲ್ಲಿ ಸಿಕ್ಕಿಕೊಂಡವರನ್ನಾಗಿ ಕಂಡರಿಸಿರುವ ಅರೆ ತಟಸ್ಥ-ಅರೆ ಸಹಾನುಭೂತಿಯ ಸಹಜ ದ್ವಂದ್ವ ನೋಟದಿಂದ ಗಮನ ಸೆಳೆಯುತ್ತದೆ. 'ಪೇಟಿಯೊಳಗೊಂದು ಮನೆಯ ಮಾಡಿ' ವೈದೇಹಿಯವರ ಎಂದಿನ ಮಹಿಳಾ ಪಾತ್ರಗಳ ಸಂತೆಯಿಂದ ದೂರವಾದ, ಆದರೆ ಹೆಣ್ತನದ ವಿಶೇಷತೆಯನ್ನು ಸೂಚಿಸುವ ಕಥೆ. ಪೇಟೆ ಜೀವಿಯ ಮಕ್ಕಳ ಸಹಜ ಸಂಭ್ರಮದ ಆಟಪಾಠಗಳಿಗೆ ಕಂಟಕವಾದೀತೆಂದು (ವಿದೇಶದಲ್ಲಿರುವ ತಮ್ಮ ಮಗನ) ಮನೆಯನ್ನು ದೊಡ್ಡ ಮೊತ್ತದ ಬಾಡಿಗೆಯಲ್ಲಿ ಭವ್ಯ ಹೋಟೆಲೊಂದನ್ನಾಗಿ ಮಾರ್ಪಡಿಸಲು ತಮ್ಮ ಪತಿಯ ಪೂರ್ಣ ಒಪ್ಪಿಗೆಯೊಂದಿಗೆ ನಡೆದಿರುವ ಎಲ್ಲ ಸಿದ್ಧತೆಗಳನ್ನೂ ತಡೆದು ನಿಲ್ಲಿಸುವ 'ಯಜಮಾನತಿ'ಯಲ್ಲಿನ ತಾಯ್ತನವನ್ನು ಸಾರುವ ಈ ಕತೆಯನ್ನು ಅದರ ಸಂದೇಶಕ್ಕಾಗಿ ಮೆಚ್ಚುವಂತಿದ್ದರೂ ಕತೆಯಾಗಿ ಇದು ಒಳಗಿನ ವಿವರಗಳ ಪರಿಣಾಮಕ್ಕಿಂತ ಹೆಚ್ಚು ಕತೆಯ ಹೊರಗಿನ ಭಾವುಕತೆಯನ್ನೇ ನಂಬಿದಂತಿದೆ. ಹೀಗಾಗಿ ಕತೆ 'ನಿಜ'ವೆನ್ನಿಸದೆ ಚಪ್ಪಾಳೆಗೆ ಮಾತ್ರ ಅರ್ಹವೆನ್ನಿಸುತ್ತದೆ,

ಮಿಕ್ಕಂತೆ 'ಕಾಶಿಯಕ್ಕ' ಗಂಡನಿಂದ ಹಿಂಸೆಗೆ ಒಳಗಾದ ಹೆಣ್ಣೊಬ್ಬಳು 'ದೇವಿ'ಯ ಸನ್ನಿಧಿಯಲ್ಲಿ ಎದುರಿಸುವ ತನಿಖೆಯಲ್ಲಿನ ಹಿಂಸೆಯ ತುತ್ತ ತುದಿಯಲ್ಲಿ ಸ್ವತಃ 'ದೇವಿ'ಯಾಗಿ ಕಾಣುವ ಮೂಲಕ ಗಂಡನನ್ನು ಪಳಗಿಸುವ ಕಥೆಯಲ್ಲಿ ಕಥೆಗಾರಿಕೆಯ ವಿಶೇಷವೇನೂ ಕಾಣುವುದಿಲ್ಲ. ಹಾಗೇ ಹದಿವಯಸ್ಸಿನಲ್ಲಿ ಊರಿನಿಂದ ಕಾಣೆಯಾದ ತನ್ನ ಆಪ್ತ ಗೆಳತಿಯೊಬ್ಬಳು ಮುಂಬೈನ ವೇಶ್ಯಾವಾಟಿಕೆ ಸೇರಿ ಅಲ್ಲಿಂದ ಬಿಡುಗಡೆ ಹೊಂದಿ ಮತ್ತೆ ಕುಟುಂಬದ ಸಂಪರ್ಕಕ್ಕೆ ಬಂದಾಗ, ಆ ಕುಟುಂಬದ ಒತ್ತಾಯದ ಮೇಲೆ ಅವಳನ್ನು ಕಾಣಲು ಹೋದಾಗ ಅವಳು ವಾಪಸ್ ಬರಲು ನಿರಾಕರಿಸುವ ಸಂದರ್ಭ ನಮ್ಮ 'ಪ್ರೀತಿಪೂರ್ವಕ' ವೇಷ ತೊಟ್ಟ ಸಾಮಾಜಿಕ ಸಂಬಂಧಗಳಲ್ಲಿ ಅಡಕವಾಗಿರುವ ಸೂಕ್ಷ್ಮ ಮಡಿ-ಮೈಲಿಗೆಗಳನ್ನೂ ಅದನ್ನು ಆ ನತದೃಷ್ಟ ಹುಡುಗಿ ಅರಿತಿರುವ ಬಗೆಯನ್ನು ಕಂಡೂ ಕಾಣದಂತೆ ಹೇಳುವ 'ಕತೆಯಾಗಲೊಲ್ಲದ ಕತೆ' ಹುಡುಗಿ ಊರಿನಿಂದ ಕಾಣೆಯಾದ ಬಗೆಯನ್ನು ಹೇಳಲಾಗದೆ ಅಪೂರ್ಣವೆನ್ನಿಸುತ್ತದೆ. 'ಆ್ಯಕ್ಸಿಡೆಂಟ್' ಸಮಾಜದ ದುಷ್ಟತನವನ್ನಷ್ಟೇ ನೋಡುವ ವೈದೇಹಿಯವರಂತಹ ಪಳಗಿದ ಕಥೆಗಾರರಿಂದ ನಿರೀಕ್ಷಿಸದ ಒಂದು ಸರಳೀಕೃತ ಏಕಪಕ್ಷೀಯ ಕಥೆ. ಕಥೆಯ ಆವರಣ, ಅದನ್ನು ಕಟ್ಟಿಕೊಡಲು ಬಳಸುವ ಮಾತುಗಾರಿಕೆಯೂ ಬರೀ ಜಾಣತನದ್ದು ಎನಿಸುತ್ತದೆ. ಇನ್ನು 'ಸಲ್ಮಾ ಮತ್ತು ಸುರಭಿ' ಸಮಕಾಲೀನ ಕೋಮು ಬಿಗುವನ್ನು ಹಿಂದು-ಮುಸ್ಲಿಂ ಗೆಳತಿಯರಿಬ್ಬರ ಧೀರ್ಘ ಕಾಲದ ನಂತರದ ಮರುಭೇಟಿಯ ಮಾತುಕತೆಯಲ್ಲಿ ಉಂಟಾಗುವ ಬಿಗುವಿನ ನೇರ ನಿರೂಪಣೆಯ ಸುಲಭ ಕಥೆಗಾರಿಕೆ ಎನ್ನಿಸಿಬಿಡುತ್ತದೆ.


ಇನ್ನು ಇಲ್ಲಿನ ಕಥೆಗಳೆಂದು ಕರೆಯಲಾಗದ ಮುಕ್ತ ಶೈಲಿಯ ಬರಹಗಳ ಪೈಕಿ 'ನಕ್ಕೋ...ನಾ...', 'ಪಯಣದಲ್ಲಿ ಹುಡುಗಿ', 'ಇಬ್ಬರು ಹುಡುಗಿಯರು' ಹಾಗೂ 'ನೆಲ ಮತ್ತು ಮೌನ' ತಮ್ಮ ಸಂವೇದನಾಶೀಲ ವಿವರಗಳ ಮೂಲಕ ಒಂದಿಷ್ಟು ಜೀವಂತಿಕೆ ಪಡೆಯುತ್ತವಾವುದಾದರೆ, 'ಸಾಗುತಿದೆ ದೋಣಿ, ಸಾಗುತಿರುವಂತಿದೆ' ಬರೀ ಜಾಣ ಮಾತುಗಾರಿಕೆಯ ಜೋಡಣೆಯಂತಿದ್ದು ನಿರಾಶೆ ಹುಟ್ಟಿಸುತ್ತದೆ.

ಈ ಸಂಕಲನವನ್ನು ಒಟ್ಟಾರೆ ನೋಡಿದಾಗ ವೈದೇಹಿಯವರ ಕಥೆಗಾರಿಕೆ ಒಂದು ನಿಲುಗಡೆಗೆ ಬಂದಿರಬಹುದೆ? ಎಂಬ ಪ್ರಶ್ನೆ ಮೂಡುತ್ತದೆ. ಆದರೆ ಇವರಂತಹ ಅನನ್ಯ ಪ್ರತಿಭೆಯ ಬಗ್ಗೆ ಇಂತಹ ಪ್ರಶ್ನೆ ಸುಳ್ಳಾಗುವ ಸಂಭವವೇ ಹೆಚ್ಚು. ಹಾಗೇ ಆಗಲಿ ಎಂಬುದು ನಮ್ಮ ಆಶಯ.

-ಡಿ.ಎಸ್. ನಾಗಭೂಷಣ

ಪು: **ಬೆಳ್ಳಿ ಮೈಹುಳ** ಲೇ: ಜ.ನಾ. ತೇಜಶ್ರೀ ಪ್ರ: **ವೈಷ್ಣವಿ ಪ್ರಕಾಶನ**, ಕೆ. ಗುಡದಿನ್ನಿ(೯೬೨೦೧೭೦೦೨೭) ಪು: ೧೧೫ ಬೆ: **ರೂ.೧೨೦/-**

ಭಾವಗೀತಾತ್ಮಕ ಕತೆಗಳು



ಕವಿ-ಅನುವಾದಕಿ ಜ.ನಾ. ತೇಜಶ್ರೀ ಅವರ ಎಂಟು ಕತೆಗಳ ಹೊಸ ಸಂಕಲನ 'ಬೆಳ್ಳಿಮೈ ಹುಳ'. ಸಂಕಲನದ ಕತೆಗಳು ಗಾತ್ರದ ದೃಷ್ಟಿಯಿಂದ ಮಾತ್ರ ಭಿನ್ನವಾಗಿರದೆ ವಸ್ತು, ಕಟ್ಟುವ ಕ್ರಮ ಹಾಗೂ ಭಾಷೆಯ ಬಳಕೆಯಲ್ಲಿಯೂ ವೈವಿಧ್ಯ ಕಾಣಿಸುತ್ತದೆ. ಅತೀ ಸಣ್ಣಕತೆಯಿಂದ ನೀಳ್ಗತೆಯವರೆಗೆ ಈ ಹರಹು ಚಾಚಿಕೊಂಡಿದೆ. 'ಬಂಧನ' ಮತ್ತು 'ಬಿಡುಗಡೆ'ಗಳ ಸುತ್ತ ಇರುವ ಈ ಸಂಕಲನದ ಕತೆಗಳನ್ನು ವಿವಿಧ ರೂಪದಲ್ಲಿ ಹಿಡಿದಿಡುವ ಪ್ರಯತ್ನ ಮಾಡಲಾಗಿದೆ. ಕತೆ ಕಟ್ಟಲು ರೂಪಕಗಳ ನೆರವು ಪಡೆದಿರುವುದು ಹಾಗೂ ಮನುಷ್ಯ ಮಾತ್ರವಲ್ಲದೆ, ಪ್ರಾಣಿಗಳೂ ಪ್ರಮುಖ ಪಾತ್ರಗಳಾಗಿ ಕಾಣಿಸಿಕೊಳ್ಳುವುದು ಇಲ್ಲಿನ ಕತೆಗಳ ವಿಶೇಷ. ಹಾಗೆಯೇ ಇಲ್ಲಿನ ಕತೆಗಳಲ್ಲಿ ಬರುವ ಸ್ತ್ರೀಯರು 'ಸ್ವಂತ' ಅಸ್ತಿತ್ವ ಉಳ್ಳವರು. ತಮ್ಮಷ್ಟಕ್ಕೆ ತಾವೇ ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲವರು. ಈ ಅನನ್ಯ ಸ್ತ್ರೀ ಪಾತ್ರಗಳ ಸೃಷ್ಟಿ ಹಾಗೂ ನಿರ್ವಹಣೆ ಗಮನ ಸೆಳೆಯದೇ ಇರದು.

ಸಂಕಲನದ ಪ್ರಮುಖ ಹಾಗೂ ಅತಿದೊಡ್ಡ ಕತೆ 'ಬೆಳ್ಳಿಮೈ ಹುಳ'. ವೆಂಕಟರಮಣನ ಬದುಕಲ್ಲಿ ಬರುವ ಮೂವರು ಸ್ತ್ರೀಯರು. ಜಮೀಲ ಮೊದಲ ಹೆಂಡತಿಯಾದರೆ, ಸರಸಳದು ಎರಡನೇ ಸಂಬಂಧ. ಮಗಳು ಜಾನಕಿ.

ನಾಲ್ಕು ದಶಕಗಳ ಹಿಂದೆ ಕಂಡ ಜಮೀಲಳ ಮುಖ ವೆಂಕಟರಮಣನ ಮನಸ್ಸಿನಲ್ಲಿ ಈಗಲೂ ಅಚ್ಚೊತ್ತಿದಂತೆ ಉಳಿದಿದೆ. ಜಮೀಲಳ ಬಗೆಗೆ ಒಲವು- ಮದುವೆಯ ವರೆಗೂ

ವಿಸ್ತರಿಸಿತ್ತು. 'ಈ ಸಂಬಂಧ ಅಸ್ಥಿರ, ಬ್ಯಾಡ ಕನಪ್ಪ' ಎಂಬ ದೊಡ್ಡಣ್ಣನ ಮಾತುಗಳಿಗೂ ವೆಂಕಟರಮಣ ಸೊಪ್ಪು ಹಾಕಿರಲಿಲ್ಲ. ಮದುವೆಯ ನಂತರ ನಾಲ್ಕು ವರ್ಷಗಳ ದಾಂಪತ್ಯದ ಫಲವಾಗಿ ಎರಡು ಮಕ್ಕಳು ಹುಟ್ಟಿದವು. ವೆಂಕಟರಮಣನ ಜೊತೆಗೆ ಬದುಕು ನಡೆಸಲು ಹೆಣಗಾಡುವ ಜಮೀಲ ಆಡುವ 'ಬದುಕೋಕೆ ದುಡ್ಡು ಬೇಕು ನಿನ್ನ ಆದರ್ಶ ಗೀದರ್ಶ ಎಲ್ಲ ಆಮೇಲೆ.. ನಾನು ಕೇಳೋ ಪ್ರಶ್ನೆಗೆ ಉತ್ತರ ಹೇಳಲಿಕ್ಕಾಗದೆ ನೀನು ಹತಾಶೆ ಹೊರ ಹಾಕುತ್ತೀಯ. ತಾಕತ್ತಿಲ್ಲದ ಗಂಡಸು ನೀನು.. ಗಂಡ ಅನ್ನೋ ಅಹಂಕಾರ ನಿಂಗೆ.. ನನಗೂ ಸ್ವಾತಂತ್ರ ಇದೆ. ಅದನ್ನ ನೀಡು ಕೊಡಬೇಕಾಗಿಲ್ಲ. ನನಗೂ ನನ್ನದೇ ಬದುಕಿದೆ, ಆಸೆಗಳಿವೆ. ಇದೆಲ್ಲ ಸಾಕು ಅನ್ನಿಸಿದೆ ನಂಗೆ. ನಿನ್ನ ಮಕ್ಕಳನ್ನ ನೀನೇ ಸಾಕ್ಕೋ' ಎನ್ನುವ ಮಾತುಗಳು ಕೇವಲ ಅವಳ ವ್ಯಕ್ತಿತ್ವದ ಅನಾವರಣಕ್ಕೆ ಮಾತ್ರ ಸೀಮಿತವಾಗಿಲ್ಲ . ಮನೆಯಿಂದ ಹೊರ ನಡೆದ ಜಮೀಲ ಡೈವೋರ್ಸ್ ಪೇಪರ್ ಕಳಿಸಿ 'ಬಿಡುಗಡೆ' ಪಡೆಯುತ್ತಾಳೆ.

ವೆಂಕಟರಮಣನಿಗೆ ಎರಡನೆಯ ಪತ್ನಿಯಾಗಿ ಬಂದ ಸರಸ ಸೌಮ್ಯ ಸ್ವಭಾವದವಳು. ವೆಂಕಟರಮಣನ ಕ್ರೌರ್ಯ–ಹಿಂಸೆ–ದಾಳಿಗೆ ತುತ್ತಾಗುವವಳು. ಹಾಗೆಯೇ 'ನಿನ್ನೆ ಜಾನಕಿ ಹೇಳಿದ್ದರಲ್ಲಿ ಯಾವ ತಪ್ಪೂ ಇಲ್ಲ. ಯಾವ ಸತ್ಯದಿಂದ ಯಾರಿಗೂ ಸುಖವಿಲ್ಲವೋ ಆ ಸತ್ಯಗಳು ಕತ್ತಲೆಯಲ್ಲಿದ್ದರೆ ಒಳ್ಳೇದು' ಎಂದು ಹೇಳುವ ಧೈರ್ಯ ಹೊಂದಿದವಳು. ಹೀಗೆ 'ಅಸಹಾಯಕ' ವೆಂಕಟರಮಣ ಜಮೀಲ–ಸರಳ ಮೇಲೆ 'ಗಂಡ'ಸುತನ ತೋರಿಸುತ್ತಾನೆ. ಮಗಳು ಜಾನಕಿಯ ಮೂಲಕ ಅನಾವರಣಗೊಳ್ಳುತ್ತ ಹೋಗುವ ಈ ಕತೆಯ ಮತ್ತೊಂದು ಪ್ರಮುಖ ಪಾತ್ರ 'ಸಿಲ್ಕಿ'. ಕತೆಯುದ್ದಕ್ಕೂ ತನ್ನ 'ಅಸ್ತಿತ್ವ' ದಾಖಲಿಸುವ ಸಿಲ್ಕಿ ಕುರಿತ ಈ ವಾಕ್ಯಗಳು ಗಮನ ಸೆಳೆಯದೇ ಇರಲಾರವು.

'ಬಾವಿಕಟ್ಟೆಗೆ ಒರಗಿ ಸಿಲ್ಕಿ ಮಲಗಿದಲ್ಲೇ ಒರಗಿ ಪ್ರಾಣ ಬಿಟ್ಟಿತ್ತು. ಅದರ ನಿಶ್ಚಲ ಕಣ್ಣುಗಳಲ್ಲಿ ತುಂಬಿದ್ದ ಆತ್ಮಗೌರವವು ಜಾನಕಿಯನ್ನು ಇನ್ನಿಲ್ಲದಂತೆ ಕಲಕಿತು. ಸಿಲ್ಕಿಯನ್ನು ಕಳೆದುಕೊಂಡ ಸರಸ ಅಕ್ಷರಶಃ ದಂಗು ಬಡಿದು ಹೋದಳು. ಅದರ ಮುಖವನ್ನೇ ದಿಟ್ಟಿಸುತ್ತ ಕುಳಿತ ಸರಸಳಿಗೆ ಎಲ್ಲೋ ಹುಟ್ಟಿ ಇಲ್ಲಿಗೆ ಬಂದು ಸೇರಿ, ಸ್ವತಂತ್ರವಾಗಿ ತನ್ನ ಅಸ್ತಿತ್ವವನ್ನು ರೂಪಿಸಿಕೊಂಡ ಸಿಲ್ಕಿಯನ್ನು ನೆನೆದು ಗೌರವ ಉಕ್ಕಿಬಂತು. ಸ್ಫೂರ್ತಿಯ ಲವಲವಿಕೆ ಮೈಯೊಳಗೆಲ್ಲ ಹರಿದಾಡಿದಂತಾಗಿ ಸಿಲ್ಕಿ ತನ್ನೊಳಗೇ ಇರುವುದನ್ನು ಸರಸ ಅನುಭವಿಸಿದಳು.'

ಪುಸ್ತಕದ ಮಧ್ಯೆ ಅಪ್ಪಚ್ಚಿಯಾಗುವ ಬೆಳ್ಳಿಮೈ ಹುಳ ಮತ್ತು ಸಿಲ್ಕಿಯ ಪಾತ್ರಗಳು ಕತೆಯ ಅರ್ಥದ ಸಾಧ್ಯತೆಗಳು ವಿಸ್ತಾರವಾಗುವುದಕ್ಕೆ ಕಾರಣವಾಗುತ್ತವೆ.


ಈ ಸಂಕಲನದ ಮತ್ತೊಂದು ಪ್ರಮುಖ ಕತೆ 'ಕರ್ಫ್ಯೂ'. ಆಸ್ಪತ್ರೆಯಲ್ಲಿ ನಡೆಯುವ ಕತೆಯಲ್ಲಿ ಪಾತ್ರಗಳ ನೋವು–ಅಸಹಾಯಕತೆಗಳ ಚಿತ್ರಣ ಇದೆ. ಕೋಮುಗಲಭೆಯ ಕ್ರೌರ್ಯವನ್ನು ತಣ್ಣನೆಯ ಮಾತುಗಳಲ್ಲಿ ದಾಖಲಿಸುತ್ತ ಹೋಗುತ್ತದೆ. ಈ ಕತೆಯಲ್ಲಿನ 'ಈ ರಸ್ತೆ ನಮ್ಮ ಲೈಫ್ ತರ ಅಂತ. ಜನರಲ್ ಆಗಿ ಎಲ್ಲ ಅಂದ್ಕೊಳ್ಳೋ ಹಾಗೆ ಹುಟ್ಟು ಒಂದು ಕಡೆಯಿಂದ, ಸಾವು ಇನ್ನೊಂದು ಕೊನೆಯಿಂದ ಅಲ್ಲ. ಎಲ್ಲಿ ಹುಟ್ಟಿರುತ್ತೊ ಅಲ್ಲೇ ಅದರ ಕೊನೆನೂ ಇರುತ್ತೆ ಅಂತ? ಮಧ್ಯದ ಸಣ್ಣ ಸ್ಪೇಸ್ ಈ ಓಣಿ ಥರ, ಅದೇ ನಮ್ಮ ಲೈಫ್.' ಎಂಬ ವಾಕ್ಯಗಳು ಕತೆಯ ಒಟ್ಟು ಆಶಯ ಬಿಂಬಿಸುವಂತಿವೆ.

ಚಿಟ್ಟೆಗಳನ್ನು ಮುಕ್ತವಾಗಿ ಹಾರಿ ಬಿಡುವ 'ಏರೋಪ್ಲೇನ್ ಚಿಟ್ಟೆ' ಗಮನ ಸೆಳೆಯುತ್ತದೆ. ಈ ಸಂಕಲನದಲ್ಲಿ ಅತಿಸಣ್ಣಕತೆಗಳಾಗಿರುವ 'ಕಾಣುವ ಕಣ್ಕಟ್ಟಿಲ್ಲ','ನಿರ್ಧಾರ', 'ಬೇಟೆ', ಗ್ರಿಲ್ಸ್ ಚೌಕ, ಕುದಿಬಂದು ಕತೆಗಳು ಕವಿತೆಗಳನ್ನು ವಿಸ್ತರಿಸಿ ಬರೆದ ಗದ್ಯದ ತುಣುಕುಗಳಂತಿವೆ. ಭಾವಗೀತೆಯ ಓದಿನ ಅನುಭವ ಒದಗಿಸುವ ಕತೆಗಳಿವು.

–ದೇವು ಪತ್ತಾರ

ಪು: **ಸುಮ್ಮನೆ ಬಿದ್ದಿರುವ ಬಿಕ್ಕುಗಳು** ಲೇ: ಮೌಲ್ಯ ಸ್ವಾಮಿ ಪ್ರ: **ವಾಗರ್ಥ ಪ್ರಕಾಶನ** ಮೈಸೂರು(೯೮೦೧೧೮೮೧೪೨೩೬) ಪು: **೧೪೪** ಬೆಲೆ: ರೂ. ೧೩೦./–

ಬದುಕಿನ ಅರ್ಥ ಹುಡುಕುವ ಕವಿತೆಗಳು



ಮೌಲ್ಯ ಸ್ವಾಮಿಯವರು ತಮ್ಮ ಮೊದಲ ಸಂಕಲನವನ್ನು ಹೊರತಂದಿದ್ದಾರೆ. ಹೆಸರು, 'ಸುಮ್ಮನೆ ಬಿದ್ದಿರುವ ಬಿಕ್ಕುಗಳು'. ಯಾವುದೇ ವೈಚಾರಿಕ ಭಾರವನ್ನೂ ತುರುಕದೆ ಸಹಜವಾಗಿ ಕವಿತೆಗಳನ್ನು ಬರೆದಿದ್ದಾರೆ. ಹೀಗೆ ಹೇಳುವಾಗ ಇವರ ಜತೆಯಲ್ಲಿ ಮೊದಲ ಸಂಕಲನಗಳನ್ನು ಹೊರ ತಂದಿರುವ ಶ್ರುತಿ ಬಿ.ಆರ್. ಶಿಲ್ಪ ಬೆಣ್ಣೆಗೆರೆ, ಚಾಂದ್ ಪಾಷಾ ಮುಂತಾದವರ ಕವಿತೆಗಳು ನೆನಪಾದವು. ಈಚೆಗೆ ಕವಿತೆಯನ್ನು 'ಕಟ್ಟುವ' ಕುಶಲತೆ ಮಾಯವಾಗಿ 'ಹೇಳುವ' 'ಬರೆಯುವ' ದಾರಿಗಳು ಕಂಡುಬರುತ್ತಿವೆ. ಆದರೆ, ಇವರಿಗಿರುವ ಸವಾಲು ಅನುಭವಗಳನ್ನು ತಾಜಾತನದಿಂದ, ಸಹಜವಾಗಿ ಕುಶಲತೆಯಿಂದ 'ಕಟ್ಟುವ' ಬಗೆಯಲ್ಲಿ. ಇದು ಬರುವುದು ಕನ್ನಡ ಕಾವ್ಯ ಪರಂಪರೆಯನ್ನು ಅಭ್ಯಾಸ ಮಾಡುವುದರಿಂದಲೇ ಅನಿಸುತ್ತದೆ.

ಮೌಲ್ಯ ಅವರ ಕೆಲ ಕವಿತೆಗಳು ಇಷ್ಟವಾಗುವುದು ಸಹಜತೆಯಲ್ಲಿ ಅನುಭವಗಳು ಮಾಗಿದಂತೆ ಕಂಡು, ಮುಗ್ಧತೆಯನ್ನು ತನ್ನೊಳಗೆ ಮಗುಚಿಟ್ಟುಕೊಳ್ಳುವುದರಲ್ಲಿ. ಅನೇಕ ಕವಿತೆಗಳಲ್ಲಿ ಮೌನ ಹಾಡಿನ ಗುನುಗುಗಳ ಕೇಳಿಸುವಂತಿದೆ. ಇವು ಸಾಮಾಜಿಕ ಬದುಕಿನಲ್ಲಿ ಉಂಟಾದ ಸಂಕಟಗಳನ್ನು, ನೋವುಗಳನ್ನು ಅಭಿವ್ಯಕ್ತಿಸುತ್ತವೆ.

ನನ್ನೂರಿನ ನದಿಗಳಿಗೆ ಗಾಯ
ಮುಚ್ಚಿಟ್ಟುಕೊಂಡು ಹರಿಯುವುದು
ಕರಗತವಾಗಿಲ್ಲ'. ('ಒಂದು ಶ್ರುತಿ ತಪ್ಪಿದ ಚರಮ ಗೀತೆ')

ಒಕ್ಕೊರಳಿನ ಗಾನ ಎತ್ತರಾದಷ್ಟು
ಲೋಕಮಾನ್ಯರ ಲೋಕದ/
ನಾಜೂಕು ಕವಿಗಳ ಕಿವುಡು
ಆಳವಾಗುತ್ತಲೇ ಸಾಗುತ್ತಿದೆ. ('ಹೊಸ ನಾಳೆಯ ಗೀತೆ')

ಆದರೆ, ಇವೆಲ್ಲ ಹಳೆಯ ನುಡಿಗಟ್ಟುಗಳಂತೆ ಕಂಡರೂ ಗಟ್ಟಿಯಾದ ಆಲೋಚನೆಗಳ ಮಾಗುವಿಕೆಯ ಕಡೆಗೆ ಹೊರಳಿಕೊಳ್ಳುತ್ತಿವೆ. ಬದುಕಿನ ಸಂಕಟಗಳನ್ನು ತಮ್ಮದೇ ನುಡಿಗಟ್ಟುಗಳಲ್ಲಿ ಹೇಳುವಾಗ ಹದ ತಪ್ಪುವುದಿಲ್ಲ. ಕನಸು, ಮೌನ, ದುಗುಡ, ಪ್ರೀತಿ ಮುಂತಾದ ಗುಣಗಳು ಇಲ್ಲಿ ಕವಿತ್ವದ ಆಯಾಮಗಳನ್ನು ಪಡೆದುಕೊಂಡಿವೆ. ಹಾಗೆ ರೂಪು ಧರಿಸುವಾಗ ಸ್ವಂತಿಕೆಗೆ ಇಲ್ಲಿನ ಕವಿತೆಗಳು ಹಾತೊರೆಯುತ್ತವೆ. ಇಲ್ಲಿ ಬರುವ ಹೆಣ್ಣಿನ ಸ್ವಗತಗಳು ಅನುಭವಗಳ ಮತ್ತು ಬದುಕಿನ ಲೋಕವನ್ನೇ ಹೇಳುತ್ತವೆಯೇ ಹೊರೆತು ಸ್ತ್ರೀವಾದಿ ಎಂಬ ಹಣೆಪಟ್ಟಿಯಿಂದ ನೋಡುವುದಿಲ್ಲ. ಇಲ್ಲಿ ಬೆನ್ನುಡಿಯಲ್ಲಿ ಟೋಟೋ ಪುರಸ್ಕಾರದ ತೀರ್ಪುಗಾರರು ಇವರ ಕವಿತೆಗಳಲ್ಲಿ 'ದಲಿತ ಪ್ರಜ್ಞೆ' ಮತ್ತು 'ಪ್ರಕೃತಿಸಾರ'ವಿದೆ ಎಂದು ಷರಾ ಬರೆಯುತ್ತಾರೆ. ವಾಸ್ತವವಾಗಿ ಮೌಲ್ಯ ಅವರ ಯಾವ ಕವಿತೆಗಳಲ್ಲೂ 'ದಲಿತ ಪ್ರಜ್ಞೆ' ದೊಡ್ಡ ಮಟ್ಟದಲ್ಲಿ ಬರುವುದಿಲ್ಲ. ಆರಂಭದಲ್ಲೇ ಇವರಿಗೆ ಈ ಬಗೆಯ ಹಣೆಪಟ್ಟಿ ಕಟ್ಟುವುದು ಸರಿಯಲ್ಲವೇನೋ? ನಿದರ್ಶನಕ್ಕೆ, ಅವರ ಕೆಲ ಕವಿತೆಗಳಲ್ಲಿ ಮಾತು ಜೋರೆನಿಸಿದರೆ ಮಾತ್ರ ಈ ಅಭಿಪ್ರಾಯ ತಾಳಬಹುದೇ? ತಿಳಿಯುವುದಿಲ್ಲ. ಇಲ್ಲಿ ಇಷ್ಟವಾದ ಕವಿತೆಗಳನ್ನು ಪಟ್ಟಿಮಾಡುವೆ; 'ಹೊಸ ನಾಳೆಯಗೀತೆ' 'ನದಿ ಧ್ಯಾನ' ಅಮ್ಮನೆಂದರೆ' 'ಖರ್ಚಾಗದ ಮೌನಗಳು'. ಇವೆಲ್ಲ. ಕೆಲವು ಕಡೆ ಸಮಕಾಲೀನ ದುರಿತಗಳನ್ನು ಎದುರಿಸುವಾಗ ವಾಚ್ಯವಾದರೂ ಎಚ್ಚರ ವಹಿಸುತ್ತಾರೆ. ಕೆಲ ಪ್ರತಿಮಾ ಚಿತ್ರಗಳನ್ನು ಗಟ್ಟಿಯಾಗಿಯೇ ನೀಡುತ್ತಾರೆ.

'ಗಾಯದ ಕಣ್ಣಿನಲಿ ಸುಖದ ಚಿತ್ರ ಹುಡುಕಿದ್ದಕೋ
ರಕ್ತ ವಸುರುವ ನಾಲಿಗೆಯಲ್ಲೇ (ಹೊಸ ನಾಳೆಯ ಗೀತೆ)

'ಮೌನಗಳು ಖರ್ಚಾಗುವುದಿಲ್ಲ/
ಕೊಳ್ಳುವವರ ಜೊಗಸೆ
ಸಾವಿರ ತೂತು ಬಿದ್ದಿರುವಾಗ' ('ಖರ್ಚಾಗದ ಮೌನಗಳು')

ಅಷ್ಟಕ್ಕೂ ಸುಖವೆಂದರೆ
ಇದೇ ತಾನೆ
ನಾನು ನಿನ್ನ
ನೀನು ನನ್ನ
ತೋಳು ತಬ್ಬಿ ಅಳುವುದು ('ಸುಖವೆಂದರೆ')

ಈ ಬಗೆಯ ಕವಿತೆಗಳಲ್ಲಿ ಅವರ ನಿಜವಾದ ಕವಿತ್ವದ ಆಶಯಗಳ ಪ್ರಯತ್ನಗಳು ಅಡಗಿವೆ. ಇನ್ನೂ ಒಂದು ಹೆಜ್ಜೆ ಮುಂದುವರೆದು ಹೇಳುವುದಾದರೆ ಅವರ ಕೆಲ ಕವಿತೆಗಳ ಅಂತರ್ಯದಲ್ಲಿ ಬುದ್ಧನ ಚರಿತೆಯನ್ನು ನೆನಪಿಸುವ ಕವಿತೆಗಳಿವೆ. (ಒಂದು ಪುರಾತನ ಕನಸು) ಆದರೆ, ಅವು ಮಾಗುವ ಹಂತದಲ್ಲಿವೆ. ಇದಕ್ಕೆ ಸಾಕಷ್ಟು ಪರಿಶ್ರಮವೂ ಮತ್ತು ಪರಂಪರೆಯ ತಿಳುವಳಿಕೆಯೂ ಅನಿವಾರ್ಯ. ಕೆಲವು ಕಡೆ ಸಮಾಜ ವಿರೋಧಿ ಅಂಶಗಳನ್ನು ಹೇಳುವಾಗ ಅತಿಯಾಗಿ ಮಾತನಾಡು'ತ್ತಾರೆ. ಇಂಥ ಕಡೆ ಕವಿತೆಯಾಗುವುದಿಲ್ಲ. ಇದು ಬಂಡಾಯದ ಸವೆದ ದಾರಿಯಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಬೇಕಾಗುತ್ತದೆ. ಮೌಲ್ಯ ಅವರಿಗೆ ಈ ಅರಿವು ಇರುವುದರಿಂದಲೇ ಅಪ್ಪ, ಅಮ್ಮನ ಕುರಿತು ಸ್ವಗತ ಕ್ರಮಗಳಲ್ಲಿ ಪ್ರೀತಿಯನ್ನು ಸಮ ಪ್ರಮಾಣದಲ್ಲಿ ತರಬಲ್ಲರು:

ಅಪ್ಪಾ.. ನಿನ್ನ ದೇಹದ ತುಣುಕು ನಾನು
ನಿನ್ನ ಮೌಲ್ಯಗಳ ಪುಟ್ಟ ಒಡಲು' ('ಅಪ್ಪ')

ಒಟ್ಟಿನಲ್ಲಿ ಇವರ ಸಮಕಾಲೀನ ಕವಿಗಳು ಎದುರಿಸುತ್ತಿರುವ ಸವಾಲುಗಳನ್ನೇ ಮೌಲ್ಯ ಅವರು ಎದುರಿಸುತ್ತಿದ್ದಾರೆ; ಅದು, ಗದ್ಯಲಯವನ್ನು ಜೋಡಿಸುವ ಕುಶಲತೆಯಲ್ಲಿ. ಮಾತನ್ನೇ ಕಾವ್ಯವಾಗಿಸುವ ಚತುರತೆ ಇದ್ದರೂ ಅದು 'ಕವಿತ್ವ'ವಾಗಿ ದರ್ಶನವಾಗಬೇಕು. ಮೌಲ್ಯ ಮತ್ತು ಅವರ ಸಮಕಾಲೀನ ಕವಿಗಳಿಗೆ ಇದನ್ನು ಅರಿಯುವ ಶಕ್ತಿಯನ್ನು ಬೆಳೆಸಿಕೊಳ್ಳುವ ಸಾಮರ್ಥ್ಯವಿದೆ.

–ಸುರೇಶ ನಾಗಲಮಡಿಕೆ

ಪು: ಬಗೆದಷ್ಟೂ ಜೀವಜಲ(ಪ್ರಬಂಧಗಳು) ಲೇ: ಮಾಲತಿ ಪಟ್ಟಣಶೆಟ್ಟಿ ಪ್ರ: ಸಪ್ನಾ ಬುಕ್‌ಹೌಸ್, ಬೆಂಗಳೂರು(೪೦೧೧೪೪೫೫) ಪು: ೨೫೬ ಬೆ: ರೂ. ೧೨೦/-

ಸಾಮಾಜಿಕ ಕಳಕಳಿಯ ಸಂವೇದನಾಶೀಲ ಪ್ರಬಂಧಗಳು



ಹಿರಿಯ ಸಾಹಿತಿ ಮಾಲತಿ ಪಟ್ಟಣಶೆಟ್ಟಿಯವರ 'ಬಗೆದಷ್ಟು ಜೀವ ಜಲ' ಇಪ್ಪತ್ತಾರು ಪ್ರಬಂಧಗಳ ಸಂಕಲನದಲ್ಲಿ ಪ್ರವಾಸದ ನೆನಪುಗಳು ಸಿಂಹಪಾಲು ಪಡೆದಿವೆ. **'ಸೂಚಿಪರ್ಣಿ ವೃಕ್ಷಗಳು ಹಸಿರು ಶಾಹಿಯಲ್ಲಿ ಯಾವುದೋ ಪ್ರೇಮಿ ಬರೆದ ಕವಿತೆಗಳಂತೆ'** ಕಾಣುವ ಅಮೇರಿಕಾದ ಕಾಡು, ಇನ್ನೊಂದೆಡೆ 'ಬಾ ಮಗಳೆ'ಎಂದು ಕೈಬೀಸಿ ಕರೆಯುವ ವಿಶಾಲವಾದ ಪ್ಯಾಸಿಫಿಕ್ ಮಹಾಸಾಗರ, ಸ್ವಚ್ಛ, ದಳ್ಳಾಳಿ ಮುಕ್ತ ಕೃಷಿ ಮಾರುಕಟ್ಟೆ, ಲಿಬರ್ಟಿ ಸ್ಟ್ಯಾಚ್ಯು, ಮತ್ತು ಮಲೇಷಿಯಾದ ತಾಳೆ ಎಣ್ಣೆ, ಕೌಲಾಲಂಪುರದ ಗೋಪುರ, ಇವುಗಳನ್ನು ಕುರಿತ ಆಪ್ತ ನಿರೂಪಣೆಯಿದೆ. ಕತೆಗಳಂತೆ ಓದಿಸಿಕೊಳ್ಳುತ್ತವೆ. ಪ್ರಕೃತಿಯೇ ಮನೆ, ತಾಯಿ, ಗುರು, ಪಾಠಶಾಲೆ ಎಂದು ಪ್ರಕೃತಿಯನ್ನು ಆರಾಧಿಸಿದ್ದಾರೆ. (ಪ್ರಕೃತಿಯಾರಾಧನೆಯೆ ಪರಮನಾರಾಧನೆ □ಕುವೆಂಪು)

ಧಾರವಾಡದ ಕಲೆ-ಕಲಾವಿದರು, ಕವಿ-ಸಾಹಿತಿಗಳ, ಸಾಹಿತ್ಯ-ಸಂಸ್ಕೃತಿಯನ್ನು ಪರಿಚಯಿಸುವ ಪ್ರಬಂಧಗಳು ಧಾರವಾಡದ ಭಾಷಾ ಸೊಗಡಿನಿಂದ ಮುದನೀಡುತ್ತವೆ.

'ನೆನಪುಗಳೇ ನೀವೆಂದೂ ಕರಗದಿರಿ' ಮತ್ತು 'ಜೋನ್ ಆಫ್ ಆರ್ಕ್' ಈ ಎರಡು ದೀರ್ಘ ಪ್ರಬಂಧಗಳನ್ನು ಹೊರತು ಪಡಿಸಿ ಉಳಿದವು ಪುಟ್ಟ ಪ್ರಬಂಧಗಳಾಗಿವೆ.

ಇಲ್ಲಿಯ ಪ್ರಬಂದಗಳು 'ವೈಚಾರಿಕ, ಭಾವನಾಪ್ರಧಾನ, ಲಲಿತ-ಹರಟೆ ಮತ್ತು ಪ್ರವಾಸದಲ್ಲಿ ಬರೆದ ಪ್ರಬಂಧಗಳು' ಎಂದು ಲೇಖಕರು ತಮ್ಮ ಮಾತುಗಳಲ್ಲಿ ಹೇಳಿದ್ದಾರೆ.

'ನೆನಪುಗಳೇ ನೀವೆಂದೂ ಕರಗದಿರಿ', 'ನೆನಪು ಗಂಧರ್ವ' ಆತ್ಮ ವೃತ್ತಾಂತದಂತೆ ಇದ್ದು, ಬಾಲ್ಯದ ನೆನಪುಗಳನ್ನು ಇಲ್ಲಿ ಮೆಲುಕುಹಾಕಿದ್ದಾರೆ. ಮಧುರ ಕ್ಷಣಗಳನ್ನು 'ಹುಚ್ಚು ಹುಡುಗಿ'ಯಂತೆ ಪ್ರೀತಿಯ ತೀವ್ರತೆಯ ವಿರಹದ ನೋವುಗಳೆ ನೀವೆಂದು ಕರಗದಿರಿ ಎಂದು ನೆನಪಿನ ಬೆಳದಿಂಗಳಿಗೆ ಒಂದು ಸಲಾಮ್ ಹೇಳಿದ್ದಾರೆ. ಶಾಲೆಯಲ್ಲಿ ಜಾನ್ ಕೀಟ್ಸ್ ಕವಿಯ 'ಲಾ ಬೆಲ್ಲೆ ಡೇಮ್ ಸಾನ್ಸ್ ಮರ್ಸಿ' ಕವಿತೆ ಕಲಿಸಿದ ಅಧ್ಯಾಪಕರ ಬಗೆಗಿನ 'ಪ್ರೀತಿ' ವಯೋಸಹಜವಾದ ಭಾವನೆಗಳ ಪ್ರತೀಕದಂತಿದೆ. ರಜೆಯನ್ನು ಮುಗಿಸಿ ಒಂದನೇ ತಾರೀಖಿನಂದು ಶಾಲೆಗೆ ಹೊರಟಾಗ 'ಕಣ್ಣುಗಳಲ್ಲಿ ಕನಸುಗಳನ್ನು ತುಂಬಿಕೊಂಡು ರಾಜಕುಮಾರನೊಂದಿಗೆ(ಅಧ್ಯಾಪಕರೊಂದಿಗೆ) ನರ್ತಿಸಲು ಹೊರಟ ಸಿಂಡ್ರೆಲಾಳ (ಲೇಖಕಿ) ಮನಸ್ಥಿತಿ ನನ್ನದಾಗಿತ್ತು'. ಬದುಕಿಗೆ ಪ್ರೇರಣೆಯಾಗಿದ್ದ ಅಧ್ಯಾಪಕರು ಹುಟ್ಟಿಸಿದ ಭರವಸೆಯಿಂದಾಗಿ 'ನಾನು ಈವರೆಗೆ ಬಂದು ತಲುಪಿದ್ದೇನೆ'. ಎಂದು ನಂಬಿದ್ದ ಲೇಖಕಿಗೆ ಬೇರೆಡೆಗೆ 'ಟ್ರಾನ್ಸ್‌ಫರ್ ಆದಾಗ ನನಗೆ ಒಂದು ಮಾತೂ!' ಹೇಳದೆ ಹೋದಿರಿ 'ಕತ್ತಲೆಯ ಜಗತ್ತಿನಲ್ಲಿ ನೀವು ನನ್ನನ್ನು ಬಿಟ್ಟು ಮಾಯವಾದಂತೆ ಅನ್ನಿಸಿತು .. ಜೋರಾಗಿ ಬಿಕ್ಕಿಬಿಕ್ಕಿ ಅತ್ತೆ' ಎನ್ನುವ ಶಿಷ್ಯೆಗೆ ಹತ್ತು ವರ್ಷಗಳ ನಂತರ ಭೇಟಿಯಾದ ಅಧ್ಯಾಪಕರು 'ನಿನ್ನಂಥ ವಿದ್ಯಾರ್ಥಿನಿ ಬೇರೆ ಎಲ್ಲಿಯೂ ಸಿಗಲಿಲ್ಲ ಮಗೂ' ಎಂದು ಸಮಾಧಾನಿಸುತ್ತಾರೆ. 'ಹುಚ್ಚು ಹುಡುಗಿ, ನಿನ್ನನ್ನು ನಾನು ಮರೆಯಲು ಸಾಧ್ಯವಿಲ್ಲ' ಎಂದು ಸಾಂತ್ವನ ಹೇಳಿ ಶಿಕ್ಷಕರು ಹೊರಟು ಬಿಟ್ಟರು. ಆಗ 'ನಾನು ಹೇಳಬೇಕಿತ್ತು ನಿಮ್ಮನ್ನು ನಾನು ಬಹಳ ಪ್ರೀತಿಸುತ್ತೇನೆ' ಎಂದು, ಆದರೆ ಹೇಳುವುದಿಲ್ಲ. ಲೇಖಕಿ ಕೊನೆಗೆ ಹೇಳುತ್ತಾರೆ 'ಯಾರೋ ನಮ್ಮನ್ನು ಪ್ರೀತಿಸುತ್ತಾರೆ ಎನ್ನುವ ನಂಬುಗೆಯೇ ಎಷ್ಟು ಚೆಂದ!'. ಆದರೆ ಅಧ್ಯಾಪಕರು ಯಾರು ಎನ್ನುವ ಕುತೂಹಲಕ್ಕೆ ಉತ್ತರವಿಲ್ಲ!


ಅಮೇರಿಕಾದ 'ಸ್ವಾತಂತ್ರ್ಯ ದೇವಿಯ ಮೂರ್ತಿ'(ಸ್ಟ್ಯಾಚ್ಯೂ ಆಫ್ ಲಿಬರ್ಟಿ)ಯ ಭವ್ಯತೆಯನ್ನು ನಮ್ಮ ಕಣ್ಣುಗಳಿಗೂ ಕಾಣಿಸಿದ್ದಾರೆ. 'ಮಾವುಮಯವೀ ನನ್ನ ಮನೆ, ಈ ನನ್ನ ಮನೆ' ಬೇಸಿಗೆಯನ್ನು ಪರಿಚಯಿಸುವ ರೀತಿ ಅಪರೂಪದ್ದು. ಕಾವ್ಯಮಯವಾಗಿದೆ. 'ಭಾನುವಾರ ಬಂತಮ್ಮ', 'ಹೌದು ಕಾಲ ಬದಲಾಯಿತು', 'ಇಂತದೊಂದು ಸಾಹಿತ್ಯ ಕಾರ್ಯಕ್ರಮ', ಇವು ತಿಳುಹಾಸ್ಯದ ಲಘು ಹರಟೆಗಳು. 'ಅಜ್ಜಿಯ ಉಪ್ಪಿನ ಕಾಯಿಯ ಸಂಭ್ರಮ' ಒಂದು ಧಾರ್ಮಿಕ ಕಾರ್ಯಕ್ರಮದ ಹೊಸ ಅನುಭವವನ್ನು ಓದುಗರಿಗೆ ನೀಡುತ್ತದೆ.ಆಫ್ ಆರ್ಕ್' ಪ್ರಬಂಧ ದೇಶ ಭಕ್ತಿಯ ಜೋತಿ ಬೆಳಗಿ ಫ್ರಾನ್ಸ್‌ಗೆ ಸ್ವಾತಂತ್ರ್ಯ ಗೆದ್ದುಕೊಟ್ಟ ಬಾಲೆಯ ಚರಿತಾರ್ಹ ಸಾಹಸಗಾಥೆ. ಒಂದು ಗಂಭೀರವಾದ ಪ್ರಬಂಧ.

ಒಟ್ಟಿನಲ್ಲಿ ಇಲ್ಲಿಯ ಪ್ರಬಂಧಗಳು ಸಾಮಾಜಿಕ ಸಂವೇದನೆಯಿಂದ, ಕಳಕಳಿಯಿಂದ ಕೂಡಿವೆ.

-ಟಿ.ಎಸ್. ದಕ್ಷಿಣಾಮೂರ್ತಿ

ಪು: ಬಾಬಾ ಸಾಹೇಬ ಮತ್ತು... (ಮಕ್ಕಳ ಕಥೆಗಳು) ಲೇ: ಡಾ.ಕಮಲಾ ಹಂಪನಾ ಪ್ರ: ಸಪ್ನ, ಬೆಂಗಳೂರು. (೪೦೧೧೪೪೫೫) ಪು: ೩೨೭ ಬೆ: ರೂ. ೨೫೦/-

ನಾಡಿನ ಪರಂಪರೆಯ ಮಹತ್ವವನ್ನು ಮನಗಾಣಿಸುವ ಕಥೆಗಳು



ಶಿಶು ಸಾಹಿತ್ಯದ ರಚನೆಯು ಸ್ವಾತಂತ್ರ್ಯ ಪೂರ್ವದಿಂದ ಆರಂಭಗೊಂಡು ಇಂದಿನವರೆಗೂ ತನ್ನದೇ ಆದ ಮಾರ್ಗವೊಂದನ್ನು ರೂಪಿಸಿಕೊಂಡು ಬೆಳೆದುಬಂದಿದೆ. ಸಂಶೋಧನ ಬರಹಗಳ ಮೂಲಕ ಪ್ರಸಿದ್ಧರಾದ ಡಾ. ಕಮಲಾ ಹಂಪನಾ ಅವರ ಮಕ್ಕಳ ಕಥೆಗಳ ಸಂಕಲನವಿದು. ಅವರ ಸಮಗ್ರ ಸಾಹಿತ್ಯ ಸಂಪುಟಗಳ ಮಾಲೆಯಲ್ಲಿ ಹನ್ನೆರಡನೆ ಸಂಪುಟವಾಗಿ ಅವರು ಈ ವರೆಗೂ ಬರೆದ ಮಕ್ಕಳ ಕಥೆಗಳು ಇಲ್ಲಿ ಸಮಗ್ರವಾಗಿ ಸಂಕಲಿತಗೊಂಡಿವೆ. ಈ ಸಂಪುಟದಲ್ಲಿ ಮೂವತ್ತಕ್ಕೂ ಹೆಚ್ಚು ಮಕ್ಕಳ ಕಥೆಗಳಿವೆ. ಪ್ರಾಣಿ, ಪಕ್ಷಿಗಳನ್ನು ಪಾತ್ರವನ್ನಾಗಿಸಿಕೊಂಡು ಕಥೆಯನ್ನು ಹೇಳುವ ಜನಪ್ರಿಯ ವಿಧಾನವಿದೆ. ಪ್ರಸ್ತುತ ಸಂಕಲನದ ಕಥೆಗಳು ಈ ಜಾಡಿನಲ್ಲಿ ಚಲಿಸದೆ ಸ್ವಂತ ದಾರಿಯನ್ನು ರೂಪಿಸಿಕೊಂಡು ವಿಭಿನ್ನವಾಗಿವೆ.

ಮಕ್ಕಳ ಕಥೆಗಳಿಗೆ ಜನಪದ ಇಲ್ಲವೇ ಕಾಲ್ಪನಿಕವಾದ ವಸ್ತುವನ್ನು ಆಯ್ದುಕೊಳ್ಳುವುದು ಸಾಮಾನ್ಯವಾಗಿದೆ. ಆದರೆ ಈ ಸಂಕಲನದಲ್ಲಿ ಪುರಾಣ, ಚರಿತ್ರೆ, ಧರ್ಮ, ಸಾಹಿತ್ಯಗಳನ್ನು ವಸ್ತುವನ್ನಾಗಿಸಿಕೊಂಡಿರುವುದು ಗಮನಸೆಳೆಯುತ್ತದೆ. ಈ ವಸ್ತುವಿನ ಆಯ್ಕೆಯ ಹಿಂದೆ ಕನ್ನಡ ನಾಡಿನ ಪರಂಪರೆ ಮತ್ತು ಸಾಂಸ್ಕೃತಿಕ ಮಹತ್ವವನ್ನು ಮಕ್ಕಳಿಗೆ ಮನಗಾಣಿಸುವ ಪ್ರಯತ್ನವಿದೆ. ಆ ಕಾರಣಕ್ಕೆ ಜನ್ನ, ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕಥೆ, ಮುಳಬಾಗಿಲು, ಚಿತ್ರದುರ್ಗದ ಪಾಳೆಗಾರರ ಚರಿತ್ರೆ, ಭರತೇಶ ವೈಭವ ಇತ್ಯಾದಿ ವೈವಿಧ್ಯಮಯ ವಸ್ತುಗಳನ್ನು ಒಡಲೊಳಗಿರಿಸಿಕೊಂಡಿದೆ. ಈ ವಸ್ತುಗಳಿಂದ ಇಲ್ಲಿನ ಕಥೆಗಳಿಗೆ ವಿಶಾಲವಾದ ಆಯಾಮ ಸಹಜವಾಗಿ ಪ್ರಾಪ್ತಿಸಿದೆ. 'ನೀತಿ'ಯನ್ನು ಹೇಳುವ ವಸ್ತುಗಳನ್ನು ಆಯ್ದು ಅದರ ಮೂಲಕ ಮೌಲ್ಯಗಳನ್ನು ಬೋಧಿಸುವ ಗುಣವನ್ನು ಮಕ್ಕಳ ಕಥೆಗಳಲ್ಲಿ ಸಾಮಾನ್ಯವಾಗಿ ಕಾಣುತ್ತೇವೆ. ಈ ಕಥೆಗಳಲ್ಲಿ ಇದರ ಅನುಸರಣೆಯಿಲ್ಲ. 'ನೀತಿ'ಯನ್ನು ಹೇಳುವುದರ ಕಡೆ ಹೆಚ್ಚು ಗಮನವಿಲ್ಲ. ನಾಡಿನ ಹಿರಿಮೆಯನ್ನು ಕಟ್ಟಿಕೊಡುವುದರ ಕಡೆ ಹೆಚ್ಚು ಗಮನವಿದೆ. ಹಾಗಾಗಿ ನೀತಿ, ಮೌಲ್ಯಗಳು ಸಾಂದರ್ಭಿಕವಾಗಿ ಪ್ರಕಟಗೊಳ್ಳುತ್ತವೆಯೇ ಹೊರತು ಪ್ರಧಾನವಾಗಿಯಲ್ಲ.

ಅಕ್ಕ ಮಹಾದೇವಿ, ಹೆಳವನಕಟ್ಟೆ ಗಿರಿಯಮ್ಮ, ಒನಕೆ ಓಬವ್ವ, ಗುಳ್ಳಕಾಯಜ್ಜಿ ಮುಂತಾದವರ ಕಥೆಗಳನ್ನು ಅಭಿವ್ಯಕ್ತಿಸುವ ಮೂಲಕ ನಾಡಿನ ಪರಂಪರೆ, ಸಂಸ್ಕೃತಿಯ ಸಂರಚನೆಯಲ್ಲಿ ಸ್ತ್ರೀಯರು ಮಹತ್ವದ ಪಾತ್ರವನ್ನು ವಹಿಸಿದ್ದಾರೆ ಎಂದು ಗುರುತಿಸುತ್ತಾರೆ. ಲಿಂಗ ಸಮಾನತೆಯನ್ನು ಈ ಕಥೆಗಳ ಮೂಲಕ ಕಟ್ಟಿಕೊಡುವ ಪ್ರಯತ್ನವಿದೆ. ಆದರೆ ಲಿಂಗಸಮಾನತೆಯ ಪ್ರಜ್ಞೆಯು ಸತ್ಯಭಾಮೆಯ ಕಥೆಯನ್ನು ಅಭಿವ್ಯಕ್ತಿಸುವಲ್ಲಿ ಸೋತಿದೆ. ಸತ್ಯಭಾಮೆಯನ್ನು ಸಿದ್ಧಮಾದರಿಯಲ್ಲಿ ಗ್ರಹಿಸಿ ಅವಳನ್ನು ಅಹಂಕಾರಿ ಎಂದು ಬಿಂಬಿಸುವ ಸರಳೀಕರಣವು ಇಲ್ಲಿದೆ. ಅವಳ ಅಂತರಂಗದ ಧ್ವನಿಯನ್ನು ಅರಿಯದಿದ್ದರು ತೊಂದರೆಯಿಲ್ಲ. ಆದರೆ ವ್ಯಂಗ್ಯವಾಗಿ ಕಾಣುವ ದೃಷ್ಟಿ ಉಚಿತವಾದುದಲ್ಲ. ಕಂಬದಮ್ಮ ಎಂಬ ಗರ್ಭಿಣಿಯು ಗರುಡಗಂಬಕ್ಕೆ ಬಲಿಯಾದುದನ್ನು ತ್ಯಾಗವೆಂಬಂತೆ ಬಿಂಬಿಸುವ ಅಸೂಕ್ಷ್ಮತೆಯಿದೆ.

ಮಕ್ಕಳನ್ನು ಆಕರ್ಷಿಸಲು ಕಥೆಯನ್ನು ರೋಮಾಂಚಕವಾಗಿ, ಕುತೂಹಲಕಾರಿಯಾಗಿ ನಿರೂಪಿಸುವ ವಿಧಾನವಿದೆ. ಇಲ್ಲಿ ಆ ವಿಧಾನ ಬಳಕೆಯಾಗಿದ್ದರೂ ಪರಿಣಾಮಕಾರಿಯಾಗಿಲ್ಲ. ಕಥೆಯ ಭಾಷೆಯು ಬಿಗಿಯಾಗಿರುವುದು ಇದಕ್ಕೆ ಕಾರಣವಿರಬಹುದು. ಕಥೆಯಲ್ಲಿ 'ಬ್ರಾಹ್ಮಣೋತ್ತಮರು' ಎಂಬ ಪದದ ಬಳಕೆಯಿದೆ, ಅಂಬೇಡ್ಕರ್‌ರ ಜೀವನಕಥನದಲ್ಲಿ ರಾಮ್‌ಜಿಯ ಕುಟುಂಬ ಮಾಂಸಾಹಾರ ಸೇವಿಸುತ್ತಿರಲಿಲ್ಲ ಎಂಬ ಮಾತುಗಳು ಬರುತ್ತವೆ. ಇವುಗಳ ಮೂಲಕ ಬ್ರಾಹ್ಮಣರು, ಮಾಂಸಾಹಾರ ಸೇವಿಸದವರು ಉತ್ತಮರೆಂದು ತರತಮ ಮೌಲ್ಯವನ್ನು ಪ್ರತಿಪಾದಿಸಿದಂತೆ ಆಗುವುದಿಲ್ಲವೆ? ಕಥೆಯಲ್ಲಿ ಈ ಪದ, ವಿಚಾರವನ್ನು ಹೇಳದಿದ್ದರೂ ಕಥೆಯ ಆಶಯಕ್ಕೇನೂ ಭಂಗವಾಗುತ್ತಿರಲಿಲ್ಲ. ಭರತೇಶ ವೈಭವದ ಕಥೆಯ ನಿರೂಪಣೆಯಲ್ಲಿಯೂ ಭರತನಿಗೆ ತೊಂಬತ್ತಾರು ಸಾವಿರ ಜನ ಪತ್ನಿಯರಿದ್ದರು ಎಂದು ಹೇಳುತ್ತಾರೆ. ಈ ಹೇಳಿಕೆಯ ಔಚಿತ್ಯವಾದರೂ ಏನು? ಇದನ್ನು ನಿರೂಪಿಸುವ ಅಗತ್ಯವಿತ್ತೆ ಎಂಬ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಮಕ್ಕಳಿಗೆ ಕಥೆಯನ್ನು ಹೇಳುವಾಗ ಅಸಮಾನತೆಯ ಯಾವ ಅಂಶವು ನುಸುಳದ ಎಚ್ಚರಿಕೆಯನ್ನು ವಹಿಸಬೇಕು. ನಿರೂಪಣೆಯಲ್ಲಿನ ಇಂತಹ ಕೆಲವು ಅಸೂಕ್ಷ್ಮ ಅಂಶಗಳನ್ನು ಹೊರತು ಪಡಿಸಿದರೆ, ಈ ಸಂಕಲನದಲ್ಲಿ ವೈವಿಧ್ಯಮಯವಾದ ಉತ್ತಮ ಕಥೆಗಳಿವೆ.

-ಸುಧಾಕರ ದೇವಾಡಿಗ ಬಿ

ಹೊಸ ಮನುಷ್ಯ'ದ ಎಲ್ಲ ಓದುಗರಿಗೂ
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ
ಶುಭಾಶಯಗಳು




ಅಬೀದಾ ಬೇಗಂ
ಮತ್ತು ಕುಟುಂಬ
ಬೆಂಗಳೂರು

ಹೊಸ ಮನುಷ್ಯ'ದ ಎಲ್ಲ ಓದುಗರಿಗೂ
ಅಂತಾರಾಷ್ಟ್ರೀಯ ಮಹಿಳಾ ಸಪ್ತಾಹದ
ಶುಭಾಶಯಗಳು



ಎಸ್.ಬಿ. ಶೋಭಾ
ಮತ್ತು ಕುಟುಂಬ
ಶಿವಮೊಗ್ಗ

ತಿಂಗಳ ಕೊನೆಯ ಸಾಲುಗಳು



ನಾವು ಹರಿಜನರು ಮಹಾತ್ಮ ಗಾಂಧಿ ಅವರನ್ನು ನಮ್ಮ ಸುಪ್ರೀಂ ಕೋರ್ಟ್ ಎಂದೂ, ಲೋಹಿಯಾ ಅವರನ್ನು ನಮ್ಮ ಅಡ್ವೋಕೇಟ್ ಜನರಲ್ ಎಂದೂ ಪರಿಗಣಿಸಿದ್ದೆವು. ಇವೊತ್ತು ನಾವು ಸಂಪೂರ್ಣ ಅಸಹಾಯಕರಾಗಿದ್ದೇವೆ. ನಮಗೀಗ ಸುಪ್ರೀಂ ಕೋರ್ಟೂ ಇಲ್ಲ, ಅಡ್ವೋಕೇಟ್ ಜನರಲ್ಲೂ ಇಲ್ಲ.

-ಬಾಬು ಜಗಜೀವನರಾಂ
(ಲೋಹಿಯಾ ನಿಧನರಾದ ಸಂದರ್ಭದ ಶ್ರದ್ಧಾಂಜಲಿ ಮಾತು)

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2019-21



ಇವರಿಗೆ \ To

250. ಡಿ.ಎಸ್. ನಾಗಭೂಷಣ
ಎಚ್.ಐ.ಜಿ.-5, 'ನುಡಿ', ಕಲ್ಲಹಳ್ಳಿ
ಬಡಾವಣೆ, ವಿನೋಬ ನಗರ,
ಶಿವಮೊಗ್ಗ–577 204

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)